ದುಡಿಯುವ ಜನರ ಪ್ರಾಣ ಮಿತ್ರ


ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 35 ಪುಟ 16 | ಆಗಸ್ಟ್ 28, 2016 | ರೂ. 10/-

web: www.janashakthi.co.in e-mail : js_weekly@yahoo.com






‘ರಾಜದ್ರೋಹ’ದ ರಾಜಕೀಯ ನಿಲ್ಲಿಸಿ



ತೆಂಗು ಬೆಳೆಗಾರರ ಗೋಳು



ಹೆಣ್ಮಕ್ಳೇ ಸ್ಟ್ರಾಂಗು ಗುರು



ಕಾಶ್ಮೀರದಲ್ಲಿ ಇನ್ನೆಷ್ಟು ರಕ್ತ ಹರಿಯಬೇಕು?




ಕಾಂ. ಆರ್. ಶ್ರೀನಿವಾಸ್ ಬಿಡುಗಡೆ



ದುಡಿಯುವ ಮಹಿಳೆಯರ ಸಮಾವೇಶ

ಸೆಪ್ಟೆಂಬರ್ 2 ಮುಷ್ಕರದತ್ತ....





‘ದನದ ಬಾಲ ನಿಮಗೇ ಇರಲಿ, ನಮಗೆ ಜಮೀನು ಕೊಡಿ’ ಉನಾದಲ್ಲಿ ಒಂದು ಭಿನ್ನ ಸ್ವಾತಂತ್ರ್ಯ ದಿನಾಚರಣೆ

ಇತ್ತ ನವದೆಹಲಿಯಲ್ಲಿ ಭಾರೀ ಭದ್ರತೆಯ ನಡುವೆ ಕೆಂಪುಕೋಟೆಯಲ್ಲಿ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಧ್ವಜಾರೋಹಣ ಮಾಡಿ ತಮ್ಮ 94 ನಿಮಿಷಗಳ ಅಮೋಘ ಭಾಷಣ ಮಾಡುತ್ತಿದ್ದಾಗ ಅವರದ್ದೇ ‘ಮಾದರಿ’ ರಾಜ್ಯದಲ್ಲಿ ಆ ಮಾದರಿಯ ಸುತ್ತ ಹೆಣೆದ ಮಿಥ್ಯೆಯನ್ನು ಬಯಲಿಗೆಳೆದ ದಲಿತರ ಒಂದು ಬೃಹತ್ ಸಭೆಯಲ್ಲಿ ಹೈದರಾಬಾದ್ ವಿಶ್ವವಿದ್ಯಾಲಯದ ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾ ತಾಯಿ ರಾಧಿಕಾ ವೇಮುಲಾ ತ್ರಿವರ್ಣ ಬಾವುಟವನ್ನು ಹಾರಿಸಿದರು. ಅಹಮದಾಬಾದಿನಿಂದ ಸುಮಾರು ನಾಲ್ಕು ನೂರು ಕಿಲೋಮೀಟರ್ ನಡೆದು ಬಂದಿದ್ದ ಪಾದಯಾತ್ರಿಗಳ ನೇತೃತ್ವ ವಹಿಸಿದ್ದ ಜಿನೇಶ್ ಮೆವಾಣಿ ನೇತೃತ್ವದಲ್ಲಿ ಈ ಸ್ವಾತಂತ್ರ್ಯ ದಿನದಂದು ಇನ್ನು ಮುಂದೆ ಸತ್ತ ಪ್ರಾಣಿಗಳ ದೇಹಗಳನ್ನು ಎತ್ತುವುದಿಲ್ಲ ಎನ್ನುತ್ತ ತಮ್ಮ ಮೇಲೆ ಸಾವಿರಾರು ವರ್ಷಗಳಿಂದ ಒಂದು ಅಸಮಾನತೆಯ ಸಮಾಜ ಹೇರಿದ್ದ ‘ಕುಲಕಸುಬು’ಗಳಿಂದ ಮುಕ್ತಿಯ ಪ್ರತಿಜ್ಞೆ ಕೈಗೊಂಡರು. ಜೈ ಭೀಮ್ ಘೋಷಣೆಗಳೊಂದಿಗೆ, ಕಳೆದ ವಾರದ ಸಂಚಿಕೆಯಲ್ಲಿ ವರದಿಯಾದಂತೆ ‘ದನದ ಬಾಲ ನಿಮಗೇ ಇರಲಿ ನಮಗೆ ಭೂಮಿ ಕೊಡಿ’ ಎಂಬ ಹಿಂದಿನ ಹತ್ತು ದಿನಗಳ ‘ದಲಿತ ಅಸ್ಮಿತಾ ಯಾತ್ರಾ’ ಹಾದು ಬಂದ ಎಲ್ಲ ಹಳ್ಳಿಗಳಲ್ಲಿ ಮೊಳಗಿದ ಘೋಷಣೆ ಉನಾದ ಬೃಹತ್ ಸಭೆಯಲ್ಲಿ ಮತ್ತೆ ಮೊಳಗಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಗ್ನೇಶ ಮೆವಾಣಿ ಎಲ್ಲ ದಲಿತ ಕುಟುಂಬಗಳಿಗೆ ಘನತೆಯಿಂದ ಬದುಕಲು ಐದೈದು ಎಕ್ರೆ ಜಮೀನು ಕೊಡಿ, ಒಂದು ತಿಂಗಳೊಳಗೆ ಈ ದಿಕ್ಕಿನಲ್ಲಿ ಗುಜರಾತ್ ಸರಕಾರ ಕ್ರಮ ವಹಿಸದಿದ್ದರೆ ಚಳುವಳಿಯನ್ನು ಮುಂದಿನ ಹಂತಕ್ಕೆ ಒಯ್ಯಲಾಗುವುದು, ರೈಲ್‌ರೋಕೋ ಮುಂತಾದವುಗಳನ್ನು ನಡೆಸಲಾಗುವುದು ಎಂದು ಎಚ್ಚರಿಸಿದರು. ಜೆಎನ್‌ಯು ಅಧ್ಯಕ್ಷ ಕನ್ಹೈಯ ಕುಮಾರ್ ಕೂಡ ಸಭೆಯನ್ನುದ್ದೇಶಿಸಿ ಮಾತನಾಡಿದರು.

ದಲಿತ ಸೋದರರಿಗೆ ಹೊಡೆಯಬೇಡಿ, ನನಗೆ ಹೊಡೆಯಿರಿ ಎಂದು ಬೊಬ್ಬಿಟ್ಟ ಪ್ರಧಾನಿಗಳ ಮಾತಿನ ಟೊಳ್ಳನ್ನು ಬಹಿರಂಗ ಪಡಿಸುವ ರೀತಿಯಲ್ಲಿ ‘ಗೋರಕ್ಷಕರು’ ಉನಾದತ್ತ ಬರುತ್ತಿದ್ದವರನ್ನು ತಡೆಯಲು ಶತಪ್ರಯತ್ನ ನಡೆಸಿದರು, ಹಲವರ ಮೇಲೆ ದಾಳಿ ನಡೆಸಿದರು, ಪೋಲೀಸರೂ ಕೇಂದ್ರ ಗೃಹಮಂತ್ರಿಗಳ ಆದೇಶವನ್ನು ಗೇಲಿ ಮಾಡುವವರಂತೆ ಮೂಕಪ್ರೇಕ್ಷಕರಾಗಿದ್ದರು.(ರ್‍ಯಾಲಿ ಮುಗಿಸಿ ಹಿಂದಿರುಗುವಾಗ ಇಂತಹ ಹಲ್ಲೆಗಳು ಇನ್ನೂ ಉಗ್ರವಾಗಿ ಪೋಲೀಸರ ಸಮ್ಮುಖವೇ ನಡೆದವು ಎಂದು ವರದಿಯಾಗಿದೆ, ಹಲವರನ್ನು ಆಸ್ಪತ್ರೆಗಳಿಗೆ ಸೇರಿಸಬೇಕಾಗಿ ಬಂದಿದೆ).

ಇವು ಯಾವುದನ್ನೂ ಲೆಕ್ಕಿಸದೆ, ದಾರಿಯನ್ನು ಅಡ್ಡ ಗಟ್ಟಿದಾಗ ಬಳಸುದಾರಿ ಹಿಡಿದಾದರೂ ಉನಾ ಸೇರಿದ ಸುಮಾರು 10,000 ಮಂದಿಯಲ್ಲಿ ಯುವಕರು ಮತ್ತು ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಇದ್ದರು ಎಂದು ವರದಿಯಾಗಿದೆ. ‘ಬಹುತ್ ದಬೇ ಹೈಂ, ಅಬ್ ನ ದಬೇಂಗೇ, ಬಹುತ್ ಸಹೇ ಹೈಂ, ಅಬ್ ನ ಸಹೇಂಗೆ’(ಬಹಳ ಬಾಗಿದ್ದೇವೆ, ಇನ್ನು ಬಾಗೆವು, ಬಹಳ ಸಹಿಸಿದ್ದೇವೆ, ಇನ್ನು ಸಹಿಸೆವು) ಎಂಬ ಅವರ ಘೋಷವಾಕ್ಯ ಮೂರ್ತರೂಪ ಪಡೆದಂತಿತ್ತು ಎಂದು ಗುಜರಾತಿನ ಪತ್ರಿಕೆಯೊಂದು ವರದಿ ಮಾಡಿದೆ. ಈ ಪಾದಯಾತ್ರೆಯಲ್ಲಿ, ಮೆರವಣಿಗೆಗಳಲ್ಲಿ ಹಾಗೂ ರ್‍ಯಾಲಿಯಲ್ಲಿ ಮುಸ್ಲಿಮರು ಕೂಡ ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದು ತನಗೂ ಅನಿರೀಕ್ಷಿತವಾಗಿತ್ತು ಎಂದು ಜಿಗ್ನೇಶ್ ಮೆವಾಣಿ ಹೇಳಿದ್ದಾರೆ.

ಅಂದು ಉನಾದಲ್ಲಿ ಕಂಡ ವಾತಾವರಣದಲ್ಲಿ ವಿದ್ಯುತ್ ಸಂಚಾರವಾದಂತಿತ್ತು ಎಂದು ಈ ರ್‍ಯಾಲಿಯಲ್ಲಿ, ಅದಕ್ಕೆ ಹಿಂದಿನ ಎರಡು ದಿನ ದಿನ ‘ಯಾತ್ರಾ’ದ ಕೊನೆಯ ಘಟ್ಟದಲ್ಲಿ ಪಾದಯಾತ್ರಿಗಳೊಂದಿಗೆ ನಡೆದ, ರ್‍ಯಾಲಿಯ ವೇದಿಕೆಯ ಮೇಲೂ ಆಹ್ವಾನಿತರಾದ ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳಿದ್ದಾರೆ.

ಅವರೊಡನೆ ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ವಿಕ್ರಮ್ ಸಿಂಗ್, ಎಐಡಿಡಬ್ಲ್ಯುಎ ಉಪಾಧ್ಯಕ್ಷೆ ಮರಿಯಮ್ ಧವಳೆ, ಗುಜರಾತಿನ ಹಿರಿಯ ಕಮ್ಯುನಿಸ್ಟ್ ಮುಖಂಡ ಅರುಣ ಮೆಹ್ತಾ, ಗುಜರಾತ ಮತ್ತು ಮಹಾರಾಷ್ಟ್ರದ ದಲಿತ ಶೋಷಣ ಮುಕ್ತಿ ಮಂಚ್‌ನ ಕಾರ್ಯಕರ್ತರು, ತಮಿಳುನಾಡು ಅಸ್ಪೃಶ್ಯತಾ ನಿವಾರಣಾ ರಂಗದ ಕಾರ್ಯಕರ್ತರು, ಜನವಾದಿ ಮಹಿಳಾ ಸಂಘಟನೆ ಮತ್ತು ಎಸ್‌ಎಫ್‌ಐನ ಗುಜರಾತ ಮತ್ತು ಮಹಾರಾಷ್ಟ್ರದ ಕಾರ್ಯಕರ್ತರು, ಕಿಸಾನ್ ಸಭಾ ಹಾಗೂ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ರೋಹಿತ್ ವೆಮುಲಾರ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು, ಪ್ರಖ್ಯಾತ ಸಿನೆಮಾ ನಿರ್ದೇಶಕ ಆನಂದ ಪಟವರ್ಧನ್ ಈ ಚಾರಿತ್ರಿಕ ದಲಿತ ಜಾಗೃತಿಯೊಂದಿಗೆ ಸೌಹಾರ್ದದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದವರಲ್ಲಿ ಸೇರಿದ್ದಾರೆ.

ಉನಾದಿಂದ ಮುಂದೆ ?

ಈ ಪ್ರಶ್ನೆ ಎಲ್ಲ ಪ್ರಜಾಪ್ರಭುತ್ವವಾದಿಗಳಲ್ಲಿ ಸಹಜವಾಗಿ ಏಳುವಂತದ್ದು. ಉನಾ ಜಾತಿದಮನದ ವಿರುದ್ಧ ದಲಿತ ಹೋರಾಟದಲ್ಲಿ ರೋಸಾ ಪಾರ್ಕ್ ಕ್ಷಣವೇ ಎಂದು ಮೇಲೆ ಹೇಳಿದಂತೆ ಈ ಚಾರಿತ್ರಿಕ ಕ್ಷಣದ ಸಾಕ್ಷಿಯಾಗಿದ್ದ ವಿಜೂ ಕೃಷ್ಣನ್ ಈ ಬಗ್ಗೆ ವಿಶ್ಲೇಷಣೆ ಮಾಡುತ್ತ ಕೇಳುವ ಪ್ರಶ್ನೆ, ಅದಕ್ಕೆ ಅವರೇ ಉತ್ತರಿಸುತ್ತ ಇಲ್ಲ, ಈ ಚಳುವಳಿ ಎತ್ತಿರುವ ಪ್ರಶ್ನೆಗಳನ್ನು ಕಂಡರೆ, ಅದಕ್ಕಿಂತಲೂ ಬಹಳ ಮುಂದೆ ಹೋಗಬಹುದಾದಂತದ್ದು ಎನ್ನುತ್ತಾರೆ.

ಅಮೆರಿಕಾದ ಕರಿಯರ ಹೋರಾಟದ ಇತಿಹಾಸದಲ್ಲಿ ಬಸ್‌ಗಳಲ್ಲಿ ಬಿಳಿಯರಿಗೆ ಜಾಗ ಬಿಟ್ಟು ಕೊಡಬೇಕೆಂಬ ಕಟ್ಟಳೆಯನ್ನು ಮುರಿದು ನಿಂತ ರೋಸಾ ಪಾರ್ಕ್ ಕರಿಯರ ಚಳುವಳಿಗೆ ಹೊಸ ಸ್ಫೂರ್ತಿ ತುಂಬಿದರು. ಅದಕ್ಕಿಂತ ಬಹಳ ಹೆಚ್ಚಿನ ಸಾಧ್ಯತೆಗಳನ್ನು ಒಳಗೊಂಡಿರುವ ಉನಾದ ಚಳುವಳಿಯನ್ನು ತಾರ್ಕಿಕ ಅಂತ್ಯದ ವರೆಗೆ ಒಯ್ದರೆ ಒಂದು ದೇಶವ್ಯಾಪಿ ಆಂದೋಲನ ಭುಗಿಲೇಳುವಂತೆ ಮಾಡಬಲ್ಲದು, ಅದು ಜಾತಿದಮನದ ವಿರುದ್ಧ ಚಾರಿತ್ರಿಕ ಹೋರಾಟಗಳ ಗಾಥೆಯ ಭಾಗವಾಗಬಲ್ಲದು ಎಂದು ವಿಜೂ ಕೃಷ್ಣನ್ ಅಭಿಪ್ರಾಯ ಪಡುತ್ತಾರೆ. ಅತ್ಯಂತ ವ್ಯಾಪಕ ಐಕ್ಯತೆ ಬೆಸೆದು ಉನಾದ ಸಂದೇಶವನ್ನು ದೇಶದ ಮೂಲೆಮೂಲೆಗೆ ಒಯ್ದು ಜಾತಿದಮನಕ್ಕೆ ಶಾಶ್ವತವಾಗಿ ಕೊನೆ ಹಾಕಬಲ್ಲ ಒಂದು ಆಂದೋಲನವನ್ನು ಕಟ್ಟುವ ಚಾರಿತ್ರಿಕ ಹೊಣೆ ನಮ್ಮ ಮೇಲಿದೆ ಎಂದು ವಿಜೂ ಕೃಷ್ಣನ್ ಹೇಳುತ್ತಾರೆ.

ಕಾಶ್ಮೀರದಲ್ಲಿ ಇನ್ನೆಷ್ಟು ನೆತ್ತರು ಹರಿಯಬೇಕು?–ಇದು ಪ್ರತಿಯೊಬ್ಬ ಕಾಶ್ಮೀರಿ ಕೇಳುವ ಪ್ರಶ್ನೆ: ಯೂಸುಫ್ ತರಿಗಾಮಿ



ಕಾಶ್ಮೀರ ಕಣಿವೆಯಲ್ಲಿ ಕರ್ಫ್ಯೂ 40 ದಿನ ದಾಟಿದೆ. 61 ಜೀವಗಳ ಬಲಿಯಾಗಿದೆ. ನೂರಾರು ಜನ ಗಾಯಗೊಂಡಿದ್ದಾರೆ. ಇನ್ನೆಷ್ಟು ನೆತ್ತರು ಹರಿಯಬೇಕಾಗಿದೆ–ಇದು ಈಗ ಪ್ರತಿಯೊಬ್ಬ ಕಾಶ್ಮೀರಿ ಕೇಳುವ ಪ್ರಶ್ನೆ ಎಂದು ಕಾಶ್ಮೀರದ ಸಿಪಿಐ(ಎಂ) ಮುಖಂಡ ಹಾಗೂ ಜನಪ್ರಿಯ ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿ ಆತಂಕ ತುಂಬಿದ ದನಿಯಲ್ಲಿ ಕೇಳಿದ್ದಾರೆ.

ಅಲ್ಲಿ ಕರ್ಫ್ಯೂ ಹಾಕಿ ಭದ್ರತಾ ಪಡೆಗಳ ಗುಂಡುಗಳಿಗೆ ಐವತ್ತಕ್ಕೂ ಹೆಚ್ಚು ಜನ, ಹೆಚ್ಚಾಗಿ ಯುವಜನ ಬಲಿಯಾದ ನಂತರ, ಸುಮಾರು ನೂರು ಮಂದಿ ಪೆಲೆಟ್ ಗನ್‌ಗಳಿಂದ ಕಣ್ಣು ಕಳಕೊಳ್ಳುವ ಭೀತಿ ಆವರಿಸಿದ ನಂತರ ಕೊನೆಗೂ ಪ್ರಧಾನ ಮಂತ್ರಿಗಳು ಈ ಬಗ್ಗೆ ತನ್ನ ದೀರ್ಘ ಮೌನ ಮುರಿದರು, ದಿಲ್ಲಿಯ ಹೊರಗೆ ಮಧ್ಯಪ್ರದೇಶದ ಒಂದು ಸಭೆಯಲ್ಲಿ ಭಾರತೀಯರೆಲ್ಲರೂ ಕಾಶ್ಮೀರವನ್ನು ಪ್ರೀತಿಸುತ್ತಾರೆ ಎಂದರು. ಸಂಸತ್ತಿನ ಎರಡು ಸದನಗಳಲ್ಲಿ ಈ ಬಗ್ಗೆ ಚರ್ಚೆ ನಡೆದು ಈ ಬಗ್ಗೆ ಸರ್ವಪಕ್ಷ ಸಭೆ ಕರೆಯುವಂತೆ ಮತ್ತು ರಾಜಕೀಯ ಸಂವಾದ ಆರಂಭಿಸುವಂತೆ ಸರಕಾರವನ್ನು ಆಗ್ರಹಿಸುವ ನಿರ್ಣಯಗಳನ್ನು ಕೈಗೊಂಡವು.

ಪ್ರಧಾನ ಮಂತ್ರಿಗಳು ಸರ್ವಪಕ್ಷ ಸಭೆಯನ್ನೇನೋ ಕರೆದರು. ನಂತರ ಸುಮಾರು ನಲ್ವತ್ತು ನಿಮಿಷಗಳ ಕಾಲ ಮಾಧ್ಯಮಗಳ ಮುಂದೆ ಮಾತಾಡಿದರು. ಆದರೆ ಅವರ ದೃಷ್ಟಿ ನೆಟ್ಟಿದ್ದುದ್ದು ಕ್ಯಾಮರಾಗಳತ್ತ ಮಾತ್ರ, ಪ್ರತಿಪಕ್ಷಗಳು ಎತ್ತಿದ ನಿರ್ದಿಷ್ಟ ಪ್ರಶ್ನೆಗಳಾವ ಬಗ್ಗೆಯೂ ಅವರು ಪ್ರಸ್ತಾಪಿಸಲಿಲ್ಲ, ವಾಸ್ತವವಾಗಿ ಅದು ಸರ್ವಪಕ್ಷ ಸಭೆಯೇ ಆಗಿರಲಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಟಿಪ್ಪಣಿ ಮಾಡಿದ್ದಾರೆ. ನಂತರ ಸ್ವಾತಂತ್ರ್ಯ ದಿನದ ಕೆಂಪು ಕೋಟೆ ಭಾಷಣದಲ್ಲೂ ಕಾಶ್ಮೀರಿಗಳ ಆತಂಕ-ಆಕ್ರೋಶಗಳ ಬಗ್ಗೆ ಅದೇ ಮೌನ ಮುಂದುವರದಿದೆ.(ಈ ಸಂಚಿಕೆಯ ಪುಟ 7ರಲ್ಲಿರುವ ಪ್ರಕಾಶ ಕಾರಟ್ ಅವರ ಲೇಖನ ನೋಡಿ).

ಈ ಹಿನ್ನೆಲೆಯಲ್ಲಿ ತರಿಗಾಮಿಯವರು ಕಾಶ್ಮೀರಿಗಳ ಮುಂದೆ ಮತ್ತು ದೇಶದ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯ ಮುಂದಿರುವ ಈ ಪ್ರಶ್ನೆಗೆ ದನಿ ನೀಡಿದ್ದಾರೆ. ದಿಲ್ಲಿಯಲ್ಲಿ ಮತ್ತು ಶ್ರೀನಗರದಲ್ಲಿ ಆಳುತ್ತಿರುವವರ ಇಂತಹ ನಿರ್ಲಕ್ಷ್ಯ ಮತ್ತು ಉಪೇಕ್ಷೆ ಈಗಾಗಲೇ ಹದಗೆಡುತ್ತಿರುವ ಪರಿಸ್ಥಿತಿಯನ್ನು ಮತ್ತಷ್ಟು ಉದ್ರೇಕಿಸುತ್ತಿದೆ, ಪ್ರಧಾನ ಮಂತ್ರಿಗಳು ಕಾಶ್ಮೀರವನ್ನು ಆವರಿಸಿರುವ ದುರಂತಮಯ ಸನ್ನಿವೇಶದ ಬಗ್ಗೆ ಆತಂಕವನ್ನಾದರೂ ವ್ಯಕ್ತಪಡಿಸುತ್ತಾರೆ ಎಂಬ ನಿರೀಕ್ಷೆಯಿತ್ತು. ಆದರೆ ಅವರ ದೀರ್ಘ ಭಾಷಣದಲ್ಲಿ ಕಾಶ್ಮೀರದಲ್ಲಿನ ದುಃಖಮಯ ವಿದ್ಯಮಾನಗಳ ಬಗ್ಗೆ ಒಂದೇ ಒಂದು ಪದ ಇರಲಿಲ್ಲ, ಬದಲಿಗೆ ಬಲೋಚಿಸ್ತಾನದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ಮಾತ್ರ ಮಾತಾಡಿದರು ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಜಮ್ಮು–ಕಾಶ್ಮೀರ ಪ್ರತಿಪಕ್ಷಗಳ ಸಭೆ–ನ್ಯಾಯಾಂಗ ತನಿಖೆಗೆ ಆಗ್ರಹ

ಆಗಸ್ಟ್ 15ರ ಪ್ರಧಾನ ಮಂತ್ರಿಗಳ ಕೆಂಪುಕೋಟೆಯ ಭಾಷಣದಿಂದ ನಿರಾಶರಾದ ಜಮ್ಮು–ಕಾಶ್ಮೀರದ ಪ್ರತಿಪಕ್ಷಗಳು ಶ್ರೀನಗರದಲ್ಲಿ ಆಗಸ್ಟ್ 17ರಂದು ಸಭೆ ಸೇರಿ ರಾಜ್ಯದಲ್ಲಿನ ಆತಂಕಕಾರಿ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿದವು.

ಚರ್ಚೆಯ ಅಂತ್ಯದಲ್ಲಿ ಸಭೆ ಕೈಗೊಂಡ ನಿರ್ಣಯ ರಾಜ್ಯದಲ್ಲಿನ ಕ್ಷೋಭೆಯಿಂದ ಸಂತ್ರಸ್ತರಾಗಿರುವ ಜನತೆಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರತಿಕ್ರಿಯೆಯ ಬಗ್ಗೆ ನಿರಾಶೆ ಮತ್ತು ಅಸಂತೋಷ ವ್ಯಕ್ತ ಪಡಿಸಿತು.

ಪ್ರಸಕ್ತ ಸನ್ನಿವೇಶದ ಒಂದು ವಿವರವಾದ ಚರ್ಚೆ ಅಗತ್ಯವಾಗಿದೆ. ಆದರೆ ಈ ಬಗ್ಗೆ ಮುತುವರ್ಜಿ ಸರಕಾರಗಳಿಂದ ಬರದೆ ಪ್ರತಿಪಕ್ಷಗಳಿಂದಲೇ ಬರುವಂತಾಗಿರುವುದು ದುರದೃಷ್ಟಕರ ಎನ್ನುತ್ತ ಸಭೆ ಸಂಸತ್ತಿನಲ್ಲಿ ಇದನ್ನು ಎತ್ತಿ ರಾಜ್ಯದ ಜನತೆಯೊಡನೆ ಸೌಹಾರ್ದ ವ್ಯಕ್ತಪಡಿಸಿದ ಪ್ರತಿಪಕ್ಷಗಳ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿತು. ರಾಜ್ಯ ಸರಕಾರ ಈ ವಿಷಯದಲ್ಲಿ ಒಂದು ವಿಶೇಷ ಅಧಿವೇಶನವನ್ನು ಕರೆಯಬೇಕಾಗಿತ್ತು. ಈಗಲಾದರೂ ಇಂತಹ ಒಂದು ವಿಶೇಷ ಅಧಿವೇಶನವನ್ನು ಕರೆಯಬೇಕು ಎಂದು ಸಭೆ ಒತ್ತಾಯಿಸಿದೆ.


ಕಾಶ್ಮೀರದಲ್ಲಿನ ಪ್ರಶ್ನೆ ಬಹುಪಾಲು ರಾಜಕೀಯ ಸ್ವರೂಪದ್ದು, ಆದ್ದರಿಂದ ರಾಜ್ಯದ ಎಲ್ಲ ರಾಜಕೀಯ ಶಕ್ತಿಗಳೊಡನೆ ಸಂವಾದವನ್ನು ಆರಂಭಿಸಬೇಕಾದ ಅಗತ್ಯವನ್ನು ಕೇಂದ್ರ ಸರಕಾರ ಮನಗಾಣ ಬೇಕಾಗಿದೆ. **ಮುಖ್ಯಮಂತ್ರಿಗಳು ತಮ್ಮ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ನಾಗರಿಕರ ವಿರುದ್ಧ ವಿಪರೀತ ಬಲಪ್ರಯೋಗ ನಡೆಸಲಾಗಿದ ಎಂಬುದನ್ನು ಒಪ್ಪಿಕೊಂಡಿರುವುದರಿಂದ ತಕ್ಷಣವೇ ಈ ಬಗ್ಗೆ ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಿಂದ ತನಿಖೆಗೆ ತಕ್ಷಣ ಆದೇಶ ನೀಡಬೇಕು ಎಂದು ಪ್ರತಿಪಕ್ಷಗಳ ಈ ಸಭೆ ಒತ್ತಾಯಿಸಿದೆ.**

ಪೆಲೆಟ್ ಗನ್‌ಗಳ ಬಳಕೆಯನ್ನು ತಕ್ಷಣದಿಂದಲೇ ನಿಲ್ಲಿಸಬೇಕು ಎಂದು ಒತ್ತಾಯಿಸಿದ ಸಭೆ ಇದುವರೆಗೆ ಶಾಂತಿಯುತವಾಗಿದ್ದ ಪ್ರದೇಶಗಳಲ್ಲೂ ಅನಗತ್ಯ ಬಂಧನಗಳನ್ನು ನಡೆಸಿ, ಯುವಜನರಿಗೆ ಕಿರುಕುಳ ಕೊಟ್ಟು ಪರಿಸ್ಥಿತಿಯನ್ನು ಉಲ್ಬಣಗೊಳಿಸಲಾಗಿದೆ ಎನ್ನುತ್ತ ತಕ್ಷಣವೇ ಇವನ್ನೆಲ್ಲ ನಿಲ್ಲಿಸಬೇಕು ಎಂದು ಆಗ್ರಹ ಪಡಿಸಿದೆ.

ಜಮ್ಮು ಮತ್ತು ಕಾಶ್ಮೀರ ಕೋಮು ಸೌಹಾರ್ದ ಮತ್ತು ಧಾರ್ಮಿಕ ಸಹಿಷ್ಣುತೆಯ ದಾರಿದೀಪವಾಗಿತ್ತು. ಏನೇ ಬರಲಿ, ಈ ಪರಂಪರೆಯನ್ನು ಎತ್ತಿ ಹಿಡಿಯಬೇಕು ಎಂದು ರಾಜ್ಯದ ಜನತೆಗೆ ಮತ್ತು ಸಂಬಂಧಪಟ್ಟ ಎಲ್ಲರಿಗೂ ಮನವಿ ಮಾಡಿಕೊಂಡ ಈ ಸಭೆ ರಾಜ್ಯದಲ್ಲಿನ ಪ್ರಸಕ್ತ ಪರಿಸ್ಥಿತಿಯನ್ನು ಚರ್ಚಿಸಲು ರಾಷ್ಟ್ರಪತಿಗಳನ್ನು, ಮತ್ತು ರಾಷ್ಟ್ರೀಯ ಪಕ್ಷಗಳ ಮುಖಂಡರನ್ನು ಜಂಟಿಯಾಗಿ ಭೇಟಿ ಮಾಡುವ ಸಾಧ್ಯತೆಗಳನ್ನು ಪರಿಶೀಲಿಸಲು ನಿರ್ಧರಿಸಿತು.

ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಓಮರ್ ಅಬ್ದುಲ್ಲ ಕರೆದಿದ್ದ ಈ ಸಭೆಯಲ್ಲಿ ಸಿಪಿಐ(ಎಂ)ನ ಮುಖಂಡ ಯೂಸುಫ್ ತರಿಗಾಮಿಯವರಲ್ಲದೆ, ಕಾಂಗ್ರೆಸ್, ಡಿಪಿಎನ್, ಪಿಡಿಎಫ್ ಮತ್ತು ಎಐಪಿಯ ಮುಖಂಡರೂ ಭಾಗವಹಿಸಿದ್ದರು.

ಮಾತೆಂದರೆ ಇದು



ರಾತ್ರಿಯ ಕಗ್ಗತ್ತಲೆ ಇದೆ
ದಾರಿಯಿನ್ನೂ ಬಹುದೂರವಿದೆ
ಬೆಳಕಿನ ಕಿರಣ ಕಾಣಿಸುವ ತನಕ
ನಮಗಿನ್ನೂ ನಡೆಯುವದು ಬಾಕಿ ಇದೆ

– ಕಾ. ಗೋವಿಂದ ಪಾನ್ಸಾರೆ

ಅರಸು ಶತಾಬ್ದಿ ಆಚರಣೆ ಅರ್ಥಪೂರ್ಣವಾಗಿತ್ತೇ?

ಸಂಪಾದಕೀಯ

ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಶತಮಾನೋತ್ಸವವನ್ನು ಕಳೆದ ವರ್ಷ ಪೂರ್ತಿ ಆಚರಿಸಲಾಗಿದ್ದು ಅದು ಇದೇ ಅಗಸ್ಟ್ 20 ರಂದು ಅದ್ದೂರಿ ಸಮಾರಂಭದೊಂದಿಗೆ ಸಮಾರೋಪಗೊಳ್ಳಲಿದೆ. ಅದರ ಹುಟ್ಟೂರಾದ ಕಲ್ಲಹಳ್ಳಿಯನ್ನು ಮಾದರಿ ಗ್ರಾಮ ಮಾಡುವ ಯೋಜನೆ ಸೇರಿದಂತೆ ವರ್ಷ ಪೂರ್ತಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ ಈಗಿನ ಕಾಂಗ್ರೆಸ್ ಪಕ್ಷ, ಸರಕಾರ, ಮತ್ತು ಮುಖ್ಯಮಂತ್ರಿ ಸಿದ್ಧರಾಮಯ್ಯರವರಿಗೆ ಅರಸು ಅವರ ವಾರಸುದಾರರು ಎಂದು ಹೇಳಿಕೊಳ್ಳಲು ಅರ್ಹತೆ ಇದೆಯೆ? ಅವರು ಅರಸು ಅವರ ಪ್ರಮುಖ ಜನಪರ ಸಾಧನೆಗಳನ್ನು ಈ ಒಂದು ವರ್ಷದಲ್ಲಿ ಮುಂದೊಯ್ಯುವ ಮೂಲಕ ಅರಸು ಶತಾಬ್ದಿಯನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆಯೇ ಎಂದು ಕೇಳಬೇಕಾಗಿದೆ.

ಅರಸು ಅವರ ಪ್ರಮುಖ ಸಾಧನೆಯೆಂದರೆ 1974ರ ಭೂಸುಧಾರಣೆ ಕಾನೂನು ಮೂಲಕ ಜಾರಿಗೆ ತಂದ ಭೂಸುಧಾರಣೆ. ಇದು ದೇಶದಲ್ಲೇ ಅತ್ಯಂತ ಕ್ರಾಂತಿಕಾರಿ ಭೂಸುಧಾರಣೆ ಕಾನೂನು ಎಂದು ಕಾಂಗ್ರೆಸ್ ಮತ್ತು ಬೂರ್ಜ್ವಾ ಮಾಧ್ಯಮಗಳು ಪ್ರಚಾರ ಮಾಡುತ್ತಿರುವುದು ನಿಜವಲ್ಲ. ಬಹುಶಃ ಎಡ ಪಕ್ಷಗಳ ಸರಕಾರಗಳು ಮೂರು ರಾಜ್ಯಗಳಲ್ಲಿ ಜಾರಿಗೆ ತಂದ ಭೂಸುಧಾರಣೆ ಬಿಟ್ಟರೆ ಅತಿ ದೊಡ್ಡ ಭೂಸುಧಾರಣೆ ಎನ್ನಬಹುದು. ಅಥವಾ ಕಾಂಗ್ರೆಸ್ ಸರಕಾರವೊಂದು ತಂದ 'ಅತ್ಯಂತ ಕ್ರಾಂತಿಕಾರಿ ಭೂಸುಧಾರಣೆ' ಎನ್ನಬಹುದೇನೋ! ಇದಕ್ಕೆ ಪುರಾವೆಯಾಗಿ ಕೆಲವು ಅಂಕಿಸಂಖ್ಯೆಗಳು ಸಾಕು.

ಭಾರತದ ಕೃಷಿ ಯೋಗ್ಯ ಜಮೀನಿನ ಕೇವಲ ಶೇ. 5 ಭಾಗ ಹೊಂದಿರುವ ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ದೇಶದ ಒಟ್ಟು ಭೂಸುಧಾರಣಾ ಫಲಾನುಭವಿಗಳ ಪಾಲು ಶೇ. 68 (ಮೂರನೇ ಎರಡು ಪಾಲಿಗಿಂತಲೂ ಹೆಚ್ಚು). ಭೂಸುಧಾರಣಾ ಫಲಾನುಭವಿಗಳ ಸಂಖ್ಯೆ ಪಶ್ಚಿಮ ಬಂಗಾಳದಲ್ಲಿ ಕರ್ನಾಟಕದ 6 ಪಟ್ಟು. ಭೂಸುಧಾರಣೆಯ ನಂತರವೂ ಕರ್ನಾಟಕದಲ್ಲಿ ಸಣ್ಣ-ಅತಿ ಸಣ್ಣ ರೈತರು ಹೊಂದಿರುವ ಕೃಷಿ ಭೂಮಿಯ ಪ್ರಮಾಣ ಶೇ. 34 ರಷ್ಟು ಮಾತ್ರ. ಪಶ್ಚಿಮ ಬಂಗಾಳದಲ್ಲಿ ಈ ಪ್ರಮಾಣ ಶೇ. 84 ರಷ್ಟಿದೆ. ಮಾತ್ರವಲ್ಲ ಅರಸು ಭೂಸುಧಾರಣೆಗಳ ಫಲಾನುಭವಿಗಳ ಶೇ. 68 ಕರಾವಳಿ ಮತ್ತು ಮುಂಬಯಿ ಕರ್ನಾಟಕದ 6 ಜಿಲ್ಲೆಗಳ ರೈತರು. ಇವು ಕೆಂಬಾವುಟದ ರೈತಸಂಘಗಳ ನಾಯಕತ್ವದ ರೈತ ಚಳುವಳಿ ಪ್ರಬಲವಾಗಿದ್ದ ಪ್ರದೇಶಗಳಾಗಿದ್ದು, ಕರ್ನಾಟಕದ ಭೂಸುಧಾರಣೆಯಲ್ಲೂ ಎಡ ಚಳುವಳಿಯ ಪಾತ್ರ ಸ್ಪಷ್ಟವಿದೆ. ಜಾರಿಯ ನ್ಯೂನ್ಯತೆಗಳಲ್ಲದೆ 1974ರ ಭೂಸುಧಾರಣೆ ಕಾನೂನಿನಲ್ಲೇ ಭೂಮಾಲಕರು ತಮ್ಮ ಭೂಒಡೆತನ ಉಳಿಸಿಕೊಳ್ಳಲು ಹಲವು ತೂತುಗಳಿದ್ದವು ಮತ್ತು ಭೂಮಿತಿ ಸಹ ಹೆಚ್ಚಿತ್ತು.

ಆದರೂ ಎಷ್ಟೇ ಮಿತಿಗಳಿದ್ದರೂ ಕರ್ನಾಟಕದಲ್ಲಿ ಭೂಸುಧಾರಣೆ ಜಾರಿಗೆ ತಂದಿದ್ದು ಅರಸು ಅವರ ಅತಿ ದೊಡ್ಡ ಸಾಧನೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಆಗ ಕಾಂಗ್ರೆಸಿನಲ್ಲಿ ಮತ್ತು ವಿರೋಧ ಪಕ್ಷಗಳಲ್ಲೂ ಬಲವಾಗಿದ್ದ ಭೂಮಾಲಕ ಲಾಬಿಯನ್ನು ಧಿಕ್ಕರಿಸಿ ಭೂಸುಧಾರಣೆ ಕಾನೂನು ಪಾಸು ಮಾಡಿಸಿಕೊಂಡದ್ದು ಮತ್ತು ಜಾರಿಗೆ ತಂದಿದ್ದು ಅವರ ರಾಜಕೀಯ ಮುನ್ನೋಟ, ಸ್ಥೈರ್ಯ ಮತ್ತು ಮುತ್ಸದ್ದಿತನದ ಸೂಚಕ. ಆಗ ಕರ್ನಾಟಕದಲ್ಲಿದ್ದ ರಾಜಕೀಯ ಶಕ್ತಿಗಳ ಬಲಾಬಲ ಮತ್ತು ಸನ್ನಿವೇಶದಲ್ಲಿ ಸುಮಾರು 5 ಲಕ್ಷ ರೈತರಿಗೆ 21 ಲಕ್ಷ ಎಕರೆ ಭೂಮಿ ದೊರಕಿಸಿದ್ದು ದೊಡ್ಡ ಸಾಧನೆಯೇ. ಅದು ಈ ಜಿಲ್ಲೆಗಳಲ್ಲಿ ಗಮನಾರ್ಹ ಸಾಮಾಜಿಕ ಬದಲಾವಣೆಗೆ ಹಾದಿ ಮಾಡಿಕೊಟ್ಟಿತು.

ಆದರೆ ಅರಸು ಅವರ ವಾರಸುದಾರರು ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮತ್ತು ಸಿದ್ಧರಾಮಯ್ಯ ಅವರು ಈ ಭೂಸುಧಾರಣೆಯನ್ನು ಮುಂದೊಯ್ಯಲು ಏನು ಮಾಡಿದ್ದಾರೆ? ಖಂಡಿತಾ ಮಾಡಿದ್ದಾರೆ. ಆ ಭೂಸುಧಾರಣೆಯನ್ನು ಜೀವಂತ ಹೂಳಲು ಹೊರಟಿದ್ದಾರೆ! 1974ರ ಭೂಸುಧಾರಣೆ ಕಾನೂನಿನಲ್ಲಿ ಕೃಷಿಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕೆ ತೀವ್ರ ನಿರ್ಬಂಧಗಳಿದ್ದವು. 1995ರಲ್ಲಿ 'ಮಣ್ಣಿನ ಮಗ' ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ, ಆರ್.ಎಲ್.ಜಾಲಪ್ಪ ಮಂತ್ರಿಯಾಗಿದ್ದಾಗ ಇದನ್ನು ಸಡಿಲಿಸುವ ತಿದ್ದುಪಡಿಗಳಾದವು. ತೋಟಗಾರಿಕೆ, ಹೂ ಬೇಸಾಯ ಮತ್ತು ಕೃಷಿ-ಆಧಾರಿತ ಕೈಗಾರಿಕೆಗಳಿಗೆ 108 ಎಕ್ರೆ ವರೆಗೆ ಖುಷ್ಕಿ ಜಮೀನು ಪಡೆಯಲು ಸರಕಾರ ಪರವಾನಿಗೆ ಕೊಡಬಹುದು. ಅಲ್ಲದೆ ಕೃಷಿಯೇತರ ಆದಾಯ ರೂ. 2 ಲಕ್ಷದೊಳಗೆ ಇರುವವರು ಕೃಷಿ ಭೂಮಿ ಖರೀದಿ ಮಾಡಬಹುದು ಎಂಬ ತಿದ್ದುಪಡಿಗಳನ್ನು ಮಾಡಲಾಯಿತು.

ಇದು ಭೂಕೇಂದ್ರೀಕರಣಕ್ಕೆ ಹಾದಿ ಮಾಡಿಕೊಡುವ ಮತ್ತು 'ಉಳುವವನೇ ಹೊಲದೊಡೆಯ' ಎಂಬ ಭೂಸುಧಾರಣೆಯ ಮೂಲನೀತಿಗೆ ವಿರುದ್ಧವಾದದ್ದು. ಇದನ್ನು ಆಗ ವಿಧಾನ ಸಭೆಯಲ್ಲಿ ವಿರೋಧಿಸಿದ್ದು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿ ಮಾತ್ರ. ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಚಕಾರವೆತ್ತಲಿಲ್ಲ. ವಿಪರ್ಯಾಸದ ಸಂಗತಿಯೆಂದರೆ ಇದನ್ನು ಜಾರಿ ಮಾಡಿದ ಜಾಲಪ್ಪ ಅವರಿಗೆ ಶತಮಾನೋತ್ಸವದ ಅಂಗವಾಗಿ 'ದೇವರಾಜ ಅರಸು ಪ್ರಶಸ್ತಿ' ಕೊಡಲಾಯಿತು. ಇದು ಸಾಲದೆಂಬಂತೆ ಶತಮಾನೋತ್ಸವ ಆರಂಭವಾಗುವ ಕೆಲವೇ ದಿನಗಳ ಮೊದಲು ಭೂಸುಧಾರಣೆ ಕಾನೂನಿಗೆ ಇನ್ನೊಂದು ತಿದ್ದುಪಡಿ ತಂದು ಕೃಷಿ ಭೂಮಿ ಖರೀದಿದಾರರ ಆದಾಯ ಮಿತಿಯನ್ನು ರೂ. 25 ಲಕ್ಷಕ್ಕೆ ಏರಿಸಲಾಯಿತು. ಇಡೀ ಅರಸು ಶತಾಬ್ದಿ ವರ್ಷದಲ್ಲಿ ಸರಕಾರ 'ತಿರುವು ಮುರುವು' ಭೂಸುಧಾರಣೆಯಲ್ಲಿ ತೊಡಗಿದೆ. ಕೈಗಾರಿಕೆ ಹೆಸರಲ್ಲಿ ರೈತರಿಂದ ಭೂಮಿ ಕಸಿದುಕೊಳ್ಳಲಾಗುತ್ತಿದೆ. ಬೆಂಗಳೂರು-ಮುಂಬಯಿ, ಬೆಂಗಳೂರು-ಚೆನ್ನೈ, ಬೆಂಗಳೂರು-ಮಂಗಳೂರು ಕಾರಿಡಾರ್ ಹೆಸರಲ್ಲಿ ಭೂಮಿಯನ್ನು ಕಸಿದುಕೊಳ್ಳಲು ಹೊಸ ಯೋಜನೆ ಸಿದ್ಧವಾಗುತ್ತಿದೆ. ರೈತ ಕೃಷಿಯನ್ನು ನಷ್ಟದ ವ್ಯವಹಾರವಾಗಿಸಿ ಅವರ ಮೇಲೆ 'ಕಾಂಟ್ರಾಕ್ಟ್ ಕೃಷಿ' ಹೊರಿಸುವ ಹುನ್ನಾರ ನಡೆದಿದೆ.

ಜೀತ ಪದ್ಧತಿ, ತಲೆಯ ಮೇಲೆ ಮಲ ಹೊರುವ ಪದ್ಧತಿ ಮೇಲೆ ನಿಷೇಧ ಅರಸು ಆಡಳಿತದ ಸ್ಮರಣೀಯ ಸಾಧನೆಗಳು. ಜೀತ ಪದ್ಧತಿ ಇನ್ನೂ ಜೀವಂತವಾಗಿದ್ದು ಹಲವು ಇಂತಹ ಪ್ರಕರಣಗಳು ವರದಿಯಾಗುತ್ತಿವೆ. ಅದರಲ್ಲೂ ವಲಸೆ ಕಾರ್ಮಿಕರನ್ನು ಜೀತದುಡಿತಕ್ಕೆ ತಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ. ಕಾರ್ಮಿಕ ಕಾನೂನುಗಳ ಜಾರಿಯಲ್ಲಿ ತೀವ್ರ ನಿರ್ಲಕ್ಷ ಮತ್ತು ಮಾಲಿಕ-ಪರ ಧೋರಣೆಗಳಿಂದ ಹಲವಾರು ಕಾರ್ಮಿಕರು ಜೀತದಾಳುಗಳ ಹತ್ತಿರದ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದಾರೆ. ಅದೇ ರೀತಿ ಮಲ ಹೊರುವ ಪದ್ಧತಿ ನಿಷೇಧವಾಗಿ 4 ದಶಕಗಳು ಕಳೆದಿದ್ದರೂ ರಾಜ್ಯದಲ್ಲಿ ಈಗಲೂ 15 ಸಾವಿರ ಪೌರ ಕಾರ್ಮಿಕರು ಕೈಯಾರೆ ಮಲ ನಿರ್ವಹಣೆ ಮಾಡುತ್ತಾರೆ ಎಂದು ವರದಿಯಾಗಿದೆ. ಮ್ಯಾನ್ ಹೋಲ್ ಕುಸಿದು, ಒಳಚರಂಡಿ ಕಟ್ಟಿಕೊಂಡದ್ದು ನಿರ್ವಹಣೆ ಮಾಡಲು ಕಾನೂನುಬಾಹಿರವಾಗಿ ಬಳಸಲಾಗುತ್ತಿದ್ದು, ಈ ಒಂದು ವರ್ಷದಲ್ಲೇ ಇಂತಹ ಕೆಲಸದಲ್ಲಿ ತೊಡಗಿದ್ದ ಹಲವಾರು ಪೌರಕಾರ್ಮಿಕರು ಸತ್ತಿರುವ ವರದಿಯಾಗಿದೆ. ಇಂತಹ ದುಸ್ಥಿತಿ ಯನ್ನು ತೊಡೆದು ಹಾಕದ ಅರಸು ಶತಾಬ್ದಿ ಹೇಗೆ ಅರ್ಥಪೂರ್ಣವಾದೀತು?

ಕರ್ನಾಟಕದ ರಾಜಕಾರಣದಲ್ಲಿ ವೀರಶೈವ-ಒಕ್ಕಲಿಗ ಜಾತಿಗಳ ಪ್ರಾಬಲ್ಯ ಮುರಿದು ಹಿಂದುಳಿದ ದುರ್ಬಲ ಜಾತಿಗಳ ಮತ್ತು ದಲಿತ ನಾಯಕರು ಮತ್ತು ಜನತೆಗೆ ರಾಜಕೀಯದಲ್ಲಿ ಮತ್ತು ಆಡಳಿತದಲ್ಲಿ ಪಾಲುಗಾರಿಕೆ ಕೊಟ್ಟಿದ್ದು ಅರಸು ಅವರ ಇನ್ನೊಂದು ಮಹತ್ಸಾಧನೆ. ಅರಸು ಅವರೇ ಸಿದ್ಧರಾಮಯ್ಯ ಈಗ ಪ್ರತಿಪಾದಿಸುವ ಅಹಿಂದ ರಾಜಕೀಯದ ಪ್ರವರ್ತಕರಾಗಿದ್ದರು. ಆದರೆ ಸಿದ್ಧರಾಮಯ್ಯನವರ ಸರಕಾರದಲ್ಲಿ ಅಹಿಂದ ಜನರ ಪರಿಸ್ಥಿತಿ ಏನಿದೆ? ಎರಡು ವರ್ಷಗಳ ನಂತರವೂ ಕರಾವಳಿ ಪ್ರದೇಶದಲ್ಲಿ ಕಲ್ಲಡ್ಕ ಪ್ರಭಾಕರ ಭಟ್ಟರ 'ಸಂಘ ಗ್ಯಾಂಗ್'ನ ಸರ್ವಾಧಿಕಾರ ಎಗ್ಗಿಲ್ಲದೆ ಸಾಗಿದೆ. ಅಲ್ಪಸಂಖ್ಯಾತರು ಭಯದಿಂದ ಬದುಕುವ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿ ನೆರೆಯ ಜಿಲ್ಲೆಗಳಿಗೆ ಹಬ್ಬುವ ಆತಂಕ ಇದೆ. ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುವುದು ಬಿಡಿ, ಅವರನ್ನು ಇನ್ನಷ್ಟು ದಮನಿಸುವ ಪ್ರವೃತ್ತಿ ಕಂಡು ಬರುತ್ತಿದೆ. ಇದು ಅರಸು ಅವರ ಅಹಿಂದ ರಾಜಕೀಯ ಪರಂಪರೆ ಮುಂದೊಯ್ಯುವ ವಿಧಾನ ಖಂಡಿತ ಅಲ್ಲ.

ಹೀಗೆ ಅರಸು ಅವರ ರಾಜಕೀಯ ಸಾಧನೆಗಳ ಪರಂಪರೆಯನ್ನು ಯಾವುದೇ ಕ್ಷೇತ್ರದಲ್ಲಿ ಮುಂದೊಯ್ಯದೆ (ಬದಲಾಗಿ ಹಿಂದೊಯ್ಯುತ್ತಿರುವ) ಕಾಂಗ್ರೆಸ್ ಪಕ್ಷ, ಸರಕಾರ, ಮತ್ತು ಮುಖ್ಯಮಂತ್ರಿ ಸಿದ್ಧರಾಮಯ್ಯರವರು ಆಚರಿಸಿದ ಅರಸು ಶತಮಾನೋತ್ಸವ ಪೂರ್ಣವಾಗಿ ಅರ್ಥಹೀನವಾಗಿತ್ತು.

ರಾಜದ್ರೋಹದ ರಾಜಕೀಯ ನಿಲ್ಲಿಸಿ

ಎಸ್.ವೈ. ಗುರುಶಾಂತ್

ಮೊನ್ನೆ ದೆಹಲಿಯ ಕೆಂಪು ಕೋಟೆಯ ಮೇಲಿಂದ ಪ್ರಧಾನಿ ನರೇಂದ್ರ ಮೋದಿಯವರ ಭಾಷಣಕ್ಕೆ ತಲೆದೂಗಿದವರು ವಿರಳ ಅಥವಾ ಸಿದ್ಧಗೊಳಿಸಿದ ವಂದಿಮಾಗಧರೇ ಅಧಿಕವೆಂದು ಹೇಳಬಹುದು. ಅಬ್ಬರವನ್ನು ಬಿಟ್ಟರೆ ಪ್ರ ಧಾನಿ ಮಾತುಗಳಲ್ಲಿ ಇರಬೇಕಾದ ಸತ್ವ ಇರಲಿಲ್ಲ. ಬ್ರಿಟಿಶ್ ವಸಾಹತುಶಾಹಿಯ ವಿರುದ್ಧ ಭಾರತದ ಜನತೆಯ ಅಪಾರ ತ್ಯಾಗ ಬಲಿದಾನಗಳ ಇತಿಹಾಸ, ಪರಂಪರೆಯನ್ನು ಮತ್ತೇ ನೆನೆಯಬೇಕಿತ್ತು. ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಡೆಸಬೇಕಾದ ಸಂಗ್ರಾಮ ಸವಾಲುಗಳನ್ನು ಗುರುತಿಸಬೇಕಿತ್ತು.

ಮುಖ್ಯವಾಗಿ ಸ್ವಾತಂತ್ರ ಸಂಗ್ರಾಮದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ, ಇಂದು ದೇಶಕ್ಕೆ, ಜಗತ್ತಿಗೆ ಬೆದರಿಕೆಯಾಗಿರುವ ಅಮೇರಿಕನ್ ನೇತೃತ್ವದ ಸಾಮ್ರಾಜ್ಯಶಾಹಿಗಳ ದಾಳಿಗಳು, ಹಂಚಿಕೆಗಳ ಬಗ್ಗೆ ವಿವರಿಸಿ ಜನತೆಯಲ್ಲಿ ದೇಶಪ್ರೇಮದ ನೈಜತೆಯನ್ನೂ ಬೆಳಸಬೇಕಿತ್ತು.

ಆದರೆ ಇವಾವುಗಳನ್ನು ಮೋದಿಯವರು ಮಾತನಾಡಲೇ ಇಲ್ಲ. ಕೆಂಪು ಕೋಟೆಯ ಮೇಲಿನ ಐತಿಹಾಸಿಕ ಸಂದರ್ಭವನ್ನು ಬಿಜೆಪಿ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳ 'ಸಾಧನೆ'ಗಳನ್ನು ಪ್ರಚಾರಿಸಲು ಮಾತ್ರ ಬಳಸಿದರು. ಮಾತ್ರವಲ್ಲ, ಸಾಮ್ರಾಜ್ಯಶಾಹಿ ಹುನ್ನಾರಗಳ ವಿರುದ್ಧ ಜನತೆ ಸನ್ನದ್ಧವಾಗಿಸುವ ಬದಲು ನೆರೆ ಹೊರೆ ದೇಶಗಳ ಜೊತೆ ಕದನ ಮಾಡಲು ಸಿದ್ಧ ಎಂಬ ಪ್ರಚೋದನಾತ್ಮಕ ಮಾತುಗಳನ್ನು ಆಡಿದರು. ಅವರ ಭಾಷಣದಲ್ಲಿ ಪ್ರಸ್ತಾಪಿಸಿದ ಬಲೂಚಿಸ್ತಾನದ ಪ್ರಶ್ನೆ ಎಂತಹ ಗಂಭೀರ ಅಂತರಾಷ್ಟ್ರೀಯ ಪರಿಣಾಮ ಬೀರೀತು ಎಂಬ ಕನಿಷ್ಟ ಎಚ್ಚರಿಕೆಯೂ ಇಲ್ಲದಿರುವುದನ್ನು ಮುತ್ಸದಿತನ ಎನ್ನಲಾದೀತೆ? ಅಥವಾ ಯೋಜಿತ ಆಟದ ಹಂಚಿಕೆಯ ಭಾಗವೇ?

ಯಾಕೆಂದರೆ ಬಲೂಚಿಸ್ತಾನದ ಪ್ರಶ್ನೆಯನ್ನು ಎತ್ತುವ ಮೂಲಕ ಕಾಶ್ಮೀರದ ಪ್ರಶ್ನೆಯಲ್ಲಿ ಪಾಕಿಸ್ತಾನಕ್ಕೆ ಎದಿರೇಟು ಹಾಕಿದ್ದೇನೆಂದು ಭಾವಿಸಿದರೆ ಅದು ಕಡು ಮೂರ್ಖತನ. ಒಂದು ವೇಳೆ ಬಲೂಚಿಸ್ತಾನದ ಸಭೆ ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರಸ್ತಾಪಿತಗೊಂಡು ಭಾರತ ಅದಕ್ಕೆ ತಗುಲಿಕೊಂಡಿದೆ ಎಂದ-ರೆ ಕಾಶ್ಮೀರದ ಪ್ರಶ್ನೆ ಅಂತರಾಷ್ಟ್ರೀಯ ವೇದಿಕೆಯಲ್ಲಿ ಚರ್ಚೆಯಾಗಬಾರದೇಕೆ ಎಂದು ಪಾಕಿಸ್ತಾನಕ್ಕೆ ಕ್ಯಾತೆ ತೆಗೆಯಲು ಇಂಬು ನೀಡದೇ? ಕಾಶ್ಮೀರ ಹೇಗೆ ಭಾರತದ ಆಂತರಿಕ ವಿಚಾರ ಎಂದು ಸದಾ ಪ್ರತಿಪಾದಿಸುತ್ತಾ ಬರಲಾಗಿದೆಯೋ ಹಾಗೇ ಬಲೂಚಿಸ್ತಾನದ ಪ್ರಶ್ನೆಯೂ ಆಂತರಿಕ ವಿಷಯ. ಪಾಕಿಸ್ತಾನ ಕೆಣಕಿ ದೇಶಪ್ರೇಮ ಬಡಿದೆಬ್ಬಿಸುವ ಬಿಜೆಪಿ, ಎನ್‌ಡಿಎ ಸರ್ಕಾರ ಅಂತಿಮವಾಗಿ ಅಮೇರಿಕಾದಂತಹ ಸಾಮ್ರಾಜ್ಯಶಾಹಿಗಳ ತಂತ್ರ-ಕ್ಕೆ ಅನುಗುಣವಾಗಿ ವರ್ತಿಸುತ್ತಿರುವುದು ಗಂಭೀರ ವಿಚಾರ.

ಹೌದು! ಎರಡು ವರುಷಗಳನ್ನು ಅಗಾಧ ಸಾಧನೆ ಮೂಲಕ ಕಳೆದಿದ್ದೇವೆ ಎಂದು ಹೇಳಿಕೊಳ್ಳುವ ಬಿಜೆಪಿಗೆ ನಿಜವಾಗಿಯೂ ಜನರ ಎದುರು ನಿಲ್ಲುವ ಆತ್ಮವಿಶ್ವಾಸ ಇದೆಯೋ? ಇಲ್ಲ. ಎಲ್ಲ ರಂಗಗಳಲ್ಲಿಯೂ ವಿಫಲವಾಗಿರುವ ಮೋದಿ ಅದರ ಹಿಂದಿರುವ ಆರೆಸ್ಸೆಸ್‌ಗಳಿಗೆ ಹುಸಿ ದೇಶಪ್ರೇಮ, ಭಾವೋನ್ಮಾದಗಳ ಸೃಷ್ಟಿಸಿ ಜನರನ್ನು ದಿಕ್ಕುತಪ್ಪಿಸುವುದು ಬಿಟ್ಟರೆ ಬೇರೇನು ಸಾಧ್ಯ?

ಹಾಗಾಗಿ, ಮೋದಿ ಗೋರಕ್ಷಣೆ ಹೆಸರಿನಲ್ಲಿ ದಲಿತರ ಮೇಲೆ ಹಲ್ಲೆಯಾದರೆ ನನ್ನ ಮೇಲೆ ಹಲ್ಲೆ ಮಾಡಿ, ಕೊಲ್ಲಿ ಎಂದು ಅಹ್ವಾನಿಸುತ್ತಾ ದಲಿತರ ರಕ್ಷಣೆ ಬಗ್ಗೆ ಅಬ್ಬರಿಸುತ್ತಿರುವಾಗಲೇ ದಲಿತರ ಹತ್ಯೆಗಳು ನಡೆದೇ ಇವೆ. ಇದೀಗ ಬಿಜೆಪಿಯ ಕಾರ್ಯಕರ್ತನನ್ನೇ 'ಗೋರಕ್ಷಕ'ರು ಕೊಂದೇ ಹಾಕಿದ್ದಾರೆ!

ಅದರಂತೆ ಈ ವಾರದಾದ್ಯಂತ ಕರ್ನಾಟಕದಲ್ಲಿಯೂ ಸಂಘಪರಿವಾರಿಗಳು ದೇಶ ರಕ್ಷಣೆ, ದೇಶಪ್ರೇಮ, ದೇಶದ್ರೋಹಿಗೆ ಶಿಕ್ಷೆ ಕೊಡಿಸುವ ಕೈಂಕರ್ಯದಿಂದ ದ್ವೇಷಕಾರಿ ಸ್ಥಿತಿಯನ್ನು ನಿರ್ಮಿಸುತ್ತಿದ್ದಾರೆ. ಕಾಶ್ಮೀರದ ಜನರ ಸ್ಥಿತಿ ಬಗ್ಗೆ 'ಅಮ್ನೆಸ್ಟಿ ಇಂಟರ್ ನ್ಯಾಷನಲ್' ಸಂಸ್ಥೆ ಬೆಂಗಳೂರಿನಲ್ಲಿ 'ಬ್ರೋಕನ್ ಫ್ಯಾಮಿಲೀಸ್' ಎಂಬ ಕಾರ್ಯಕ್ರಮದಲ್ಲಿ ದೇಶದ್ರೋಹದ ಘೋಷಣೆ ಕೂಗಲಾಗಿದೆಯೆಂದು ತಕರಾರು ಎತ್ತಿ ದೇಶದ್ರೋಹಿಗಳನ್ನು ಶಿಕ್ಷಿಸಿ ಎಂದು ಎಬಿವಿಪಿ ಯನ್ನು ಬೀದಿಗೆ ಇಳಿಸಿದ್ದಾರೆ.

ಅಲ್ಲಿ 'ಅಜಾದಿ ಘೋಷಣೆ'ಯನ್ನು ಕೂಗಲಾಯಿತು! ಭಾರತೀಯ ಸೈನ್ಯವನ್ನು ಅವಹೇಳನ ಮಾಡಲಾಯಿತು ಎಂಬುದು ಸಂಘ ಪರಿವಾರಿಗಳ ಆರೋಪ. ಇದಕ್ಕೆ ತಮ್ಮಲ್ಲಿ ಸಾಕ್ಷಗಳು, ವೀಡಿಯೋಗಳಿವೆ ಎಂದು ಹೇಳಿರುವರಾದರೂ ಅಂತಹವುಗಳನ್ನು ಪೋಲೀಸರಿಗಾಗಲೀ, ಮಾಧ್ಯಮಗಳೆದುರಾಗಲೀ ನೀಡಿಲ್ಲ ಎಂಬುದು ಗಮನಿಸಬೇಕಾದ ಅಂಶ.

ತಾವು ಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಶ್ಮೀರಿ ಪಂಡಿತರನ್ನು ಒಳಗೊಂಡು ಅಲ್ಲಿಯ ಜನರ ಕಷ್ಟ-

ಪುಟ 4 ಕ್ಕೆ

ಉನಾ ದಲಿತ ಯಾತ್ರಾ ಬೆಂಬಲಿಸಿ ಸ್ವಾತಂತ್ರ್ಯ ದಿನಾಚರಣೆ



ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ವತಿಯಿಂದ ಆಗಸ್ಟ್ 14ರಂದು ಸಂಜೆ 6 ಗಂಟೆಯಿಂದ ಮಧ್ಯರಾತ್ರಿ 12 ಘಂಟೆಯ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಧ್ಯರಾತ್ರಿ ಧರಣಿ ನಡೆಸಿದರು. ಗುಜರಾತ್‌ನ ಊನಾ ಮಹಾರ್‍ಯಾಲಿ ಬೆಂಬಲಿಸಿ, ಗೋಹತ್ಯೆ ನಿಷೇಧ ಕಾಯ್ದೆ ವಿರೋಧಿಸಿ, ದಲಿತ–ಅಲ್ಪಸಂಖ್ಯಾತರ ಆಂತರಿಕ ಸ್ವಾತಂತ್ರ್ಯಕ್ಕಾಗಿ, ದಲಿತರಿಗೆ ಸ್ವಾತಂತ್ರ್ಯ ಸಿಗದ 70ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲೂ ದೇಶದಲ್ಲಿ ಹೆಚ್ಚುತ್ತಿರುವ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಕೊಲೆಗಳನ್ನು ಖಂಡಿಸಿ ಪ್ರತಿಭಟನೆಗೆ ಕರೆ ನೀಡಲಾಗಿತ್ತು.

ಬೆಂಗಳೂರು :

ಟೌನ್‌ಹಾಲ್ ಮುಂಭಾಗ ನಡೆದ ಧರಣಿಯಲ್ಲಿ ಕಲಾವಿದರಾದ ರಾಮಕೃಷ್ಣರವರು ಮಾತನಾಡಿ "ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ದಲಿತರ ಮೇಲೆ ಧಾಳಿಗಳು ಹೆಚ್ಚಾಗುತ್ತಿವೆ. ದಲಿತರಿಗೆ ರಕ್ಷಣೆ ಇಲ್ಲವಾಗಿದೆ. ಹಿಂಸಾತ್ಮಕವಾಗಿ ಹಲ್ಲೆ ನಡೆಸಲಾಗುತ್ತಿದೆ. ಎಂದು ತಿಳಿಸಿದರು.



ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿರವರು "ಗುಜರಾತ್ ಊನಾದಲ್ಲಿ ಇತ್ತೀಚೆಗೆ ದಲಿತರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆದಿದ್ದು ಇದನ್ನು ಖಂಡಿಸಿ ಅಹಮದಬಾದ್‌ನಿಂದ ಊನಾ ವರೆಗೆ ಹಮ್ಮಿಕೊಂಡಿರುವ ದಲಿತ ಅಸ್ಮಿತಾ ಯಾತ್ರೆಯನ್ನು ಬೆಂಬಲಿಸಿ ಮತ್ತು ರಾಜ್ಯದಲ್ಲಿ ಚಿಕ್ಕಮಗಳೂರು ಸೇರಿದಂತೆ ದಲಿತರ ಮೇಲಿನ ದಾಳಿ ಖಂಡಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ದಲಿತರ ಮೇಲಿನ ಧಾಳಿ ಖಂಡಿಸಿ ದಲಿತ ಸಂಘರ್ಷ ಸಮಿತಿ (ಭೀಮವಾದ) ಸಂಘಟನೆ ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರು ಮತ್ತು ದಲಿತ ಹಕ್ಕುಗಳ ಸಮಿತಿ ಜಂಟಿಯಾಗಿ ಪ್ರತಿಭಟನೆ ನಡೆಸಿದರು. ಡಿ.ಹೆಚ್.ಎಸ್ ಜಿಲ್ಲಾ ಸಂಚಾಲಕರಾದ ಎನ್.ನಾಗರಾಜ್‌ರವರು ಸ್ವಾಗತ ಮಾಡಿ ನಿರೂಪಣೆ ಮಾಡಿದರು. ಪ್ರತಿಭಟನೆ ಸಂದರ್ಭದಲ್ಲಿ ಸುರಿದ ಭಾರಿ ಮಳೆಯನ್ನು ಲೆಕ್ಕಿಸದೆ ಕಾರ್ಯಕರ್ತರು ಉತ್ಸಾಹದಿಂದ ಧರಣಿ ನಡೆಸಿದರು.

ಪ್ರೊ.ಟಿ.ಆರ್.ಚಂದ್ರಶೇಖರ್ ಮತ್ತು ರಾಜ್ಯ ಮುಖಂಡರಾದ ಚಂದ್ರಪ್ಪ ಹೊಸ್ಕೆರಾ, ಕೆ.ಮಹಾಂತೇಶ್, ಶರಣಪ್ಪ, ಲಿಂಗರಾಜು, ಬಿ.ರಾಜಶೇಖರಮೂರ್ತಿ, ಹೆಚ್.ಜಿ.ನಾಗಣ್ಣ, ಎನ್.ರಾಜಣ್ಣ, ವನಜಾ, ಕವಿತಾ, ಪಿ.ಮುನಿರಾಜು, ಡಿ.ಮಹದೇಶ್, ರಂಗಪ್ಪ, ಆರ್. ಚಂದ್ರತೇಜಸ್ವಿ, ಚಿಕ್ಕರಾಜು, ಕಾರ್ಮಿಕ ಮುಖಂಡರಾದ ಹೆಚ್.ಎನ್.ಗೋಪಾಲಗೌಡ, ವಿ.ಕೋದಂಡರಾಮ್, ಮೀನಾಕ್ಷಿ ಸುಂದರಂ, ರುದ್ರಮೂರ್ತಿ, ಬಿ.ಎನ್. ರಘು, ಮಹಿಳಾ ಸಂಘಟನೆ ಮುಖಂಡರಾದ ಕೆ.ಎಸ್.ಲಕ್ಷ್ಮಿ, ಶಾರದಾ ಕೆ.ಎಸ್. ಶ್ರೀಮತಿ, ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

ಲಿಂಗರಾಜು, ಕೆ.ಎಸ್.ಲಕ್ಷ್ಮೀ, ಸ್ವಾಮಿ ತಂಡದವರು ದಲಿತ ಹೋರಾಟದ ಹಾಡುಗಳನ್ನು ಹಾಡಿದರು.

ಮಂಡ್ಯ :

ದಲಿತ ಹಕ್ಕುಗಳ ಮಂಡ್ಯ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಆಗಸ್ಟ್ 14 ರಂದು ಸಂಜೆ 6 ಗಂಟೆಯಿಂದ 15ರ ಬೆಳಿಗ್ಗೆ 8 ಗಂಟೆಯವರೆಗೆ ಧರಣಿ ನಡೆಸಿದರು. ಮೊದಲಿಗೆ ಮಂಡ್ಯದ ಅಂಬೇಡ್ಕರ್ ವೃತ್ತದಿಂದ ಪಂಜಿನ ಮೆರವಣಿಗೆ ಮೂಲಕ ಹೊರಟ ಕಾರ್ಯಕರ್ತರು ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ತಮಟೆ ಭಾರಿಸುತ್ತಾ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬಿಡಾರ ಹೂಡಿದರು.

ಕಾರ್ಯಕ್ರಮವನ್ನು ಬೆಂಬಲಿಸಿ ಜನಶಕ್ತಿ ಸಂಘಟನೆ, ಬೌದ್ಧ ಮಹಾಸಭಾ ಮುಖಂಡರು, ಸಿ.ಐ.ಟಿ.ಯು ಜಿಲ್ಲಾ ಮುಖಂಡರಾದ, ಸಿ. ಕುಮಾರಿ ಮಾತನಾಡಿದರು. ನಂತರ ಎಲ್ಲರಿಗೂ ಗೋಮಾಂಸದ ಬಿರಿಯಾನಿ ಬಡಿಸಲಾಯಿತು. ರಾತ್ರಿ ಪೂರಾ ಕುಳಿತ ಧರಣಿಯಲ್ಲಿ ಹಾಡುಗಳು, ಹಾಡಿನ ಮಧ್ಯೆ ಘೋಷಣೆ ಕೂಗುತ್ತಾ ಕಾರ್ಯಕರ್ತರನ್ನು ಹುರಿದುಂಬಿಸಲಾಯಿತು. ಮರುದಿನ ಧರಣಿ ಮುಂದುವರೆಸಿ ಬೆಳಿಗ್ಗೆ 8 ಗಂಟೆಗೆ ನೂತನ ಜಿಲ್ಲಾಧಿಕಾರಿ ಅವರು ಧರಣಿ ಸ್ಥಳಕ್ಕೆ ಸರ್ಕಾರಿ ತಂಡದೊಂದಿಗೆ ಆಗಮಿಸಿ ಮನವಿ ಪಡೆದು ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು. ನಂತರ ಧರಣಿಯನ್ನು ಅಂತ್ಯಗೊಳಿಸಲಾಯಿತು.

ಮುಖಂಡರಾದ ಆರ್.ಕೃಷ್ಣ, ಎನ್.ರಾಜೇಂದ್ರ ಸಿಂಗ್ ಬಾಬು, ಅಂಬೂಜಿ, ಬಿ.ಜೆ. ಕುಮಾರ್, ಅವಿನಾಶ್, ಪುಟ್ಟಮಾದೇಗೌಡ, ಗೌರಮ್ಮ, ಜಯಲಕ್ಷ್ಮಮ್ಮ, ಭರತ್‌ರಾಜ್, ರಮೇಶ್, ಶಿವರಾಮು, ಸುರೇಶ್, ಮಂಜುನಾಥ್, ನಾಗರಾಜು, ಮಂಜು ಭಾಗವಹಿಸಿದರು.

ಮೈಸೂರು:

ಜಿಲ್ಲೆಯಲ್ಲಿ ಮೇಣದ ಬತ್ತಿ ಮೆರವಣಿಗೆ ಹಾಗೂ ಧರಣಿ ಸಭೆ ನಡೆಸಲಾಯಿತು. ಹಿರಿಯ ಸಾಹಿತಿಗಳಾದ ಪ್ರೋ.ಅರವಿಂದ ಮಾಲಗತ್ತಿ, ಹೊರೆಯಾಲ ದೊರೆಸ್ವಾಮಿ, ಮುಖಂಡರಾದ ಬಸವರಾಜು, ಜಗದೀಶ್ ಮತ್ತು ದಲಿತ ಹಕ್ಕುಗಳ ಸಮಿತಿ ಹಾಗೂ ಎಡಪಕ್ಷಗಳ ಮುಖಂಡರು ಭಾಗವಹಿಸಿದ್ದರು.

ಇದೇ ರೀತಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಧ್ಯರಾತ್ರಿ ರ್‍ಯಾಲಿ ಮತ್ತು ಧರಣಿ ನಡೆಸಿ ದಲಿತರ ಮೇಲಿನ ಹಲ್ಲೆಯನ್ನು ಖಂಡಿಸಿದ್ದಾರೆ. ■

ರಾಜದ್ರೋಹದ ರಾಜಕೀಯ................ ಪುಟ 3 ರಿಂದ

ಕೋಟಲೆಗಳನ್ನು ಕೇಳಲಾಗಿದೆ ಮಾತ್ರ. ತಾವು ಅಂತಹ ಘೋಷಣೆ ಕೂಗಿಲ್ಲ ಎಂದು ಅಮ್ನೆಸ್ಟಿ ಸಂಘಟನೆ ಮುಖಂಡರು ಸ್ಪಷ್ಟಪಡಿಸಿದ್ದಾರೆ. ಈಗ ತಿಳಿದಂತೆ ಅಹವಾಲು ಹೇಳಿಕೊಳ್ಳುವಲ್ಲಿ ಭಾಗಿಯಾದ ಕಾಶ್ಮೀರದ ಜನ ಸೈನ್ಯದಿಂದ ಆಗುತ್ತಿರುವ ತೊಂದರೆ, ದೌರ್ಜನ್ಯಗಳನ್ನು ಪ್ರಸ್ತಾಪಿಸಿದ್ದಾರೆಂದು ತಿಳಿದಿದೆ. ಅಲ್ಲದೆ ಒಂದು ಸಣ್ಣ ನಾಟಕದ ಮೂಲಕವೂ ಅದನ್ನು ಅಭಿವ್ಯಕ್ತಗೊಳಿಸಲಾಗಿದೆ ಎಂದು ಸ್ಪಷ್ಟ ಪಡಿಸಿದ್ದಾರೆ. ಈ ಕಾರ್ಯಕ್ರಮ ನಡೆಯುತ್ತಿರುವಾಗಲೇ ಎಬಿವಿಪಿ ಯವರು ಗಲಾಟೆಯನ್ನು ನಡೆಸಿದ್ದಾರೆ. ಬಳಿಕ ಪ್ರತಿಭಟನೆ, ಮಾಧ್ಯಮಗಳ ಅಬ್ಬರ ಒತ್ತಡಗಳಿಂದ ಕರ್ನಾಟಕದ ಪೋಲೀಸರು ಎಬಿವಿಪಿ ದೂರು ಅನ್ವಯಿಸಿ ಸಂಘಟಕರ ಮೇಲೆ ಭಾರೀ ಭಾರತೀಯ ಅಪರಾಧ ಸಂಹಿತೆ 124–ಎ, ವಿಧಿಯಂತೆ ದೇಶದ್ರೋಹದ ಆರೋಪದಡಿ ಎಫ್‌ಐಆರ್ ದಾಖಲಿಸಿದ್ದಾರೆ. ಇದಾದನಂತರ ಆ ಸಂಘವನ್ನೂ ನಿಷೇಧಿಸಿ ಎಂದೂ ಒತ್ತಾಯ ಬಂದಿದೆಯಲ್ಲದೇ ಕೇಂದ್ರ ಸರ್ಕಾರ ಬಿಜೆಪಿ ರಾಜ್ಯ ನಾಯಕರ ಒತ್ತಾಯದಂತೆ ತನಿಖೆಗೂ ಆದೇಶಿಸಿದೆ.

ಎಫ್‌ಐಆರ್ ದಾಖಲಿಸಿರುವುದರಿಂದ ಅವರನ್ನೂ ಬಂಧಿಸಿ, ನಿಷೇಧಿಸಿ ಎನ್ನುವ ಸಂಘಪರಿವಾರಿಗಳ ಬೇಡಿಕೆಯನ್ನು ಏಕಾಏಕಿ ಒಪ್ಪುವುದು ಕಷ್ಟ ಎಂಬ ಇಕ್ಕಟ್ಟಿನಲ್ಲಿ ಸರ್ಕಾರ ಇದೆ. ರಾಜದ್ರೋಹದಂತಹ ಮೊಕದ್ದಮೆ ಹೂಡುವಾಗ ಕೇವಲ ಯಾರೋ ದೂರು ಕೊಟ್ಟರು ಎಂದು ಕೇಸ್ ಹಾಕಲಾದೀತೇ? ಅದರಲ್ಲೂ ಇನ್ನೊಂದೆಡೆ ಪೊಲೀಸ್ ಇಲಾಖೆಯೆ ತಾನು ವಶಪಡಿಸಿಕೊಂಡ ವಿಡಿಯೋ ಹಾಗೂ ಹಾಜರಿದ್ದವರ ಸಾಕ್ಷಿ, ಮಾಹಿತಿ ಪರಿಶೀಲಿಸುತ್ತಿರುವಾಗ ಅಂತಹ ಮೊಕದ್ದಮೆ ಹೂಡಿದ್ದು ಗಂಭೀರ ಲೋಪ. ತಾನು ಗೋಜಲಿನಲ್ಲಿ ಸಿಕ್ಕಿಕೊಂಡ ಬಳಿಕ ವಿವರವಾದ ತನಿಖೆಯ ನಂತರವೇ ಕ್ರಮ ಎಂದು ಸರ್ಕಾರ ಆಡುತ್ತಿದೆ.

ಎಬಿವಿಪಿ, ಬಿಜೆಪಿಯ ಮುಖಂಡರು ವಾದಿಸುವಂತೆ ಅಲ್ಲಿ ನಡೆದ ರಾಜದ್ರೋಹವೇನು? ಭಾರತೀಯ ಸೈನ್ಯದ ಪಾತ್ರವನ್ನು ಟೀಕಿಸುವುದು ರಾಜದ್ರೋಹವಾದೀತೆ? ಇಲ್ಲಿ ಸೈನ್ಯದೇ ಸ್ವತಂತ್ರ ಪಾತ್ರ ಎಂಬುದಿರುವುದಿಲ್ಲ. ಆಳುವ ಸರ್ಕಾರದ ಅಣತಿಯನ್ನು ಸೈನ್ಯ ಪಾಲಿಸುತ್ತಿದೆ. ಕಾಶ್ಮೀರದಲ್ಲಿ ವಿಶೇಷ ಸೈನ್ಯಾಧಿಕಾರದ ಪಡೆಗಳ ಕಾಯ್ದೆಯಡಿ ಭಾರತ ಸರ್ಕಾರ ತನ್ನದೇ ಪ್ರಜೆಗಳ ಮೇಲೆ ಸೈನ್ಯವನ್ನು ಹರಿಯಬಿಟ್ಟಿದೆ. ಇತ್ತೀಚೆಗೆ ಕಾಶ್ಮೀರದ ಜನರ ಹತ್ಯೆ, ಪ್ರತಿಭಟನೆ ದಮನಗೊಳಿಸಿದ ರೀತಿ ವ್ಯಾಪಕ ಟೀಕೆಗೆ ಒಳಗಾಗಿದೆ. ನಮ್ಮಲ್ಲೂ ಮಹಾದಾಯಿ ನೀರಿಗಾಗಿ ಹೋರಾಟದಲ್ಲಿ ಯಮನೂರು ಮುಂತಾದೆಡೆ ಪೋಲೀಸರ ಮಿತಿ ಮೀರಿದ ದೌರ್ಜನ್ಯವನ್ನು ಖಂಡಿಸಿದರೆ, ಟೀಕಿಸಿದರೆ ಅದು ತಪ್ಪು ಹೇಗಾಗುತ್ತದೆ? ಬಿಜೆಪಿಯೇ ಮಹಾದಾಯಿ ಪೋಲೀಸ್ ದೌರ್ಜನ್ಯಗಳ ಬಗ್ಗೆ ಪ್ರತಿಭಟನೆ ನಡೆಸಿಲ್ಲವೇ? ಮಣಿಪುರದಲ್ಲಿ ಐರೋಮ್ ರವರು ಸೈನ್ಯದ ವಿಶೇಷ ಕಾಯ್ದೆ ರದ್ದು ಪಡಿಸಲು, ದೌರ್ಜನ್ಯ ಖಂಡಿಸಿ ದಶಕಗಳ ಉಪವಾಸ ಸತ್ಯಾಗ್ರಹ ನಡೆಸಿದ್ದು ರಾಜದ್ರೋಹವೇ? ಪ್ರಭುತ್ವದ ಅನ್ಯಾಯಗಳನ್ನು ಸಂವಿಧಾನ ಬದ್ಧ ಹಕ್ಕಿನಡಿ ಪ್ರತಿಭಟಿಸುವುದು ಹಕ್ಕು ಮಾತ್ರವಲ್ಲ, ಕರ್ತವ್ಯವೂ ಕೂಡ ಆಗಿದೆ. ಹೀಗೆ ಪ್ರಜಾಸತ್ತಾತ್ಮಕವಾಗಿ ಪ್ರತಿಭಟಿಸುವವರನ್ನೆಲ್ಲ 'ರಾಜದ್ರೋಹದ' ಅಡಿ ದಮನಿಸುತ್ತ ಹೋದರೆ ಪ್ರಜಾಪ್ರಭುತ್ವಕ್ಕೆ, ನಾಗರೀಕ ಹಕ್ಕುಗಳಿಗೆ ಅರ್ಥವಾದರೂ ಎಲ್ಲಿದೆ?

ನಮ್ಮ ಸಂವಿಧಾನದಲ್ಲಿ 'ರಾಜ್ಯದ್ರೋಹ'ಗಳನ್ನು ದಂಡಿಸುವ ಅವಕಾಶವಿದೆಯಾದರೂ ಅದನ್ನು ಪ್ರಯೋಗಿಸುವಾಗ ಕಡು ಎಚ್ಚರ ಇರಬೇಕು ಎಂದು ಹಿಂದೆ ದೇಶದ ಸರ್ವೋಚ್ಚ ನ್ಯಾಯಾಲಯ ನಿರ್ದೇಶಿಸಿದೆ. ದೇಶದ ಸರ್ಕಾರದ ವಿರುದ್ಧ ಅತೃಪ್ತಿ, ಅಸಹನೆ, ಭಿನ್ನಮತ, ಟೀಕೆ ಅಥವಾ ಪ್ರತಿಭಟನೆ ನಡೆಸುವುದು ರಾಜದ್ರೋಹ ಅಲ್ಲ ಎಂದು 1962 ರಲ್ಲಿ ಕೇದಾರನಾಥ ಸಿಂಗ್ ವಿರುದ್ಧ ಬಿಹಾರ ಸರ್ಕಾರದ ಮೊಕದ್ದಮೆಯಲ್ಲಿ ಸ್ಪಷ್ಟಪಡಿಸಿದೆ. ಹಿಂಸೆ–ಗಲಭೆಗೆ ಪ್ರಚೋದಿಸಿ ಕಾರಣವಾದರೆ ಮಾತ್ರ ಹೊಡಬಹುದು ಆದಾಗ್ಯೂ ನಮ್ಮನ್ನಾಳುವ ಸರ್ಕಾರಗಳು ಅದರಲ್ಲೂ ಬಿಜೆಪಿ ನೇತೃತ್ವದ ಮೋದಿ ಸರ್ಕಾರ 124 ಎ ಕಾಲಂನ್ನು ದಮನಾಸ್ತ್ರವನ್ನು ಪದೇ ಪದೇ ಬಳಸುತ್ತಿದೆ. ಜೆ.ಎನ್.ಯು.ನಲ್ಲಿ ಜವಹಾರಲಾಲು ವಿಶ್ವವಿದ್ಯಾಲಯದಲ್ಲಿ ಕನ್ಹಯ್ಯ ಕುಮಾರ್ ಮತ್ತಿತರರ ಮೇಲೆ ಹೂಡಿದೆ.

ಅದೇ ರೀತಿ ತಮಿಳುನಾಡಿನಲ್ಲಿ ಕೂಡಂಕುಳಂ ಅಣು ವಿದ್ಯುತ್ ಸ್ಥಾವರದ ಸ್ಥಾಪನೆಯ ಅಪಾಯಗಳ ವಿರುದ್ಧ ದನಿ ಎತ್ತಿದ ಕಾರ್ಯಕರ್ತ ಡಾ॥ ಎಸ್.ಪಿ. ಉದಯ ಕುಮಾರ್ ಮತ್ತಿತರ ಮೇಲೆ, ತಮಿಳುನಾಡು ಸರ್ಕಾರದ ಮದ್ಯಪಾನ ನೀತಿ ಟೀಕಿಸಿ ಹಾಡಿದ ಜಾನಪದ ಗಾಯಕ ಕೋವನ್ ರ ಮೇಲೆ, ಗುಜರಾತ್‌ನ ಹಾರ್ದಿಕ್ ಪಟೇಲ್, ಭ್ರಷ್ಟಾಚಾರ ವಿರೋಧಿಸಿ ವ್ಯಂಗ್ಯ ಚಿತ್ರ ರಚಿಸಿದ್ದ ಅಸೀಮ್ ತ್ರಿವೇದಿ ಮೇಲೆ ರಾಜದ್ರೋಹದ ಮೊಕದ್ದಮೆಗಳನ್ನು ಹೂಡಲಾಗಿದೆ. ಅಂದರೆ ನಮ್ಮ ದೇಶದ ಸಾಮಾಜಿಕ ಕಾರ್ಯಕರ್ತರು, ಚಿಂತಕರ ಮೇಲೆ ಈ ಕಾಯ್ದೆಯನ್ನು ಮನಸೋ ಇಚ್ಛೆ ಬಳಸಲಾಗುತ್ತಿದೆ.

ಈ ಕಾಯ್ದೆಯನ್ನು ಬಳಸುವಾಗ ಎಚ್ಚರವಿರಲಿ ಎಂದು ಪದೇ ಪದೇ ನ್ಯಾಯಾಲಯಗಳು ಹೇಳಿದ್ದ ಬಗ್ಗೆಯಾಗಲೀ, ತಾನು ಮಾಡಿದ ಆರೋಪವನ್ನು ಸಮರ್ಥಿಸಲಾಗದ ಬಗ್ಗೆಯಾಗಲೀ ಆಳುವವರಿಗೆ ವಿಷಾದವಿಲ್ಲ. ಈ ಕಾಯ್ದೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಗತ್ಯವೂ ಇಲ್ಲ. ಈ ಕಾಯ್ದೆ ತಂದವರು ಬ್ರಿಟೀ ಷರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮವನ್ನು, ದೇಶಪ್ರೇಮಿ ಹೋರಾಟಗಾರರನ್ನು ದಮನಿಸಲೆಂದು. ಅಂತಹ ಕಾಯ್ದೆ ಭಾರತ ಸ್ವಾತಂತ್ರ್ಯಗೊಂಡ ನಂತರವೂ ಜಾರಿಯಲ್ಲಿ ಇರಿಸಿಕೊಂಡಿರುವುದೇ ವಿಪರ್ಯಾಸ.

ಈಗ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಘಟನೆ ಮತ್ತು ಅದರ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ 'ವಿವರ ಪರಿಶೀಲಿಸ ಬಳಿಕವೇ ಕ್ರಮ' ಎಂಬ ರಾಜ್ಯ ಸರ್ಕಾರದ ನಿಲುವು ಸೂಕ್ತವಾದುದು. 'ಅಮ್ನೆಸ್ಟಿ' ಸಂಘಟನೆಯ ಹಲವು ನಿಲುವು – ಕ್ರಮಗಳ ಬಗ್ಗೆ ಆಕ್ಷೇಪವಿದ್ದರೂ, ಈ ಪ್ರಕರಣದ ನೆಪದಲ್ಲಿ ದಿಢೀರನೇ ಕ್ರಮ ಸರಿಯಲ್ಲ. ಒಂದು ವೇಳೆ ಎಬಿವಿಪಿ ಹೇಳುವಂತೆ, ವಿದೇಶಿ ನೆರವು ಪಡೆಯುವ ಈ ಸಂಘದ ಒಟ್ಟು ಚಟುವಟಿಕೆ, ಹಣಕಾಸಿನ ವ್ಯವಹಾರಗಳನ್ನು ತನಿಖೆಗೆ ಒಪ್ಪಿಸುವುದಿದ್ದರೆ ನಮ್ಮದೇನೂ ತಕರಾರಿಲ್ಲ. ಆದ–ರೆ ಕೇಂದ್ರ ಸರ್ಕಾರ, ಮೋದಿಯವರು, ಬಿಜೆಪಿ ಇಲ್ಲಿಯವರೆಗೆ ಯಾಕೆ ಸುಮ್ಮನಿದ್ದರು? ಬೆಂಗಳೂರಿನ ಕಾರ್ಯಕ್ರಮವನ್ನು ನೆಪವಾಗಿ ಬಳಸುವ ಇರಾದೆ ಕೇಂದ್ರಕ್ಕೆ ಇದೆಯೇ?

ಬೆಂಗಳೂರಿನ ಕಾರ್ಯಕ್ರಮವನ್ನೇ ಮುಂದೆ ಇರಿಸಿ ಜಮ್ಮು–ಕಾಶ್ಮೀರದ ಒಟ್ಟು ಪ್ರಶ್ನೆಯನ್ನೇ ಗೋಜಲಾಗಿಸಲಾಗುತ್ತಿದೆ. ಭಾರತ ಸರ್ಕಾರ, ಆರ್‌ಎಸ್‌ಎಸ್ ವಾದಗಳೇ ಪರಿಹಾರ ಎನ್ನುವಂತೆ ಅಬ್ಬರಿಸಿ, ಜಮ್ಮು ಕಾಶ್ಮೀರ ಭಾರತ–ಪಾಕ್ ಗಡಿ ಸಮಸ್ಯೆ, ಸಂಬಂಧಗಳ ಬಗ್ಗೆ 'ಯುದ್ಧದ ಪರಿಹಾರ'ವನ್ನು, ಯುದ್ಧೋನ್ಮಾದವನ್ನು ಹಂಚಲಾಗುತ್ತಿದೆ.. ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶದಲ್ಲಿ ಜನತೆಗಿಂತ ಸೈನ್ಯವನ್ನು ವಿಪರೀತ ವೈಭವೀಕರಿಸುವುದು ಫ್ಯಾಶಿಸ್ಟ್ ಮನೋಭಾವದ ಬೆಳವಣಿಗೆಗೆ ಸಹಾಯಕವಾಗಲಿದೆ.

ಮೇಲಾಗಿ ಈ ಘಟನೆಯನ್ನೇ ಬಳಸಿ ಪ್ರಗತಿಪರರು, ಎಡಪಂಥೀಯರ ಮೇಲೆ ದಾಳಿ ನಡೆಸಲಾಗುತ್ತಿದೆ. ಸಂಘಪರಿವಾರ ಅದರ ವಕ್ತಾರರಾಗಿರುವ ಮಾಧ್ಯಮಗಳು ಶಾಂತಿಯುತ ಪರಿಹಾರ, ಸಾಮಾಜಿಕ ಸಾಮರಸ್ಯ ಬಯಸುವ ದಮನ ವಿರೋಧಿಸುವ ಶಕ್ತಿಗಳನ್ನು ದಮನಿಸಲು ಬಯಸುತ್ತಿವೆ.

ಈಗಂತೂ ಕರ್ನಾಟಕದಲ್ಲಿ ಇನ್ನೂ ಮುಂದೆ ಅಧಿಕಾರದ ಗದ್ದುಗೆ ತನ್ನದೇ ಎಂಬ ಆತುರದಲ್ಲಿರುವ ಬಿಜೆಪಿ – ಆರ್‌ಎಸ್‌ಎಸ್, 'ಅಮ್ನೆಸ್ಟಿ' ಕಾರ್ಯಕ್ರಮವನ್ನೇ ಬಳಸಿ ರಾಜ್ಯದ ಕಾಂಗ್ರೆಸ್ ಮೇಲೆ ದಾಳಿ ಮಾಡಲು ಹೊರಟಿದೆ. ಪ್ರಕರಣವಿನ್ನೂ ತನಿಖೆಯ ಆವಸ್ಥೆಯಲ್ಲಿರುವಾಗಲೇ ತೀರ್ಪನ್ನು ಪ್ರಕಟಿಸಿರುವ ಬಿಜೆಪಿ ನಾಯಕರು ಕಾಂಗ್ರೆಸ್ ಸರ್ಕಾರ 'ದೇಶದ್ರೋಹಿ'ಗಳನ್ನು ರಕ್ಷಿಸುತ್ತಿದೆ ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ! ಹೀಗೆ ಮಾಡುತ್ತಾ ಕೇಂದ್ರದ ಬಿಜೆಪಿ ವೈಫಲ್ಯ, ದಲಿತರು–ಅಲ್ಪಸಂಖ್ಯಾತರುಗಳ ಮೇಲೆ ಧಾಳಿಗಳು, ಮತ್ತು ಕಾರ್ಪೋರೇಟ ಕಂಪನಿಗಳಲ್ಲಿ ದೇಶವನ್ನೇ ಮಾರುತ್ತಿರುವ ದ್ರೋಹದ ಕೃತ್ಯಗಳನ್ನು ಮರೆ ಮಾಡಲು ಹವಣಿಸುತ್ತಿದ್ದಾರೆ.

ವಿಚಿತ್ರವೆಂದರೆ: ಎಬಿವಿಪಿಯಂತಹ ಸಂಘದ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವ ಬಿಜೆಪಿಯ ಇಂತಹ ಧಾಳಿಗಳಿಗೆ ಎದಿರೇಟು ಕೊಡುವಲ್ಲಿ ಕಾಂಗ್ರೆಸ್ ಪಕ್ಷ, ಸರ್ಕಾರ ಮತ್ತೇ ವಿಫಲವಾಗಿರುವುದು. ಆದ್ದರಿಂದ ಪ್ರಗತಿಪರ, ದೇಶಪ್ರೇಮಿ ಹಾಗೂ ಎಡಶಕ್ತಿಗಳು ಈ ಸನ್ನಿವೇಶದಲ್ಲಿ ಬಿಜೆಪಿ–ಸಂಘಪರಿವಾರದ ಕುತಂತ್ರಗಳನ್ನು ಎದುರಿಸಬೇಕಿದೆ. ●

ದನ ಸಾಗಿಸುತ್ತಿದ್ದ ಪ್ರವೀಣ ಪೂಜಾರಿ ಹತ್ಯೆ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ

ಉಡುಪಿ ಜಿಲ್ಲೆಯ ಹೆಬ್ರಿ ಬಳಿಯ ಸಂತೆ–ಕಟ್ಟೆ ಎಂಬಲ್ಲಿ ದನದ ವ್ಯಾಪಾರ ಮಾಡಿ ಜೀವನ ಸಾಗಿಸುತ್ತಿದ್ದ ಬಿಜೆಪಿ ಕಾರ್ಯಕರ್ತ ಪ್ರವೀಣ ಪೂಜಾರಿ ಎಂಬವರನ್ನು ಬಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಆಗಸ್ಟ್ 18ರಂದು ಮಾರಣಾಂತಿಕ ಹಲ್ಲೆಗೈದು ಹತ್ಯೆ ಮಾಡಿದ್ದು, ಘಟನೆಯನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಮತ್ತೋರ್ವ ಅಕ್ಷಯ ದೇವಾಡಿಗ ಎಂಬವರು ತೀವ್ರವಾಗಿ ಗಾಯಗೊಂಡಿದ್ದಾರೆ. ಶಾಂತಿಯನ್ನು ಬಯಸುವ ಕರಾವಳಿ ಜಿಲ್ಲೆಯ ಜನರು ಇದನ್ನು ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಮನವಿ ಮಾಡುತ್ತದೆ.

ಹಿಂದೆ ಉಡುಪಿ ಜಿಲ್ಲೆಯಲ್ಲಿಯೇ ದನದ ವ್ಯಾಪಾರ ಮಾಡುತ್ತಿದ್ದ ಪಾಟಾಳಿ ಕೃಷ್ಣಯ್ಯ ಎಂಬವರನ್ನು 'ಗೋ ರಕ್ಷಕರು' ಎಂದು ಘೋಷಿಸಿಕೊಂಡ ಕೆಲವು ರಕ್ಕಸರು ಹತ್ಯೆ ನಡೆಸಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಪೊಲೀಸ್ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿರುವುದು ಸಿಪಿಐ(ಎಂ) ಅಭಿನಂದಿಸುತ್ತದೆ. ಅಪರಾಧಿಗಳಿಗೆ ತೀವ್ರ ಶಿಕ್ಷೆ ಆಗುವಂತೆ ಹಾಗೂ ಮುಂದೆ ಇಂತಹ ಘಟನೆಗಳು ನಡೆಯದಂತೆ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉಡುಪಿ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಘಟನೆಯನ್ನು ಖಂಡಿಸಿ ಸಿಪಿಐ(ಎಂ) ಪಕ್ಷದಿಂದ ಮತ್ತು ಡಿವೈಎಫ್ಐ ಸಂಘಟನೆಯಿಂದ ಕುಂದಾಪುರದಲ್ಲಿ ಆಗಸ್ಟ್ 19ರಂದು ಪ್ರತಿಭಟನೆ ನಡೆಸಿದ್ದು, ಪ್ರವೀಣ ಪೂಜಾರಿ ನಿಧನದಿಂದ ಆಘಾತ–ಕ್ಕೆ ಒಳಗಾದ ಅವರ ಕುಟುಂಬದವರಿಗೆ ಹಾಗೂ ಹಿತೈಷಿಗಳಿಗೆ ಸಿಪಿಐ(ಎಂ) ಸಂತಾಪ ಸೂಚಿಸಿದ್ದು, ಉಸ್ತುವಾರಿ ಸಚಿವರು ಮತ್ತು ರಾಜ್ಯ ಸರಕಾರ ಮಧ್ಯಪ್ರವೇಶಿಸಿ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದೆ.

ವರದಿ : ಬಾಲಕೃಷ್ಣ ಶೆಟ್ಟಿ





ಜಾನುವಾರು ಸಾಗಾಣೆ ಮಾಡುತ್ತಿದ್ದ ಬಿಜೆಪಿ ಕಾರ್ಯಕರ್ತನ ಕೊಲೆ

ದಲಿತ ಹಕ್ಕುಗಳ ಸಮಿತಿ ಖಂಡನೆ

ಉಡುಪಿ ಜಿಲ್ಲೆಯ ಬ್ರಹ್ಮಾವರದ ಕೆ–ಂಜೂರು ಪ್ರದೇಶದಲ್ಲಿ ಜಾನುವಾರುಗಳನ್ನು ಟೆಂಪೋದಲ್ಲಿ ಸಾಗಿಸುತ್ತಿದ್ದ ಬಿಜೆಪಿ ಕಾರ್ಯಕರ್ತ ಪ್ರವೀಣ್ ಪೂಜಾರಿ ಮತ್ತು ಆತನ ಜೊತೆಗಾರನ ಮೇಲೆ ಹಿಂದೂ ಜಾಗರಣಾ ವೇದಿಕೆಯ ಪುಂಡರು ಮಾರಾಕಾಸ್ತ್ರಗಳಿಂದ ಹಲ್ಲೆ ಮಾಡಿ ಕೊಲೆಗೈದಿರುವುದನ್ನು ದಲಿತ ಹಕ್ಕುಗಳ ಸಮಿತಿ ಕರ್ನಾಟಕ ಬಲವಾಗಿ ಖಂಡಿಸಿದೆ ಮತ್ತು ತಕ್ಷಣವೇ ಎಲ್ಲಾ ಈ ಪುಂಡರನ್ನು ಕೊಲೆಗೈದ ಮೊಕದ್ದಮೆಯಡಿ ಬಂಧಿಸಲು ಒತ್ತಾಯಿಸಿದೆ.

ಗೋ ಸಂರಕ್ಷಣೆಯ ಹೆಸರಿನಲ್ಲಿ ದೇಶದಾದ್ಯಂತ ನಡೆಯುತ್ತಿರುವ ಮಾನವ ಹತ್ಯೆಗಳ ವಿರುದ್ಧ ಕೇಂದ್ರದ ಬಿಜೆಪಿ ಹಾಗೂ ರಾಜ್ಯದ ಕಾಂಗ್ರೆಸ್ ಸರಕಾರಗಳು ಕಠಿಣ ಕ್ರಮಗಳಿಗೆ ಮುಂದಾಗದೇ ಇರುವುದೇ, ದಲಿತರು ಮತ್ತು ಅಲ್ಪಸಂಖ್ಯಾತರು ಮತ್ತಿತರೇ ಪ್ರಗತಿಪರರ ಮೇಲೆ ಮತ್ತು ದೇಶದ ಸಂವಿಧಾನಾತ್ಮಕ ಹಕ್ಕುಗಳ ಮೇಲೆ ಹಿಂದೂ ಮತಾಂಧ ಪುಂಡರ ಪುಂಡಾಟಿಕೆ ಹೆಚ್ಚಾಗಲು ಕಾರಣವಾಗಿದೆ ಎಂದು ದಲಿತ ಹಕ್ಕುಗಳ ಸಮಿತಿ ತಿಳಿಸಿದ್ದಾರೆ.

ಇಂತಹ ಮತಾಂಧರ ಪುಂಡಾಟಿಕೆಯಿಂದ ರೈತರು ಮತ್ತು ಪಶುಪಾಲಕರಿಗೆ ನಿರುಪಯುಕ್ತ ದನಗಳು ಮತ್ತು ಸತ್ತ ದನಗಳ ವಿಲೇವಾರಿಯ ಸಮಸ್ಯೆಯುಂಟಾಗುತ್ತಿದೆ. ಅದೇ ರೀತಿ, ಜನತೆಯ ಆಹಾರದ ಹಕ್ಕಿನ ಮೇಲೂ ಧಾಳಿಯಾಗಿದೆ.

ಅದೇ ರೀತಿ, ಎಲ್ಲಾ ಹಿಂದುಳಿದ, ದಲಿತ ಹಾಗೂ ಅಲ್ಪ ಸಂಖ್ಯಾತ ಜನಸಮುದಾಯಗಳ ಪ್ರಗತಿಪರ ಸಂಘ ಸಂಸ್ಥೆಗಳು ಇತರೇ ಪ್ರಜಾಸತ್ತಾತ್ಮಕ ಶಕ್ತಿಗಳು ಒಕ್ಕೊರಲಿನಿಂದ ಈ ಪುಂಡರ ಧಾಳಿಗಳನ್ನು ದೊಡ್ಡ ಧ್ವನಿಯಲ್ಲಿ ಪ್ರತಿರೋಧಿಸಬೇಕು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹೇಡಿತನವನ್ನು ವ್ಯಾಪಕವಾಗಿ ಖಂಡಿಸಿ ಎಚ್ಚರಿಕೆ ನೀಡಬೇಕೆಂದು ದಲಿತ ಹಕ್ಕುಗಳ ಸಮಿತಿ ಕರೆ ನೀಡಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಉಳಿಸಿ, ದೇಶದ ಐಕ್ಯತೆ ಬೆಳೆಸಿ : ಎಸ್.ಎಫ್.ಐ

ಅಭಿವ್ಯಕ್ತಿ ಸ್ವಾತಂತ್ರ್ಯ ಉಳಿಸಿ ದೇಶದ ಐಕ್ಯತೆ ಬೆಳೆಸಿ ಎಂಬ ಘೋಷಣೆಯಡಿ ಐಕ್ಯತಾ ಬೆಲ್ಟ್ ಧರಿಸುವ ಮೂಲಕ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಸಂಘಟನೆಯು ಆಗಸ್ಟ್ 18ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದ ಬಳಿ ಪ್ರತಿಭಟನೆ ನಡೆಸಿತು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ "ಎಬಿವಿಪಿ ದೇಶ ಪ್ರೇಮದ ಹೆಸರಿನಲ್ಲಿ ವಿದ್ಯಾರ್ಥಿಗಳ ಕೋಮು ಭಾವನೆಗಳನ್ನು ಕೆರಳಿಸುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ದೇಶದ ಐಕ್ಯತೆಗೆ ಧಕ್ಕೆ ತರುತ್ತಿದೆ. ಬೆಂಗಳೂರಿನ ಮಿಲ್ಲರ್ಸ್ ರಸ್ತೆಯಲ್ಲಿರುವ ಯುನೈಟೆಡ್ ಥಿಯೋಲಾಜಿಕಲ್ ಕಾಲೇಜ್ ಸಂಭಾಗಣದಲ್ಲಿ ಆಗಸ್ಟ್ 13ರಂದು, ಶನಿವಾರ ಅಂತಾರಾಷ್ಟ್ರೀಯ ಮಾನವ ಹಕ್ಕು ಸಂಘಟನೆ ಅಮ್ನೆಸ್ಟಿ ಇಂಟರ್ ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ಕಾಶ್ಮೀರದಲ್ಲಿ ನಡೆಯುತ್ತಿರುವ ಬೆಳವಣಿಗೆ ಕುರಿತು ಸಂತ್ರಸ್ತ ಕಾಶ್ಮೀರಿಗಳು ತಮ್ಮ ಮೇಲೆ ದೌರ್ಜನ್ಯವೆಸಗಿದ ಸೈನ್ಯದ ವಿರುದ್ಧ ಘೋಷಣೆ ಕೂಗಿದ್ದಾರೆಂದು ನೆಪವೊಡ್ಡಿ ಎಬಿವಿಪಿ ನೀಡಿದ ದೂರಿನ ಆಧಾರದಲ್ಲಿ ಕರ್ನಾಟಕ ಪೋಲಿಸರು ಅಕ್ರಮ ಕೂಟ ಸೇರುವಿಕೆ ರಾಷ್ಟ್ರದ್ರೋಹದ ಆಧಾರದಲ್ಲಿ ಮೊಕದ್ದಮೆ ದಾಖಲಿಸಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಖಂಡಿಸುತ್ತದೆ. ಕಾಶ್ಮೀರಿಗಳು ಈ ದೇಶದ ಭಾಗ. ಅಲ್ಲಿನ ಜನತೆಗೆ ದೇಶದ ಉಳಿದ ರಾಜ್ಯಗಳ ಪ್ರಜೆಗಳಂತೆ ತಮ್ಮ ಮೇಲಾದ ದೌರ್ಜನ್ಯವನ್ನು ಖಂಡಿಸುವ, ಪ್ರತಿಭಟಿಸುವ ಧಿಕ್ಕಾರ ಕೂಗುವ ಎಲ್ಲ ಹಕ್ಕುಗಳು ಕೂಡ ಇವೆ. ಇಂತಹ ದೌರ್ಜನ್ಯಗಳಿಂದ ಸಂತ್ರಸ್ಥರಾದ ಕಾಶ್ಮೀರದ ಜನತೆಯ ಪರವಾಗಿ ಮಾನವ ಹಕ್ಕು ಸಂಘಟನೆಗಳು ಸಭೆ ನಡೆಸುವುದು ಸಂತ್ರಸ್ತರು ಸೇನೆಯ ವಿರುದ್ಧ



ಘೋಷಣೆ ಕೂಗುವುದು ಕಾನೂನಾತ್ಮಕವಾಗಿ ನೈತಿಕವಾಗಿ ಯಾವ ಅಪರಾಧವಲ್ಲ ಎಂದರು.

ರಾಜ್ಯ ಉಪಾಧ್ಯಕ್ಷ ಚಿಕ್ಕರಾಜು ಎಸ್ ಮಾತನಾಡಿ, ಅಮ್ನೆಸ್ಟಿ ಸಂವಾದ ನಡೆಸುವಾಗ ಸಂತ್ರಸ್ತ ಕಾಶ್ಮೀರಿಗಳು ಭಾಗವಹಿಸಿದ್ದರು. ತಮಗಾದ ಅನ್ಯಾಯದ ವಿರುದ್ಧ ಸಹಜವಾಗಿ ಆಕ್ರೋಶ ವ್ಯಕ್ತಪಡಿಸಿದರು. ಸೈನ್ಯದ ವಿರುದ್ಧದ ಘೋಷಣೆಯನ್ನು ದೇಶದ್ರೋಹಿ ಘೋಷಣೆ ಕೂಗಲಾಯಿತು ಎಂದು ಗದ್ದಲವೆಬ್ಬಿಸಿದ ಎಬಿವಿಪಿ, ಆಮ್ನೆಸ್ಟಿ ಮತ್ತು ಕಾಶ್ಮೀರಿ ಸಂತ್ರಸ್ತರ ವಿರುದ್ಧ ದೂರು ನೀಡಿದ್ದಾರೆ. ಕಾಶ್ಮೀರಿ ಸಂತ್ರಸ್ತರು ಮತ್ತು ಸಂಘಟಕರ ವಿರುದ್ಧವೇ ಅಕ್ರಮಕೂಟ ರಾಷ್ಟ್ರದ್ರೋಹ ಸೆಕ್ಷನ್ ಗಳ ಅಡಿಯಲ್ಲಿ ಮೊಕದ್ದಮೆ ಹೂಡಿರುವುದು ರಾಜ್ಯದ ಕಾಂಗ್ರೆಸ್ ಸರಕಾರದ ಬದ್ಧತೆಯನ್ನು ಪ್ರಶ್ನಿಸುವಂತೆ ಮಾಡಿದೆ ಎಂದರು.

ಜಿಲ್ಲಾಧ್ಯಕ್ಷ ಕೆ. ವೆಂಕಟೇಶ್ ಮಾತನಾಡಿ "ಎಬಿವಿಪಿ ಮಾಡುತ್ತಿರುವ ಆರೋಪಗಳಿಗೆ ಆಧಾರವಿಲ್ಲವೆಂದು ಅಮ್ನೆಸ್ಟಿ ಸಂಸ್ಥೆಯು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಹಾಗಾಗಿ ಈ ಪ್ರಕರಣವು ಸೂಕ್ತ ತನಿಖೆಯಾಗಬೇಕು ಎಂದು ಎಸ್.ಎಫ್.ಐ ಒತ್ತಾಯಿಸುತ್ತದೆ ಹಾಗೂ ಕಾಶ್ಮೀರದಲ್ಲಿ ತಲೆದೂರಿರುವ ಹಿಂಸಾಚಾರವನ್ನು ನಿಲ್ಲಿಸಲು ಮಾನ್ಯ ಪ್ರಧಾನಿಗಳು ಸಂಸತ್ತಿನ ವೇದಿಕೆಯನ್ನು ಬಳಸಿಕೊಂಡು ಕಾಶ್ಮೀರದ ಜನರಿಗೆ ಸುರಕ್ಷತೆಯನ್ನು ನೀಡಬೇಕೆಂದರು.

ಪ್ರತಿಭಟನೆಯಲ್ಲಿ ಮುಖಂಡರಾದ ವೇಗಾನಂದ್, ಶೃತಿ ನೆಲಮಾಕನಳ್ಳಿ, ತೇಜಸ್ವಿನಿ, ದಿಲೀಪ್, ಮುರಳಿ, ಹರಿಪ್ರಸಾದ್, ವೇಣುಗೋಪಾಲ್, ಶಿವಕುಮಾರ ಸೇರಿದಂತೆ ಅನೇಕರಿದ್ದರು.

ಕಾಶ್ಮೀರಿ ಸಂತ್ರಸ್ತರ ಮೇಲೆ ರಾಷ್ಟ್ರದ್ರೋಹ ಪ್ರಕರಣ ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಸಂಘಟನೆಗಳು ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ.

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎಬಿವಿಪಿ ಅಡ್ಡಿ

ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿಯ ಕಾರ್ಯಕರ್ತರು ಆಗಸ್ಟ್ 17ರಂದು ನಗರದ ಜಿ.ಎಚ್. ಕಾಲೇಜು ಹತ್ತಿರ ರಾಷ್ಟ್ರೀಯ ಹೆದ್ದಾರಿ ಬಳಿ ಸೇರಿ ಪ್ರತಿಭಟನೆ ನಡೆಸಿ. ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎಬಿವಿಪಿ ಅಡ್ಡಿ ಬರುತ್ತಿರುವುದನ್ನು ಖಂಡಿಸಿದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷೆ ರೇಣುಕಾ ಕಹಾರ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ, ಮುಖಂಡರಾದ ಬಸನಗೌಡ ಭರಮಗೌಡ್ರ, ಹೊನ್ನಪ್ಪ ನುಗ್ಗಿಮರದ, ಗಣೇಶ ಗಾಣಿಗೇರ, ಪ್ರಸನ್ನ ಹಿರೇಮಠ, ವಿನಾಯಕ, ಆಶಾ ಮಳ್ಳಳ್ಳಿ, ಲಕ್ಷ್ಮೀ, ಅಪೂರ್ವ ಹೊಳಲ, ಪ್ರಿಯಾ, ಚೈತ್ರಾ ಕಲಾಲ, ಶೃತಿ, ನಿವೇದಿತಾ, ಭಾಗ್ಯಾ, ಶಿವಲೀಲಾ, ಪುಷ್ಪಾ, ಜ್ಯೋತಿ, ರಷ್ಮಿ, ನೇತ್ರಾ, ಕವಿತಾ, ಹಾಗೂ ನೂರಾರು ವಿದ್ಯಾರ್ಥಿನಿಯರು ಬಾಗವಹಿಸಿದ್ದರು.



‘ರಂಗಪ್ಪನ ಹೆಂಡತಿ’ ಮತ್ತು ಮಾರ್ಕ್ಸ್‌ವಾದ

ಪ್ರೊ. ವಿ.ಎನ್. ಲಕ್ಷ್ಮಿನಾರಾಯಣ



ಮಾಸ್ತಿ ಕತೆಯ ‘ರಂಗಪ್ಪನ ಹೆಂಡತಿ’ಯ ಮುಗ್ಧ ಸರಳ ಮಾತುಗಳಲ್ಲಿ ಈ ಬಿಡಿ ಬಿಡಿ ಆಶಯಗಳನ್ನು, ನಿರೀಕ್ಷೆಗಳನ್ನು ಒಟ್ಟಗೂಡಿಸಿ ಹೇಳಬಹುದಾದರೆ ‘ನಾವೆಲ್ಲರೂ ಕ್ಷೇಮ. ನೀವೂ ಕ್ಷೇಮವೆಂದು ನಂಬುತ್ತೇನೆ’ ಎಂದು ಹೇಳಬಹುದಾದ ಸಮಾಜಕ್ಕಾಗಿ ನಮ್ಮ ಎಲ್ಲ ಹೋರಾಟ. ಅಥವಾ ರಂಗಪ್ಪನ ನಿರೀಕ್ಷೆಯನುಸಾರ ಇವನ್ನೇ ಬಿಡಿ ಬಿಡಿಯಾಗಿ, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹೇಳಿದರೂ ಅದು ಈಗಿರುವ ಹುಸಿ ಆಶಯಗಳ ಸಮಾಜದಿಂದ ಬಿಡುಗಡೆ ಪಡೆಯುವುದಕ್ಕಾಗಿ ಮಾಡುವ ಬಿಡಿ ಬಿಡಿ ಹೋರಾಟಗಳಾಗುವುದರ ಬದಲು ಆಮೂಲಾಗ್ರ ಬದಲಾವಣೆಗಾಗಿ ಎಲ್ಲರೂ ಕೂಡಿ ಮಾಡುವ ಸಮಗ್ರ ಹೋರಾಟವಾಗುವುದಾದರೆ ಏನೂ ತೊಂದರೆಯಿಲ್ಲ.

ಮಾಸ್ತಿಯವರು ಬರೆದ ರಂಗಪ್ಪನ ದೀಪಾವಳಿ ಎಂಬ ಕತೆಯಲ್ಲಿನ ಒಂದು ಪ್ರಸಂಗ. ಹೊಸದಾಗಿ ಮದುವೆಯಾದ ರಂಗಪ್ಪನಿಗೂ ಆತನ ಹೆಂಡತಿಗೂ ನಡುವೆ ವಯಸ್ಸು, ವಿದ್ಯಾರ್ಹತೆ, ಪ್ರಬುದ್ಧತೆ ಮತ್ತು ರಸಿಕತೆಗಳ ವಿಷಯದಲ್ಲಿ ಅಗಾಧ ಅಂತರವಿದೆ. ಮದುವೆಯಾದ ಹೊಸದರಲ್ಲಿ ದೂರದ ಊರೊಂದರಲ್ಲಿ ಕೆಲಸ ಮಾಡುವ ರಂಗಪ್ಪ, ಅನಿವಾರ್ಯ ಕಾರಣಗಳಿಂದಾಗಿ ತನ್ನ ಚಿಕ್ಕಪ್ಪ-ಚಿಕ್ಕಮ್ಮರ ಮನೆಯಲ್ಲೇ ಉಳಿಯುವ ತನ್ನ ಹೆಂಡತಿಗೆ ಕಾಗದ ಬರೆಯಲು ಹೇಳುತ್ತಾನೆ. ಹೆಂಡತಿಯ ಕಾಗದವೆಂದರೆ ರಮ್ಯವಾದ ವಿರಹ-ಶೃಂಗಾರಗಳ ಒಕ್ಕಣೆ ಇರುತ್ತದೆಂದು ರಂಗಪ್ಪನ ನಿರೀಕ್ಷೆ. ಆದರೆ ಅವನ ಮುಗ್ಧ ಹೆಂಡತಿಯಿಂದ ‘ಇಲ್ಲಿ ನಾವೆಲ್ಲರೂ ಕ್ಷೇಮವಾಗಿದ್ದೇವೆ. ನೀವೂ ಕ್ಷೇಮವಾಗಿದ್ದೀರೆಂದು ನಂಬುತ್ತೇನೆ’ ಎಂಬ ಒಂದು ಸಾಲಿನ ಕಾಗದ ಬರುತ್ತದೆ. ರಂಗಪ್ಪನಿಗೆ ನಿರಾಶೆ. ಆದರೂ ಬೇಸರಿಸಿಕೊಳ್ಳದೆ ಹೆಂಡತಿಗೆ ಕಾಗದವನ್ನು ವಿವರವಾಗಿ ಬರೆಯುವಂತೆ, ದೊಡ್ಡದಾಗಿ ಬರೆಯುವಂತೆ ಹೇಳುತ್ತಾನೆ. ಹೆಂಡತಿಯಿಂದ ಬರುವ ಮುಂದಿನ ಕಾಗದ ವಿವರವಾಗಿ, ದೊಡ್ಡದಾಗಿ ಇರುತ್ತದೆ. ರಂಗಪ್ಪನಿಗೆ ಸಂತೋಷ. ಆದರೆ ಆ ವಿವರವಾದ, ದೊಡ್ಡದಾದ ಕಾಗದದಲ್ಲಿ, ‘ಇಲ್ಲಿ ನಮ್ಮ ಚಿಕ್ಕಪ್ಪನವರು ಕ್ಷೇಮವಾಗಿದ್ದಾರೆ. ನಮ್ಮ ಚಿಕ್ಕಮ್ಮನವರು ಕ್ಷೇಮವಾಗಿದ್ದಾರೆ. ಅವರ ಕೂಸೂ ಕ್ಷೇಮವಾಗಿದೆ’ ಎಂಬ ಒಕ್ಕಣೆ ಇರುತ್ತದೆ. ಅಕ್ಷರಗಳು ದೊಡ್ಡ ದೊಡ್ಡದಾಗಿ ಇಡೀ ಕಾಗದವನ್ನು ತುಂಬುವಂತೆ ಇರುತ್ತವೆ. ರಂಗಪ್ಪನ ನಿರೀಕ್ಷೆ, ಅವನ ಹೆಂಡತಿಯ ಮುಗ್ಧತೆಗಳ ಅಂತರದಿಂದಾಗಿ ಉಂಟಾಗುವ ಕಂದಕ ಓದುಗರಲ್ಲಿ ವಿನೋದ-ವಿಷಾದ-ಮರುಕಗಳನ್ನು ಉಂಟುಮಾಡುತ್ತವೆ.

ಬಿಡಿ ಬಿಡಿ ಆಶಯಗಳೂ ಹೋರಾಟಗಳೂ

ಭಾರತದ 70ನೆಯ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಎಡಪಂಥೀಯ ಧೋರಣೆಯ ಸಂಪಾದಕರು ಸಂಪಾದಿಸುವ ನಾಡಿನ ಪ್ರತಿಷ್ಠಿತ ಪತ್ರಿಕೆಯೊಂದರ ಆಗಸ್ಟ್ 15 ರ ಸಂಚಿಕೆಯಲ್ಲಿ ಕನ್ನಡದ 30 ಜನ ಪ್ರಗತಿಪರ ಚಿಂತಕರು, ಹೋರಾಟಗಾರರು ಮತ್ತು ಬುದ್ಧಿಜೀವಿಗಳನ್ನು ಫೋಟೋ ಸಹಿತ ಪಟ್ಟಿಮಾಡಿ ಅವರು ಭಾರತದ ಜನರ ಒಳಿತಿಗಾಗಿ ಏನೇನು ಆಗಬೇಕೆಂದು ಯಾವುದ್ಯಾವುದರಿಂದ ಬಿಡುಗಡೆಯನ್ನು ಈ ಜನ ಬಯಸುತ್ತಾರೆ ಅಥವಾ ನಿರೀಕ್ಷಿಸುತ್ತಾರೆ ಎಂದು ಪ್ರತಿಯೊಂದು ಫೋಟೋದ ಕೆಳಗೆ ಟಿಪ್ಪಣಿ ಬರೆದಿದ್ದರು. ಪ್ರಗತಿಪರರ ಆ ಪಟ್ಟಿಯಲ್ಲಿ ಎಡಪಂಥೀಯ, ಗಾಂಧಿವಾದಿ, ಲೋಹಿಯಾವಾದಿ, ಪರಿಸರ, ಮೌಢ್ಯವಿರೋಧಿ, ಯಂತ್ರವಿರೋಧಿ, ಜಾತಿವಿರೋಧಿ, ಅಸ್ಪೃಶ್ಯತೆಯ ವಿರೋಧಿ, ಲಂಚವಿರೋಧಿ, ಕಾರ್ಮಿಕ ನಾಯಕ, ಸಂಸ್ಕೃತಿ ಚಿಂತಕ, ಮೌಲ್ಯನಿಷ್ಠ ರಾಜಕಾರಣದ ಪ್ರತಿಪಾದಕ, ನೈತಿಕ ನಿಲುವಿನ ಬರಹಗಾರ, ಶತಾಯುಷ್ಯದ ಆಸುಪಾಸಿನ ಹೋರಾಟಗಾರ, ಹೀಗೆ ನಾಡಿನ ರಾಜಕೀಯ-ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳ ನಿಸ್ಪೃಹ, ಪ್ರಾಮಾಣಿಕ, ನಿಸ್ವಾರ್ಥ ಜನರ ಹೆಸರು ಪ್ರಾತಿನಿಧಿಕವಾಗಿ ಪ್ರಸ್ತಾಪವಾಗಿತ್ತು. ಒಟ್ಟಿನಲ್ಲಿ ದೇಶದ ರಾಜಕಾರಣದಲ್ಲಿ ಅಗತ್ಯವಾಗಿ ಆಗಬೇಕಾದ ಆಮೂಲಾಗ್ರವಾದ ಬದಲಾವಣೆಯನ್ನು ಈ ಜನರ ಬಿಡಿ ಬಿಡಿ ಆಶಯಗಳು-ನಿರೀಕ್ಷೆಗಳು ಪ್ರತಿನಿಧಿಸುತ್ತಿದ್ದವು.

ದೆಹಲಿ ವಿಶ್ವವಿದ್ಯಾನಿಲಯದ ಕನ್ಹಯ್ಯ ಕುಮಾರ್, ದೇಶದ್ರೋಹದ ಆಪಾದನೆಯಮೇಲೆ ಬಂಧಿತನಾಗಿ, ನಂತರ ಜಾಮೀನಿನಮೇಲೆ ಬಿಡುಗಡೆಯಾದಮೇಲೆ ಜೆಎನ್‌ಯು ಕ್ಯಾಂಪಸ್ಸಿನಲ್ಲಿ ಮಾಡಿದ ಚರಿತ್ರಾರ್ಹ ಭಾಷಣದ ಸಂದರ್ಭದಲ್ಲಿ ಎಡಪಂಥೀಯನಾಗಿ ಆತ ಘೋಷಿಸಿದ ಬಿಡುಗಡೆಯ ಘೋಷಣೆಗಳ ಹಿನ್ನೆಲೆಯಲ್ಲಿ, ಮೇಲೆ ಹೇಳಿದ ಪತ್ರಿಕೆಯಲ್ಲಿ ಪಟ್ಟಿಮಾಡಿದ ವಿವಿಧ ಬಗೆಯ ದೃಷ್ಟಿಕೋನದ, ರಾಜಕೀಯ ಪ್ರಜ್ಞೆಯ, ಸೈದ್ಧಾಂತಿಕ ತಿಳುವಳಿಕೆಯ, ನೈತಿಕ ಆಶಯದ ಬಿಡಿ ಬಿಡಿ ಜನರ ಬಿಡಿ ಬಿಡಿ ಘೋಷಣೆಗಳಾಗಿ ಪ್ರಕಟಗೊಂಡಿವೆಯೆಂಬ ಸತ್ಯ ಯಾವುದೇ ಮಾರ್ಕ್ಸ್‌ವಾದಿಗೆ ಸುಲಭವಾಗಿ ವೇದ್ಯವಾಗುತ್ತದೆ. ಮಾರ್ಕ್ಸ್‌ವಾದೀ ಸಿದ್ಧಾಂತದ ಸಮಗ್ರತೆಯ ದೃಷ್ಟಿಕೋನವನ್ನೂ ಅದು ಎತ್ತಿತೋರಿಸುತ್ತದೆ.

ಬಿಡಿ ಬಿಡಿಯಾಗಿ ಸಾಧಿಸಲಾಗದ್ದು

ಅಂದಮೇಲೆ, ಪತ್ರಿಕೆ ಗುರುತಿಸುವಂತೆ, ನಾಡಿನ ನಿಸ್ಪೃಹ, ಪ್ರಾಮಾಣಿಕ, ನಿಸ್ವಾರ್ಥ, ಪ್ರಗತಿಪರ ಹೋರಾಟಗಾರ-ಚಿಂತಕ-ಬರಹಗಾರರ ಬಿಡಿ ಬಿಡಿ ಆಶಯಗಳ ಹಿಂದಿರುವ ಬಿಡುಗಡೆಯ ಅಭೀಪ್ಸೆಗೂ, ಕನ್ಹಯ್ಯಕುಮಾರ ಏಕವ್ಯಕ್ತಿಯಾಗಿ ಕೈಎತ್ತಿ ಘೋಷಿಸುವ ವಿವಿಧ ಘೋಷಣೆಗಳ ಹಿಂದಿರುವ ಬಿಡುಗಡೆಯ ಅಭೀಪ್ಸೆಗೂ ಏನಾದರೂ ವ್ಯತ್ಯಾಸವಿದೆಯೆ?

ಇದೆ. ಗಾಂಧಿವಾದದ ನೈತಿಕಪ್ರಜ್ಞೆ-ನಿಷ್ಠೆಯ ಅಧಿಕಾರ, ಲೋಹಿಯಾವಾದದ ಜಾತಿರಹಿತ ಸಮಾಜ, ಅಂಬೇಡ್ಕರ್ ಪ್ರತಿಪಾದಿಸಿದ ಸಾಮಾಜಿಕ ಘನತೆಯುಳ್ಳ ಸಮಾನತೆ, ಭ್ರಷ್ಟಾಚಾರದಿಂದ ಮುಕ್ತವಾದ ಅಧಿಕಾರಶಾಹಿ, ಮಾನವತಾವಾದ, ಮೌಢ್ಯಗಳಿಗೆ ಆಸ್ಪದಕೊಡದ ವೈಚಾರಿಕ ನಿಲುವು, ಶ್ರಮಿಕರ ಪರವಾದ ರಾಜ್ಯಾಡಳಿತ, ಜನರ ಕಲ್ಯಾಣವನ್ನು ಆಧರಿಸಿದ ಯಂತ್ರಾಧಾರಿತ ಉತ್ಪಾದನೆ, ಪರಿಸರ ಸಮತೋಲನೆಯ ಅಭಿವೃದ್ಧಿ, ಇವೆಲ್ಲವೂ ಪರಸ್ಪರ ಸಂಬಂಧಿಸಿದ, ಒಂದನ್ನೊಂದು ಆಧರಿಸಿದ, ಬಿಡಿ ಬಿಡಿಯಾಗಿ ಪ್ರತ್ಯೇಕಿಸಲಾಗದ, ಆದ್ದರಿಂದ ಬಿಡಿಬಿಡಿಯಾಗಿ ಸಾಧಿಸಲಾಗದ ಸಾಮಾಜಿಕ ಮತ್ತು ರಾಜಕೀಯ ಗುರಿಗಳು. ಇವನ್ನು ಬಿಡಿ ಬಿಡಿಯಾಗಿ, ಬಿಡಿ ಬಿಡಿಯಾದ ಆಂದೋಲನ, ಚಳುವಳಿಗಳ ಮೂಲಕ ಸಾಧಿಸಲಾಗುವುದಿಲ್ಲ. ಇದು ಸಿದ್ಧಾಂತಗಳ ನಡುವಿನ ಪೈಪೋಟಿಯಲ್ಲ. ಮಾರ್ಕ್ಸ್‌ವಾದದ ತಿಳಿವಿನ ಬೆಳಕಿನಲ್ಲಿ ಉಳಿದ ಸಿದ್ಧಾಂತಗಳ ಇತಿ-ಮಿತಿಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿ.

ಸಮಾಜವಾದ ಆಶಯದಲ್ಲಿ ಒಳ್ಳೆಯದಿದ್ದರೂ ‘ಅನುಷ್ಠಾನದಲ್ಲಿ ಅದು ಪ್ರಾಯೋಗಿಕವಲ್ಲದ’, ‘ಮನುಷ್ಯರ ಮೂಲ ಸ್ವಭಾವಕ್ಕೆ ವಿರುದ್ಧವಾದ’, ‘ಬಲಪ್ರಯೋಗವಿಲ್ಲದೆ ಅನುಷ್ಠಾನಗೊಳಿಸಲಾಗದ’, ‘ಹಿಂಸೆಗೆ ಎಡೆಮಾಡಿಕೊಡುವ’, ‘ಧಾರ್ಮಿಕತೆಗೆ ವಿರುದ್ಧವಾದ’ ಮತ್ತು ‘ಅಮಾನವೀಯವಾದ’ ಸಿದ್ಧಾಂತವಾದ್ದರಿಂದ ಸಮಾಜವಾದವನ್ನು ಹೊರತುಪಡಿಸಿ ಬೇರೆ ಯಾವ ವ್ಯವಸ್ಥೆಯನ್ನು ಬೇಕಾದರೂ ಒಪ್ಪಬಹುದೆಂಬ ಅಭಿಪ್ರಾಯ ಅನೇಕರಿಗಿದೆ. ಅದರ ಅರ್ಥ ಅಂಥವರು ಸಜ್ಜನ, ನಿಸ್ಪೃಹ, ನಿಸ್ವಾರ್ಥ ವ್ಯಕ್ತಿಗಳು ಅಲ್ಲ ಎಂದಲ್ಲ. ಅವರೆಲ್ಲಾ ದಡ್ಡರೆಂದಲ್ಲ. ಅಥವಾ ಹಾಗೆ ಹೇಳುವ ಎಲ್ಲರಿಗೂ ಒಂದಲ್ಲ ಒಂದು ಸ್ವಹಿತಾಸಕ್ತಿ ಇರಲೇಬೇಕೆಂದಿಲ್ಲ. ಎಡಪಂಥೀಯರಲ್ಲದ ಬಹುಪಾಲು ಹೋರಾಟಗಾರರ ಮುಖ್ಯ ಕೊರತೆ ಅವರಿಗೆ ಯಾವುದೇ ಕಾಲದ ಯಾವುದೇ ಸಮಾಜ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹೇಗೆ ಸಂಘಟಿತವಾಗಿರುತ್ತವೆ ಮತ್ತು ಅವನ್ನು ಬದಲಿಸುವ ಶಕ್ತಿಗಳು ಎಂಬ ಸ್ಪಷ್ಟ ತಿಳುವಳಿಕೆಯ ಅಭಾವ.

ಬಂಡವಾಳವಾದದ ಅಸಮಾನತೆ-ವಿರೋಧಾಭಾಸ ಕಾಣದ ಬಿಡಿ ಬಿಡಿ ದೃಷ್ಟಿಕೋಣ

ಜೊತೆಗೆ, ಹೇಗಾದರೂ ಸರಿ ತಮ್ಮ ಹಿತಾಸಕ್ತಿಗಳನ್ನು ಸದ್ಯಕ್ಕೆ ಕಾಪಾಡಿಕೊಂಡರೆ ಸಾಕು, ಯಾರು ಬೇಕಾದರೂ ಸಾಯಲಿ, ಮುಂದೆ ಈ ಭೂಮಂಡಲವೇ ಬೇಕಾದರೂ ನಾಶವಾಗಲಿ ಎಂದು ಬಯಸಲು ಹಿಂದೆಗೆಯದ ಬಂಡವಳಿಗರು ಸಂಘಟಿಸುವ ರಾಜ್ಯಾಧಿಕಾರ, ಆರ್ಥಿಕ ಮತ್ತು ಸಾಮಾಜಿಕ ಸಂರಚನೆ, ರೂಪಿಸುವ ನ್ಯಾಯ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಗಳು, ಪೋಷಿಸುವ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳು ವ್ಯಕ್ತಿಗಳ ಮಟ್ಟದಲ್ಲಿ ಪ್ರಜ್ಞೆಯ ಚೌಕಟ್ಟನ್ನು ನಿರ್ಮಿಸುತ್ತವೆ. ಇವುಗಳ ಆವರಣದಲ್ಲೇ ಹುಟ್ಟಿ, ಬೆಳೆದು, ಹೇಗೇ ಆದರೂ ಇವನ್ನು ಭೇದಿಸಿ ನೋಡಲಾಗದ, ಒಂದಲ್ಲ ಒಂದು ರೀತಿಯಲ್ಲಿ ಫಲಾನುಭವಿಯಾಗಿರುವ ಯಾವುದೇ ವ್ಯಕ್ತಿಯನ್ನು, ಬಂಡವಾಳವಾದ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ ಮತ್ತು ಮುಕ್ತ ಸಮಾಜದ ಆದರ್ಶ ವ್ಯವಸ್ಥೆಯಾಗಿ ಆಕರ್ಷಿಸುತ್ತದೆ. ಕಾಲಕಾಲಕ್ಕೆ ತನ್ನ ಒಡಲಲ್ಲೇ ಅನಿವಾರ್ಯವಾಗಿ ಹುಟ್ಟುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಮತೆ-ವಿರೋಧಾಭಾಸಗಳನ್ನು ತಳಮಟ್ಟದಲ್ಲಿ ಸಮಗ್ರವಾಗಿ ನೋಡದಂತೆ ಬಿಡಿ ಬಿಡಿಯಾಗಿಸುತ್ತದೆ. ಇವುಗಳ ವಿರುದ್ಧ ಹೋರಾಡುವವರನ್ನು ಅಸ್ಮಿತೆ, ಜಾತಿ, ಲಿಂಗ, ನೈತಿಕತೆ ಮತ್ತು ಅಹಿಂಸೆಯ ಹೆಸರಿನಲ್ಲಿ ಬಿಡಿ ಬಿಡಿಯಾಗಿ, ಸಂಘಟಿಸಿಕೊಳ್ಳಲು, ಬಿಡಿ ಬಿಡಿ ಘೋಷಣೆಗಳೊಂದಿಗೆ ಹೋರಾಡಲು ಉತ್ತೇಜಿಸುತ್ತದೆ. ಆಮೂಲಾಗ್ರ ಬದಲಾವಣೆಯ ಸಮಗ್ರ ಗುರಿಯ ಬದಲು ಸೀಮಿತ ಬದಲಾವಣೆ ಮತ್ತು ಸುಧಾರಣೆಗಳ ಬಿಡಿ ಬಿಡಿ ಗುರಿಗಳಿಗಾಗಿ ಹೋರಾಡುವಂತೆ ನಾನಾ ರೀತಿಯಲ್ಲಿ ನಿರ್ದೇಶಿಸುತ್ತದೆ. ಹೋರಾಟಗಾರರಿಗೆ ತನ್ನ ಅಂಗವೇ ಆದ ಸಮಾಜಸೇವೆ-ಸುಧಾರಣಾ ಸಂಸ್ಥೆಗಳ ಮೂಲಕ ಧನಸಹಾಯ, ಅನುದಾನ ಮತ್ತು ಭಾರಿ ಮೊತ್ತದ ಪ್ರಶಸ್ತಿಗಳನ್ನೂ ಕೊಡಮಾಡುತ್ತದೆ.

ಕನ್ಹಯ್ಯಕುಮಾರ್ ಯಾವುದೇ ಸಮಸ್ಯೆ - ವಿವಾದವನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳುವುದರಿಂದ ಅವನು ಕೂಗುವ ಬಿಡಿ ಬಿಡಿ ಘೋಷಣೆಗಳು ಸಮಗ್ರ ಬಿಡುಗಡೆಯ, ಆಮೂಲಾಗ್ರ ಬದಲಾವಣೆಯ ವಿವಿಧ ಮಗ್ಗಲುಗಳನ್ನು ಪ್ರತಿನಿಧಿಸುತ್ತವೆ. ಪತ್ರಿಕೆಯ ಎಡಪಂಥೀಯ ಸಂಪಾದಕರು ಗುರುತಿಸುವ ಹೋರಾಟಗಾರರ, ಚಿಂತಕರ ಮತ್ತು ಸಮಾಜ ಸುಧಾರಕರ ಸದಾಶಯಗಳ ಬಿಡಿ ಬಿಡಿ ಘೋಷಣೆಗಳು ಸಮಗ್ರ ಬಿಡುಗಡೆಯ, ಆಮೂಲಾಗ್ರ ಬದಲಾವಣೆಯ ಮಹದಾಶಯವನ್ನು ಬಿಡಿಬಿಡಿಯಾಗಿ ಒಡೆದು ಬಂಡವಳಿಗರಿಗೆ ಅನುಕೂಲಕರವಾದ ಹುಸಿ ಹೋರಾಟದ, ಹುಸಿ ಬಿಡುಗಡೆಯ ಆಶಯಗಳನ್ನಾಗಿಸುತ್ತವೆ.

ಮಾಸ್ತಿಕತೆಯ ರಂಗಪ್ಪನ ಹೆಂಡತಿಯ ಮುಗ್ಧ ಸರಳ ಮಾತುಗಳಲ್ಲಿ ಈ ಬಿಡಿ ಬಿಡಿ ಆಶಯಗಳನ್ನು, ನಿರೀಕ್ಷೆಗಳನ್ನು ಒಟ್ಟಗೂಡಿಸಿ ಹೇಳಬಹುದಾದರೆ ‘ನಾವೆಲ್ಲರೂ ಕ್ಷೇಮ. ನೀವೂ ಕ್ಷೇಮವೆಂದು ನಂಬುತ್ತೇನೆ’ ಎಂದು ಹೇಳಬಹುದಾದ ಸಮಾಜಕ್ಕಾಗಿ ನಮ್ಮ ಎಲ್ಲ ಹೋರಾಟ. ಅಥವಾ ರಂಗಪ್ಪನ ನಿರೀಕ್ಷೆಯನುಸಾರ ಇವನ್ನೇ ಬಿಡಿ ಬಿಡಿಯಾಗಿ, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಹೇಳಿದರೂ ಅದು ಈಗಿರುವ ಹುಸಿ ಆಶಯಗಳ ಸಮಾಜದಿಂದ ಬಿಡುಗಡೆ ಪಡೆಯುವುದಕ್ಕಾಗಿ ಮಾಡುವ ಬಿಡಿ ಬಿಡಿ ಹೋರಾಟಗಳಾಗುವುದರ ಬದಲು ಆಮೂಲಾಗ್ರ ಬದಲಾವಣೆಗಾಗಿ ಎಲ್ಲರೂ ಕೂಡಿ ಮಾಡುವ ಸಮಗ್ರ ಹೋರಾಟವಾಗುವುದಾದರೆ ಏನೂ ತೊಂದರೆಯಿಲ್ಲ.

ಎಲ್ಲ ಹೋರಾಟಗಾರರೆ ಒಂದಾಗಿ!

ಹತ್ತು ವರ್ಷಗಳ ಹಿಂದೆ ಹಾಜಬ್ಬ , ಹಸನಬ್ಬರನ್ನು ಇದೇ ಉಡುಪಿಯಲ್ಲಿ ಸಂಘಪರಿವಾರದ ಕಾರ್ಯಕರ್ತರು ಯಶಪಾಲ್ ಸುವರ್ಣ ನೇತೃತ್ವದಲ್ಲಿ ಮಾರ್ಗಮಧ್ಯೆ ಬೆತ್ತಲೆ ಮಾಡಿ ಹೊಡೆದಾಗ, ಕರಾವಳಿಯ ಜನ ಎಚ್ಚೆತ್ತಿದ್ದರೆ ಇಂದು ಪ್ರವೀಣ್ ಪೂಜಾರಿ ಅಮಾನುಷವಾಗಿ ಕೊಲೆಯಾಗುತ್ತಿರಲಿಲ್ಲ. ಅಂದು ಕರಾವಳಿಯ ಜನ "ಬೆತ್ತಲೆ ಮಾಡಿದ್ದು ಬ್ಯಾರಿಯನ್ನಲ್ಲವ, ಒಳ್ಳೆಯದಾಯಿತು" ಎಂದು ಬಿಜೆಪಿ ಖೆಡ್ಡಾಕ್ಕೆ ಬಿದ್ದ ಪರಿಣಾಮ ಇಂದು ಅನುಭವಿಸುತ್ತಿದ್ದಾರೆ. ಈಗ ಈ ಜಾಗರಣ ವೇದಿಕೆ, ಭಜರಂಗದಳ ಯಾರ ಅಂಕೆಗೂ ಸಿಗುತ್ತಿಲ್ಲ.

ಬಂಟ್ವಾಳದ ಹರೀಶ್ ಪೂಜಾರಿ, ಭಾಸ್ಕರ್ (ಪೂಜಾರಿ) ಕುಂಬ್ಳೆ, ಶ್ರೀನಿವಾಸ್ (ಪೂಜಾರಿ) ಬಜಾಲ್, ಈಗ ಪ್ರವೀಣ್ ಪೂಜಾರಿ ... ಹೀಗೆ ಪರಿವಾರದ ಕತ್ತಿಯೇಟಿಗೆ ಬಲಿಯಾದ ಮುಸ್ಲಿಮೇತರರೆಲ್ಲರೂ ನಾರಾಯಣ ಗುರುಗಳ ಅನುಯಾಯಿಗಳಾದ, ಹಿಂದುಳಿದ ಜಾತಿಯ ಬಿಲ್ಲವರು. ಕೊಲೆಗಳನ್ನು ಮಾಡಿ ಜೈಲು ಸೇರಿ ಕ್ರಿಮಿನಲ್ ಗಳಾದವರಲ್ಲೂ ಬಹುಪಾಲು ಬಿಲ್ಲವ ಯುವಕರು. ಈಗಲಾದರೂ ಈ ಸಮುದಾಯದ ಪ್ರಮುಖರು ಎಚ್ಚೆತ್ತುಕೊಳ್ಳಬೇಕು. ಪರಿವಾರದ ವಿಷವರ್ತುಲದಿಂದ ತಮ್ಮ ಸಮುದಾಯದ ಯುವಕರನ್ನು ಹೊರ ತರಲು ಯತ್ನಿಸಬೇಕು.

ಅಂದ ಹಾಗೆ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಸ್ಥಾಪಿಸಿ ಹಿಂದುಳಿದ ಜಾತಿಗಳ ಸಂಘಟನೆಗೆ ಹೊರಟಿರುವ ಈಶ್ವರಪ್ಪನವರಿಗೆ ಅಣುವಿನಷ್ಟಾದರೂ ಪ್ರಾಮಾಣಿಕತೆ ಇದ್ದರೆ ತಮ್ಮ ರಾಜ್ಯ ಪ್ರವಾಸವನ್ನು ಪ್ರವೀಣ್ ಪೂಜಾರಿ ಮನೆಯಿಂದ ಆರಂಭಿಸಲಿ.

- ಮುನೀರ್ ಕಾಟಿಪಳ್ಳ

ಕಾಶ್ಮೀರ ಕುರಿತ ಸಂಕುಚಿತ ದೃಷ್ಟಿ ಭಾರತೀಯ ಒಕ್ಕೂಟಕ್ಕೆ ವಿನಾಶಕಾರಿ

ಕಾಶ್ಮೀರ ಕಳೆದ ಆರು ವಾರಗಳಿಂದ ಕುದಿಯುವ ಕುಲುಮೆಯಂತಾಗಿದೆ. ಹಿಜ್ಬುಲ್ ಕಮಾಂಡರ್ ಬುರ್ಹಾನ್ ವಾನಿಯ ಸಾವಿನ ನಂತರ ಕಣಿವೆಯ ಬೀದಿಗಳಲ್ಲಿ ಸಾಮೂಹಿಕ ಪ್ರತಿಭಟನೆಗಳು ನಡೆಯುತ್ತಿವೆ. ಭದ್ರತಾ ಪಡೆಗಳ ಗುಂಡೇಟಿಗೆ 58 ಜನರು ಬಲಿಯಾಗಿದ್ದಾರೆ, ನೂರಾರು ಜನರು ಗಾಯಗೊಂಡಿದ್ದಾರೆ. ಆಗಸ್ಟ್ 15ರಂದು ಶ್ರೀನಗರದ ಬಾಟಾಮಲೂ ಪ್ರದೇಶದಲ್ಲಿ 16 ವರ್ಷ ಪ್ರಾಯದ ಬಾಲಕ ಮಹಮದ್ ಯಾಸಿರ್ ಶೇಖ್ ಮೃತಪಟ್ಟಿದ್ದು ಪೊಲೀಸರ ಗುಂಡಿಗೆ ಬಲಿಯಾದವರ ಪೈಕಿ ಇತ್ತೀಚಿನ ಸೇರ್ಪಡೆಯಾಗಿದೆ. ಭದ್ರತಾ ಪಡೆಗಳು ಬಳಸುವ ಪೆಲೆಟ್ ಗನ್‌ಗಳಿಂದಾಗಿ ಅನೇಕ ಜನರು ದೃಷ್ಟಿ ಕಳೆದುಕೊಂಡಿದ್ದಾರೆ, ಇನ್ನಷ್ಟು ಮಂದಿ ಅಂಗ ಊನರಾಗಿದ್ದಾರೆ. ಆದಾಗ್ಯೂ ಕೇಂದ್ರ ಸರಕಾರ ಕಣಿವೆಗೆ ಇನ್ನಷ್ಟು ಅರೆ ಸೇನಾ ಪಡೆಗಳನ್ನು ಕಳಿಸುತ್ತಲೇ ಇದೆಯೇ ಹೊರತು ಅಲ್ಲಿ ಪರಿಸ್ಥಿತಿಯನ್ನು ಶಮನಗೊಳಿಸಲು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ.

ಸಂಸತ್ತಿನಲ್ಲಿ ಪ್ರತಿಪಕ್ಷಗಳ ಸತತ ಒತ್ತಾಯದ ನಂತರ, ಸರಕಾರ ಆಗಸ್ಟ್ 12ರಂದು ಸರ್ವಪಕ್ಷ ಸಭೆ ನಡೆಸಿತು. ಆ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ತಳೆದ ನಿಲವು ಮಧ್ಯಪ್ರದೇಶದಲ್ಲಿ ಆಗಸ್ಟ್ ಒಂಬತ್ತರಂದು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದ್ದರಿಂದ ಹಿಂದೆ ಸರಿದಂತೆ ಮಾತ್ರವಲ್ಲದೆ ಪ್ರತಿಗಾಮಿಯಾಗಿಯಾಗಿಯೂ ಇತ್ತು. “ಸರಕಾರವು ವಾಜಪೇಯಿಯವರ ಇನ್ಸಾನಿಯತ್, ಕಶ್ಮೀರಿಯತ್ ಮತ್ತು ಜಮ್ಹೂರಿಯತ್ ಧೋರಣೆಯನ್ನು ಅನುಸರಿಸುತ್ತದೆ” ಎಂದು ಮಧ್ಯಪ್ರದೇಶದ ಭಾಷಣದಲ್ಲಿ ಪ್ರಧಾನಿ ಹೇಳಿದ್ದರು. ಆದರೆ, ಈ ಧೋರಣೆಗೆ ವಿರುದ್ಧವಾಗಿ ಪ್ರಧಾನಿಯವರು ಸರ್ವ ಪಕ್ಷ ಸಭೆಯಲ್ಲಿ “ಕಣಿವೆಯಲ್ಲಿನ ಪ್ರಸಕ್ತ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಭದ್ರತಾಪಡೆಗಳ ಸಿಬ್ಬಂದಿಗಳ ತಾಳ್ಮೆಯನ್ನು” ಅಭಿನಂದಿಸಿದರು. ‘ಊರಾರು ಯುವಕರು ಮತ್ತು ಯುವತಿಯರ ಕಣ್ಣುಗಳನ್ನು ಅಮಾನವೀಯವಾಗಿ ಕುರುಡಾಗಿಸಿದ, ಅಂಗಾಂಗ ಊನತೆ ಉಂಟು ಮಾಡಿದ ಮತ್ತು ಸಾವುಗಳನ್ನು ತಂದ ನಂತರವೂ ಪ್ರಧಾನಿ ಈ ಹೇಳಿಕೆ ಕೊಟ್ಟಿದ್ದಾರೆ. “ಪ್ರಸಕ್ತ ಅಶಾಂತಿಗೆ ಪಾಕಿಸ್ತಾನವೇ ಮೂಲ” ಎಂದು ಹೇಳುವ ಮೂಲಕ ಕಣಿವೆಯ ಜನರ ಸ್ವಯಂಪ್ರೇರಿತ ಆಕ್ರೋಶದ ಭುಗಿಲು ಮತ್ತು ಅತೃಪ್ತಿಯನ್ನು ತಳ್ಳಿಹಾಕಿದ್ದಾರೆ. “ಹಿಂಸೆ, ಭಯೋತ್ಪಾದನೆ ಮತ್ತು ಭಾರತ-ವಿರೋಧಿ ಚಟುವಟಿಕೆಗಳನ್ನು ದೃಢವಾಗಿ ನಿಭಾಯಿಸಲಾಗುವುದು” ಎಂದು ಅವರು ಎಚ್ಚರಿಕೆ ನೀಡಿದರು.

ಕಾಶ್ಮೀರಕ್ಕೆ ಒಂದು ಸರ್ವ ಪಕ್ಷ ನಿಯೋಗ ಭೇಟಿ ನೀಡಬೇಕು ಹಾಗೂ ಜಮ್ಮು ಮತ್ತು ಕಾಶ್ಮೀರದ ವಿವಿಧ ಅಭಿಪ್ರಾಯಗಳನ್ನು ಹೊಂದಿರುವ ಜನರೊಂದಿಗೆ ಮಾತುಕತೆ ನಡೆಸಬೇಕು ಎಂದು ಸಿಪಿಐ (ಎಂ) ಮತ್ತು ಎಡ ಪಕ್ಷಗಳ ನಾಯಕರ ಸಭೆಯಲ್ಲಿ ಮುಂದಿಟ್ಟ ಪ್ರಸ್ತಾವನೆಗಳನ್ನು ಕೂಡ ಒಪ್ಪಿಲ್ಲ. ಸಭೆಯ ನಂತರ ಮಾಧ್ಯಮಗಳಿಗೆ ವಿವರ ನೀಡಿದ ಹಣಕಾಸು ಸಚಿವ ಅರುಣ್ ಜೇಟ್ಲಿ, ಪ್ರತ್ಯೇಕತಾವಾದಿಗಳೊಂದಿಗೆ ಯಾವಾಗ ಮಾತುಕತೆ ನಡೆಸುತ್ತೀರಿ ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಯಾವುದೇ ನಿರ್ದಿಷ್ಟ ಉತ್ತರ ನೀಡಲಿಲ್ಲ “ಪರಿಸ್ಥಿತಿಯನ್ನು ಆಧರಿಸಿ” ಸರಕಾರ ನಿರ್ಧಾರ ಕೈಗೊಳ್ಳುತ್ತದೆ ಎಂದಷ್ಟೇ ಹೇಳಿದರು.

ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವ ವಿಚಾರದಲ್ಲಿ ಕೂಡ ಸರಕಾರ ಜಗಳಗಂಟ ನಿಲುವನ್ನು ತಳೆದಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಬಗ್ಗೆ ಮಾತ್ರವೇ ಪಾಕಿಸ್ತಾನದೊಂದಿಗೆ ಮಾತನಾಡಲು ಭಾರತ ಸಿದ್ಧವಿದೆ, ಜಮ್ಮು ಮತ್ತು ಕಾಶ್ಮೀರದ ಕುರಿತು ಚರ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಗೃಹ ಸಚಿವ ರಾಜನಾಥ ಸಿಂಗ್ ಸಂಸತ್ತಿನಲ್ಲಿ ಹೇಳಿದ್ದಾರೆ.

ಪ್ರಧಾನಿ ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಕಾಶ್ಮೀರ ಕಣಿವೆಯ ಪರಿಸ್ಥಿತಿ ಮತ್ತು ಅಲ್ಲಿನ ಜನರ ನೋವುಗಳ ಬಗ್ಗೆ ತುಟಿ ಪಿಟಕ್ ಎನ್ನಲಿಲ್ಲ. ಅದರ ಬದಲಿಗೆ ಬಲೂಚಿಸ್ತಾನ, ಗಿಲ್ಗಿಟ್ ಬಾಲ್ಟಿಸ್ತಾನ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ ಎಂದು ಹೇಳಿದರು. ಈ ಪ್ರದೇಶಗಳ ಜನರು ತಮಗೆ ಧನ್ಯವಾದ ಸಂದೇಶಗಳನ್ನು ಕಳಿಸುತ್ತಿದ್ದಾರೆ ಎಂದು ಹೇಳಿದರು. ಇದು, ಬಲೂಚಿಸ್ತಾನ್ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ತನ್ನ ದಬ್ಬಾಳಿಕೆಗಳಿಗೆ ಪಾಕಿಸ್ತಾನವೇ ಉತ್ತರ ನೀಡಬೇಕು ಎಂದು ಸರ್ವ ಪಕ್ಷ ಸಭೆಯಲ್ಲಿ ತೆಗೆದ ರಾಗವನ್ನೇ ಮುಂದುವರೆಸಿದರು.

ಕಾಶ್ಮೀರದಲ್ಲಿನ ಜನತೆಯ ಅಶಾಂತಿಯನ್ನು ಒಂದು ಕಾನೂನು-ಸುವ್ಯವಸ್ಥೆ ಸಮಸ್ಯೆಯನ್ನಾಗಿ ನೋಡುವುದಾಗಿ ಮೋದಿ ಸರಕಾರ ಈ ಮೂಲಕ ಸೂಚನೆ ನೀಡಿದಂತಾಗಿದೆ. ಅದು ಜನ ಸಮೂಹ ಮತ್ತು ಪಾಕಿಸ್ತಾನ ಬೆಂಬಲಿತ ಉಗ್ರಗಾಮಿಗಳ ನಡುವೆ ಯಾವುದೇ ವ್ಯತ್ಯಾಸ ನೋಡುವುದಿಲ್ಲ ಎಂದಾಯಿತು. ಭಾರತ-ಪಾಕಿಸ್ತಾನ ಸಂವಾದದಲ್ಲಿ ಕಾಶ್ಮೀರವೂ ಚರ್ಚಿಸಬೇಕಾದ ಒಂದು ವಿಚಾರ ಎಂದು ಅನೇಕ ವರ್ಷಗಳ ಹಿಂದೆ ನಿರ್ಧರಿಸಿಕೊಳ್ಳಲಾಗಿತ್ತು. ಮೋದಿ ಸರಕಾರ ಅದರಿಂದ ಹಿಂದೆ ಸರಿಯುತ್ತಿದೆ.

ಕಾಶ್ಮೀರಿ ಜನತೆಯ ಪರಕೀಯ ಭಾವವನ್ನು ನಿವಾರಿಸುವ ಮತ್ತು ಬೇಡಿಕೆಗಳನ್ನು ಪರಿಶೀಲಿಸುವ ಬದಲು ಮೋದಿ ಸರಕಾರವು ಈ ಸಮಸ್ಯೆಯನ್ನು ಭಾರತ-ಪಾಕಿಸ್ತಾನ ಸಂಘರ್ಷವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ. ಪಾಕಿಸ್ತಾನದ ಅವಿಭಾಜ್ಯ ಅಂಗವಾಗಿರುವ ಬಲೂಚಿಸ್ತಾನದ ಸಮಸ್ಯೆಯನ್ನು ಕೆದಕುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಪಾಕಿಸ್ತಾನದ ಜೊತೆ ಉದ್ವಿಗ್ನತೆ ಸೃಷ್ಟಿ ಮಾಡಿದ್ದಾರೆ.

ಕಾಶ್ಮೀರ ಕುರಿತ ಪಾಕಿಸ್ತಾನದ ನಿಲವನ್ನು ವಿರೋಧಿಸುವ ಭರದಲ್ಲಿ ಭಾರತದ ಪ್ರಧಾನಿಯೊಬ್ಬರು ಇದೇ ಮೊದಲ ಬಾರಿಗೆ ಬಲೂಚಿಸ್ತಾನದಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಆಕ್ರಮಣಕಾರಿ ನಿಲುವನ್ನು ಅತಿ-ರಾಷ್ಟ್ರೀಯವಾದಿ ಶಕ್ತಿಗಳು ಮತ್ತು ಗಿಡುಗ ಬುದ್ಧಿಯ ಭದ್ರತಾ ಪರಿಣಿತರು ಸ್ವಾಗತಿಸಿದ್ದಾರೆ.

ಬಲೂಚಿಸ್ತಾನದ ಕುರಿತ ಮೋದಿ ನಿಲವನ್ನು ಕಾಂಗ್ರೆಸ್ ಪಕ್ಷದ ಅಧಿಕೃತ ವಕ್ತಾರರು ಬೆಂಬಲಿಸಿರುವುದು ಅಚ್ಚರಿಯ ಸಂಗತಿಯಾಗಿದೆ. ಕಾಶ್ಮೀರ ವಿಚಾರದಲ್ಲಿ ಕಾಂಗ್ರೆಸ್ ಕೂಡ ದ್ವಂದ್ವ ಸಂದೇಶ ಕಳಿಸುತ್ತಿದೆ. 1948ರಲ್ಲಿ ಭಾರತಕ್ಕೆ ಸೇರುವ ಸಂದರ್ಭದಲ್ಲಿ ಕಾಶ್ಮೀರಿ ಜನತೆಯೊಂದಿಗೆ ಮಾಡಿಕೊಂಡ ಮಹಾ ಚೌಕಾಸಿಯನ್ನು ಭಾರತ ಗೌರವಿಸಬೇಕು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪಿ. ಚಿದಂಬರಂ ವಿವೇಕಯುತ ಮಾತನ್ನು ಆಡಿದ್ದಾರೆ. ಇದರಲ್ಲಿ ಆಶ್ವಾಸನೆ ನೀಡಿದಂತೆ ಜಮ್ಮು ಮತ್ತು ಕಾಶ್ಮೀರ ಜನರಿಗೆ ಅವರ ಹಕ್ಕುಗಳನ್ನು ವಾಪಸ್ ನೀಡುವುದು ಹಾಗೂ ಸೇರ್ಪಡೆ ವೇಳೆ ಭರವಸೆ ನೀಡಿದಂತೆ ಸ್ವಾಯತ್ತೆಯ ಮರುಸ್ಥಾಪನೆಯ ಅಂಶವೂ ಒಳಗೊಂಡಿದೆ. ಆದರೆ ಇದನ್ನು ಕಾಂಗ್ರೆಸ್‌ನ ಅಧಿಕೃತ ವಕ್ತಾರ, ಚಿದಂಬರಂರವರದ್ದು ವೈಯಕ್ತಿಕ ಅಭಿಪ್ರಾಯ ಮಾತ್ರ ಎಂದು ದೂರ ಸರಿಸಿದ್ದಾರೆ.

ಕಾಶ್ಮೀರ ವಿಚಾರವನ್ನು ನಿರ್ವಹಿಸುವಲ್ಲಿ ಮೋದಿ ಸರಕಾರ ತಳೆದಿರುವ ಧೋರಣೆ ಜಮ್ಮು ಮತ್ತು ಕಾಶ್ಮೀರದ ಜನರು ಹಾಗೂ ಭಾರತೀಯ ಒಕ್ಕೂಟಕ್ಕೆ ವಿನಾಶಕಾರಿಯಾಗಿ ಪರಿಣಮಿಸಲಿದೆ. ಮೋದಿ ಸರಕಾರದ ‘ರಾಷ್ಟ್ರೀಯ ಭದ್ರತಾ ಪ್ರಭುತ್ವ’ದ ಮತ್ತು ಬಹುಸಂಖ್ಯಾತವಾದದ ದೃಷ್ಟಿಕೋನವನ್ನು ದೃಢವಾಗಿ ವಿರೋಧಿಸಬೇಕಾಗಿದೆ. ಕಾಶ್ಮೀರದಲ್ಲಿ ದಮನಕಾರಿ ವ್ಯವಸ್ಥೆಯನ್ನು ತಕ್ಷಣವೇ ಕೊನೆಗೊಳಿಸಬೇಕು ಮತ್ತು ದಬ್ಬಾಳಿಕೆಯ ಭದ್ರತಾ ವ್ಯವಸ್ಥೆಯನ್ನು ತೆಗೆದುಹಾಕಬೇಕು ಎಂದು ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಆಗ್ರಹಿಸಬೇಕು. ಇದರ ಜೊತೆಜೊತೆಯಲ್ಲೇ, ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಜೊತೆ ಮಾತುಕತೆ ಆರಂಭಿಸಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು. ಭಾರತ-ಪಾಕಿಸ್ತಾನ ಸಂಘರ್ಷದಲ್ಲಿ ಕಾಶ್ಮೀರಿ ಜನರನ್ನು ಒತ್ತೆ ಸೆರೆಯಾಗಿಟ್ಟುಕೊಳ್ಳುವುದು ಸರಿಯಲ್ಲ. ರಾಷ್ಟ್ರೀಯ ಸಂಕುಚಿತವಾದದ ನಿಲವನ್ನು ತಳೆಯುವುದನ್ನು ಬಿಟ್ಟು ಮೋದಿ ಸರಕಾರವು, ಕಳೆದ ವರ್ಷ ಉಭಯ ದೇಶಗಳು ನಿರ್ಧರಿಸಿದ ಪ್ರಕಾರ ಪಾಕಿಸ್ತಾನದೊಂದಿಗೆ ಮಾತುಕತೆ ಪುನರಾರಂಭಿಸುವ ಎಳೆಯನ್ನು ಕೈಗೆತ್ತಿಕೊಳ್ಳಬೇಕು.

ಕಾಶ್ಮೀರಿ ಜನತೆಯ ಪರಕೀಯ ಭಾವವನ್ನು ನಿವಾರಿಸುವ ಮತ್ತು ಬೇಡಿಕೆಗಳನ್ನು ಪರಿಶೀಲಿಸುವ ಬದಲು ಮೋದಿ ಸರಕಾರವು ಭಾರತ-ಪಾಕಿಸ್ತಾನ ಎದುರಾಟದಲ್ಲಿ ಅವರನ್ನು ಒತ್ತೆ ಸೆರೆಯಾಗಿಟ್ಟುಕೊಳ್ಳುವುದು ಸರಿಯಲ್ಲ. ಇದು ಜಮ್ಮು ಮತ್ತು ಕಾಶ್ಮೀರದ ಜನರು ಹಾಗೂ ಭಾರತೀಯ ಒಕ್ಕೂಟಕ್ಕೆ ವಿನಾಶಕಾರಿಯಾಗಿ ಪರಿಣಮಿಸಲಿದೆ. ಮೋದಿ ಸರಕಾರದ ಈ ‘ರಾಷ್ಟ್ರೀಯ ಭದ್ರತಾ ಪ್ರಭುತ್ವ’ದ ಮತ್ತು ಬಹುಸಂಖ್ಯಾತವಾದದ ದೃಷ್ಟಿಕೋನವನ್ನು ದೃಢವಾಗಿ ವಿರೋಧಿಸ ಬೇಕಾಗಿದೆ.



ಪ್ರಕಾಶ್ ಕಾರಟ್

ಸಂಕುಚಿತ ಉದ್ದೇಶ ಸಾಧನೆಗಾಗಿ ನ್ಯಾಯಾಂಗದಲ್ಲಿ ಹಸ್ತಕ್ಷೇಪದ ಹುನ್ನಾರ

ಮೋದಿ ಸರಕಾರಕ್ಕೆ ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ ಸಂಬಂಧಪಟ್ಟ ರಾಜ್ಯಪಾಲರುಗಳನ್ನು ಸಂವಿಧಾನಬಾಹಿರವಾಗಿ ಬಳಸಿಕೊಂಡು ಹೇರಿದ ರಾಷ್ಟ್ರಪತಿ ಆಳ್ವಿಕೆಗಳನ್ನು ರದ್ದುಗೊಳಿಸಿದ ಸುಪ್ರಿಂ ಕೋರ್ಟ್ ತೀರ್ಪುಗಳ ಬಗ್ಗೆ ಅಸಮಾಧಾನವೂ ಇದೆ. ಇಂತಹ ನ್ಯಾಯಾಂಗವನ್ನು ಹದ್ದುಬಸ್ತಿಗೆ ತರಬೇಕೆಂಬುದು ಸರ್ವಾಧಿಕಾರಶಾಹಿ ಒಳಪ್ರೇರಣೆ. ಮೋದಿ ಸರಕಾರ ತನ್ನ ಸಂಕುಚಿತ ಪಕ್ಷಪಾತೀ ಉದ್ದೇಶ ಸಾಧನೆಗಾಗಿ ಉನ್ನತ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನ ನಡೆಸುವುದನ್ನು ವಿರೋಧಿಸ ಬೇಕಾಗಿದೆ.

ಭಾರತದ ಮುಖ್ಯ ನ್ಯಾಯಾಧೀಶ ಟಿ.ಕೆ.ಠಾಕುರ್ ಇತ್ತೀಚೆಗೆ ನ್ಯಾಯಾಂಗ ನೇಮಕ ಮಂಡಳಿ ಶಿಫಾರಸು ಮಾಡಿ ಸರಕಾರದ ಮಂಜೂರಾತಿಗೆ ಕಾದಿರುವ ಹೈಕೋರ್ಟ್ ನ್ಯಾಯಾಧೀಶರುಗಳು ಹೆಸರುಗಳನ್ನು ಪಡೆಯಲು ಒಂದು ನ್ಯಾಯಾಂಗ ಮಧ್ಯಪ್ರವೇಶವನ್ನು ಮಾಡಬೇಕಾದೀತು ಎಂದು ಎಚ್ಚರಿಸಿದ್ದಾರೆ.

ಹೈಕೋರ್ಟುಗಳಲ್ಲಿ ನ್ಯಾಯಾಧೀಶರ ತೆರವಾದ ಸ್ಥಾನಗಳನ್ನು ತುಂಬುವ ವಿಷಯದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಸರಕಾರ ಮತ್ತು ಉನ್ನತ ನ್ಯಾಯಾಂಗದ ನಡುವೆ ಒಂದು ಇಕ್ಕಟ್ಟು ಉಂಟಾಗಿದೆ. ಸುಪ್ರಿಂ ಕೋರ್ಟ್ ನೇಮಕ ಮಂಡಳಿ 74 ನ್ಯಾಯಾಧೀಶರ ಹೆಸರುಗಳನ್ನು ಶಿಫಾರಸು ಮಾಡಿದೆ. ಸರಕಾರ ಅದಕ್ಕೆ ಇನ್ನೂ ಮಂಜೂರಾತಿ ನೀಡಿಲ್ಲ.

ಮೋದಿ ಸರಕಾರ ಮತ್ತು ನ್ಯಾಯಾಂಗದ ನಡುವೆ ಈ ಜಟಾಪಟಿ ನಡೆದಿರುವುದು ಸುಪ್ರಿಂ ಕೋರ್ಟ್ ಸಂಸತ್ತು ಪಾಸು ಮಾಡಿದ ರಾಷ್ಟ್ರೀಯ ನ್ಯಾಯಾಂಗ ನೇಮಕಗಳ ಆಯೋಗ ಕಾಯ್ದೆ ಸಂವಿಧಾನಬಾಹಿರ ಎಂದು ಅಕ್ಟೋಬರ್2014ರಲ್ಲಿ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ. ನ್ಯಾಯಾಧೀಶರ ನೇಮಕಕ್ಕೆ ಹಿಂದಿನ ಮಂಡಲಿ(ಕೊಲೇಜಿಯಂ) ವ್ಯವಸ್ಥೆಯನ್ನೇ ಮತ್ತೆ ತಂದ ಸುಪ್ರಿಂ ಕೋರ್ಟ್ ಕೊಲೇಜಿಯಂ ಶಿಫಾರಸು ಮಾಡಿದ ನ್ಯಾಯಾಧೀಶರ ನೇಮಕಕ್ಕೆ ನಿಜವಾದ ವಿಧಾನವನ್ನು ನಿರೂಪಿಸುವ ಒಂದು ‘ವಿಧಾನ ಒಪ್ಪಂದ ಪತ್ರ’(ಎಂಒಪಿ)ವನ್ನು ತಯಾರಿಸುವಂತೆ ಸರಕಾರಕ್ಕೆ ಹೇಳಿತ್ತು.

ಈ ಎಂಒಪಿಯ ಕರಡಿನ ಬಗ್ಗೆಯೇ ಮೋದಿ ಸರಕಾರ ಆಕ್ಷೇಪವೆತ್ತಿದೆ. ಈ ಎಂಒಪಿಯಲ್ಲಿ ಕೊಲೇಜಿಯಂ ಹೈಕೋರ್ಟುಗಳು ಅಥವ ಸುಪ್ರಿಂ ಕೋರ್ಟಿನ ನ್ಯಾಯಾಧೀಶರ ನೇಮಕಕ್ಕೆ ಶಿಫಾರಸು ಮಾಡಿದ ಹೆಸರುಗಳಲ್ಲಿ ಯಾವುದೇ ಹೆಸರುಗಳನ್ನು ರಾಷ್ಟ್ರೀಯ ಭದ್ರತೆಯ ಕಾರಣಕ್ಕೆ ತಿರಸ್ಕರಿಸುವ ಅಧಿಕಾರ ತನಗಿರಬೇಕು ಎಂಬುದು ಸರಕಾರದ ಪ್ರಧಾನ ಆಗ್ರಹ.

ಈ ಮೇ ತಿಂಗಳಲ್ಲಿ ಕಾರ್ಯಾಂಗಕ್ಕೆ ಈ ನಕಾರದ ಅಧಿಕಾರ ನೀಡುವುದು ನ್ಯಾಯಾಂಗದಲ್ಲಿ ಹಸ್ತಕ್ಷೇಪವಾಗುತ್ತದೆ ಎಂದು ಈ ಪ್ರಯತ್ನವನ್ನು ಕೊಲೇಜಿಯಂ ತಿರಸ್ಕರಿಸಿತು. ಅಂದಿನಿಂದ ಸರಕಾರ ಕೊಲೇಜಿಯಂ ಹೈಕೋರ್ಟ್ ನ್ಯಾಯಾಧೀಶರುಗಳ ನೇಮಕಕ್ಕೆ ಕಳಿಸಿದ 74 ಹೆಸರುಗಳ ಮೇಲೆ ಸುಮ್ಮನೆ ಕೂತಿದೆ. ನ್ಯಾಯಾಧೀಶರುಗಳ ಕೊರತೆಯಿಂದ ನ್ಯಾಯಾಂಗ ವ್ಯವಸ್ಥೆಯ ಮೇಲೆ ದೊಡ್ಡ ಹೊರೆ ಬಿದ್ದಿದೆ ಎಂದು ಸುಪ್ರಿಂ ಕೋರ್ಟ್ ನ್ಯಾಯಾಧೀಶರು ಮತ್ತೆ-ಮತ್ತೆ ಹೇಳುತ್ತ ಬಂದಿದ್ದಾರೆ. ಸದ್ಯಕ್ಕೆ ಮಂಜೂರಾದ 1079 ಹೈಕೋರ್ಟ್ ನ್ಯಾಯಾಧೀಶರ ಹುದ್ದೆಗಳಲ್ಲಿ 478, ಅಂದರೆ 44.3ಶೇ. ಖಾಲಿ ಬಿದ್ದಿವೆ.

ಕಾನೂನು ಮಂತ್ರಿ ರವಿಶಂಕರ ಪ್ರಸಾದ್ ಸಂಸತ್ತಿನಲ್ಲಿ ನ್ಯಾಯಾಂಗ ನೇಮಕಗಳಲ್ಲಿ ಸರಕಾರ ಯಾವುದೇ ನಕಾರದ ಅಧಿಕಾರ ಹೊಂದ ಬಯಸುವುದಿಲ್ಲ ಎಂದು ಹೇಳಿಕೆ ನೀಡಿದರೂ, ಈ ಕಾರ್ಯಾಂಗ-ನ್ಯಾಯಾಂಗದ ಜಟಾಪಟಿಯಲ್ಲಿ ಕಣ್ಣಿಗೆ ಕಾಣುವುದಕ್ಕಿಂತ ಮಿಗಿಲಾದ್ದು ಏನೋ ಇದೆ. ಉನ್ನತ ನ್ಯಾಯಾಂಗಕ್ಕೆ ಯಾವುದೇ ನೇಮಕವನ್ನು ರಾಷ್ಟ್ರೀಯ ಭದ್ರತೆಯ ಕಾರಣದಿಂದ ತಾನು ತಿರಸ್ಕರಿಸಬಹುದು ಎಂದು ಸರಕಾರ ಒತ್ತಿ ಹೇಳುತ್ತಿರುವುದರಲ್ಲಿ ಒಂದು ರಾಜಕೀಯ ಪ್ರಮಾಣ ಇರಬಹುದು ಎಂಬ ಸಂದೇಹವನ್ನು ಮೂಡಿಸುತ್ತದೆ.

ಮೋದಿ ಸರಕಾರಕ್ಕೆ ತನ್ನ ಸಂಕುಚಿತ ಹಿಂದುತ್ವ ಕಣ್ಣೋಟದ ಪ್ರಕಾರ ಯಾವುದು ರಾಷ್ಟ್ರ-ವಿರೋಧಿ ಮತ್ತು ಯಾವುದು ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಒಡ್ಡುತ್ತದೆ ಎಂಬುದರ ಬಗ್ಗೆ ಅತ್ಯಂತ ಸ್ಪಷ್ಟ ವಿಚಾರಗಳಿವೆ. ಮುಖ್ಯ ನ್ಯಾಯಾಧೀಶ ದತ್ತು ಅವರ ಕಾರ್ಯಕಾಲದಲ್ಲಿ ಕೊಲೇಜಿಯಂ ಸುಪ್ರಿಂ ಕೋರ್ಟ್ ನ್ಯಾಯಾಧೀಶರ ಹುದ್ದೆಗೆ ನೇಮಕಕ್ಕೆ ಗೋಪಾಲ ಸುಬ್ರಮಣ್ಯಂ ಅವರ ಹೆಸರು ಕಳಿಸಿದ್ದನ್ನು ಹಿಂದಿರುಗಿಸಿತ್ತು. ಅದೊಂದು ರಾಜಕೀಯ ಪ್ರೇರಿತ ಕ್ರಮವಾಗಿತ್ತು.

ಮೋದಿ ಸರಕಾರಕ್ಕೆ ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ ಸಂಬಂಧಪಟ್ಟ ರಾಜ್ಯಪಾಲರುಗಳನ್ನು ಸಂವಿಧಾನಬಾಹಿರವಾಗಿ ಬಳಸಿಕೊಂಡು ಹೇರಿದ ರಾಷ್ಟ್ರಪತಿ ಆಳ್ವಿಕೆಗಳನ್ನು ರದ್ದುಗೊಳಿಸಿದ ಸುಪ್ರಿಂ ಕೋರ್ಟ್ ತೀರ್ಪುಗಳ ಬಗ್ಗೆ ಅಸಮಾಧಾನವೂ ಇದೆ. ಇಂತಹ ನ್ಯಾಯಾಂಗವನ್ನು ಹದ್ದುಬಸ್ತಿಗೆ ತರಬೇಕೆಂಬುದು ಸರ್ವಾಧಿಕಾರಶಾಹಿ ಒಳಪ್ರೇರಣೆ.

ಕೊಲೇಜಿಯಂ ವ್ಯವಸ್ಥೆ ಇರುವ ವರೆಗೆ ಉನ್ನತ ನ್ಯಾಯಾಂಗದಲ್ಲಿ ನ್ಯಾಯಾಧೀಶರುಗಳ ನೇಮಕಕ್ಕೆ ಆದೇಶ ನೀಡುವುದನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಅವರ ಹಿರಿಯ ಸಹಯೋಗಿಗಳು ಪ್ರತಿರೋಧಿಸುತ್ತಿರುವುದು ಉಚಿತವೇ ಆಗಿದೆ. ಬಿಜೆಪಿ ನೇತೃತ್ವದ ಸರಕಾರ ತನ್ನ ಸಂಕುಚಿತ ಪಕ್ಷಪಾತೀ ಉದ್ದೇಶ ಸಾಧನೆಗಾಗಿ ಉನ್ನತ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನ ನಡೆಸುವುದನ್ನು ವಿರೋಧಿಸ ಬೇಕಾಗಿದೆ. ಸರಕಾರ ತಕ್ಷಣವೇ ಕೊಲೆಜಿಯಂ(ನೇಮಕ ಮಂಡಳಿ) ಶಿಫಾರಸು ಮಾಡಿರುವ 74 ನ್ಯಾಯಾಧೀಶರ ನೇಮಕಕ್ಕೆ ಮಂಜೂರಾತಿ ನೀಡಬೇಕು.

ಸಪ್ಟೆಂಬರ್ 2, 2016

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?



ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2 ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಕಳೆದ ಸಂಚಿಕೆಗಳಲ್ಲಿ ರೂ.18,000 ಕನಿಷ್ಟ ಕೂಲಿ, ಉದ್ಯೋಗಾವಕಾಶ ನಿರ್ಮಾಣ ಕಾರ್ಮಿಕ ಕಾನೂನುಗಳಿಗೆ ತರಬೇಕೆಂದಿರುವ ಎಲ್ಲ ಬದಲಾವಣೆಗಳನ್ನು ರದ್ದು ಮಾಡಬೇಕು ಮತ್ತು ಗುತ್ತಿಗೆ ಕಾರ್ಮಿಕರ ಶೋಷಣೆಯನ್ನು ನಿಲ್ಲಿಸಬೇಕು ಮತ್ತು ಸಾರ್ವಜನಿಕ ವಲಯದಲ್ಲಿ ಶೇರು ಹಿಂಪಡಿಕೆ, ಎಫ್‌ಡಿಐಗೆ ಹೆಚ್ಚೆಚ್ಚು ಅವಕಾಶ ನೀಡುವುದನ್ನು ನಿಲ್ಲಿಸಬೇಕು, ಕಾರ್ಮಿಕರನ್ನು ಮಾತ್ರವಲ್ಲ, ಜನಸಾಮಾನ್ಯರನ್ನೆಲ್ಲ ಬಾಧಿಸುವ ಒಂದು ಪ್ರಮುಖ ಪ್ರಶ್ನೆಯಾದ ಬೆಲೆಯೇರಿಕೆಯ ಮೇಲೆ ಹತೋಟಿ ಹಾಕಬೇಕು ಮತ್ತು ಒಟ್ಟು ಉತ್ಪಾದನಾ ಪ್ರಕ್ರಿಯೆಯಲ್ಲಿ ದುಡಿಮೆಯ ಘನತೆಯನ್ನು ನಿರಾಕರಿಸುವಂತಹ ವಿವಿಧ ಸೌಲಭ್ಯಗಳ ಮೇಲಿನ ತರ್ಕಹೀನ ಮಿತಿಗಳನ್ನು ತೆಗೆಯಬೇಕು ಬೇಡಿಕೆಗಳನ್ನು ಪರಿಶೀಲಸಲಾಗಿತ್ತು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ, **ಎಸ್. ವರಲಕ್ಷ್ಮಿ** ಅವರ ಈ ವಾರದ ಈ ಲೇಖನದಲ್ಲಿ ಜಗತ್ತಿನ ಯಾವ ಮೂಲೆಯಲ್ಲಾದರೂ ದಾರಿದ್ರ್ಯವಿದ್ದರೆ ಅದು ಜಗತ್ತಿನ ಅಭಿವೃದ್ಧಿಗೆ ಮಾರಕವಾಗುತ್ತದೆ ಎಂದು ಸಾರುವ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್ಒ) ಮತ್ತು ವಿಶ್ವಸಂಸ್ಥೆಯೂ ಅನುಮೋದಿಸಿರುವ ಸಾರ್ವತ್ರಿಕ ಸಾಮಾಜಿಕ ಭದ್ರತಾ ಕ್ರಮಗಳನ್ನು ಪರೀಕ್ಷಿಸಲಾಗಿದೆ.

ಎಲ್ಲರಿಗೂ ಸಾಮಾಜಿಕ ಭದ್ರತೆಯ ಕ್ರಮಗಳು ಸರಕಾರಕ್ಕೆ ಸಂವಿಧಾನ ವಿಧಿಸಿರುವ ಜವಾಬ್ದಾರಿ

25 ವರ್ಷಗಳ ಉದಾರೀಕರಣದ ಫಲವಾಗಿ ಸಾಮಾಜಿಕ ಭದ್ರತೆಯ ಭಾಗವಾಗಿರುವ ಪಿಎಫ್, ಇಎಸ್‌ಐ, ಪಿಂಚಣಿ, ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ, ವಿಧವೆಯರಿಗೂ ಸಿಗುತ್ತಿದ್ದ ಹಲವು ರೀತಿಯ ಸವಲತ್ತುಗಳು ಇಂದು ತೋರಿಕೆಗೆ ಎಂಬಂತೆ ಭಾಸವಾಗುತ್ತಿದೆ. ಕೇಂದ್ರ ಸರ್ಕಾರ ಘೋಷಣೆಗಳನ್ನು ನೀಡುತ್ತಲೇ ದೀರ್ಘಕಾಲದಿಂದ ಇರುವ ಕೆಲವು ಸಾಮಾಜಿಕ ಭದ್ರತೆಯ ಸವಲತ್ತುಗಳನ್ನು ಕೂಡ ಖಾಸಗೀಕರಿಸಲು ಅಥವಾ ಇಲ್ಲವಾಗಿಸಲು ಹೊರಟಿದೆ. ಹೇಗೆಂಬುದನ್ನು ಪರಿಶೀಲಿಸೋಣ.

1 ಭವಿಷ್ಯನಿಧಿ (ಪಿಎಫ್):

1951ರಲ್ಲಿ ಸುಗ್ರೀವಾಜ್ಞೆಯ ಮೂಲಕ ಬಂದ ನೌಕರರ ಭವಿಷ್ಯ ನಿಧಿ(ಇಪಿಎಫ್) ಯೋಜನೆಯು 1952ರಿಂದಲೂ ಜಾರಿಯಲ್ಲಿದೆ. ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಸಾಮಾಜಿಕ ಭದ್ರತಾ ಸಂಘಟನೆ ಇದು. 9.26 ಲಕ್ಷ ಉದ್ಯಮಗಳು, 17 ಕೋಟಿ 79 ಲಕ್ಷ ಕಾರ್ಮಿಕರ ಖಾತೆಗಳು ಮತ್ತು 47.19 ಲಕ್ಷ ಪಿಂಚಣಿದಾರರು ಇದ್ದಾರೆ.

ಈ ಕಾಯ್ದೆ ಕನಿಷ್ಟ 20 ಕಾರ್ಮಿಕರನ್ನು ದುಡಿಸಿಕೊಳ್ಳುವ ಎಲ್ಲ ಸಂಸ್ಥೆಗಳಿಗೂ ಅನ್ವಯವಾಗಬೇಕಿತ್ತು. ಆದರೆ ಅವನ್ನೆಲ್ಲ ಪಿಎಫ್ ಅಡಿಯಲ್ಲಿ ತರುವ ಪ್ರಯತ್ನಗಳನ್ನು ಮಾಡುತ್ತಿಲ್ಲ.

ಪ್ರಾವಿಡೆಂಟ್ ಫಂಡ್ ಮತ್ತು ಗ್ರಾಚ್ಯುಟಿಗಳಲ್ಲದೇ ಮೂರನೇ ಸವಲತ್ತಾಗಿ ನಿವೃತ್ತಿ ಸೌಲಭ್ಯವಾಗಿ ಪಿಂಚಣಿ ಬೇಕೆಂದೂ ಸಿಐಟಿಯು ಪ್ರಾರಂಭದಿಂದಲೂ ಹೋರಾಡುತ್ತಿದೆ. 1995ರಲ್ಲಿ ಪಿಂಚಣಿ ಯೋಜನೆಯು ಇಪಿಎಫ್‌ನ ಭಾಗವಾಗಿದ್ದು ಇಪಿಎಫ್ ನಿಗದಿತ ವಂತಿಕೆಯ ಆಧಾರದಲ್ಲಿ ನಿಗದಿತ ಸೌಲಭ್ಯವನ್ನು ನೀಡುತ್ತದೆ. ಈ ಯೋಜನೆಯನ್ನು ಬಲವಂತವಾಗಿ ಕಾರ್ಮಿಕರ ಮೇಲೆ ಹೇರಲಾಯಿತು. ಹಲವು ಚಳುವಳಿಗಳ ನಂತರ ಯುಪಿಎ ಸರ್ಕಾರ 1000 ರೂ.ಗಳ ಕನಿಷ್ಟ ಪಿಂಚಣಿಯನ್ನು ಕೊಡುವಂತಾಯಿತು.

2015–16ರ ಬಜೆಟ್ ಭಾಷಣದಲ್ಲಿ ಇಪಿಎಫ್ ಮತ್ತು ಇಎಸ್‌ಐ ಯೋಜನೆಗಳ ಗ್ರಾಹಕರು ಅದರ ಒತ್ತೆಯಾಳುಗಳಾಗಿದ್ದಾರೆಂದೂ, ಅವರನ್ನು ಅದ–ರಿಂದ ಬಿಡಿಸಲು ಪಿಎಫ್‌ನಿಂದ ಎನ್‌ಪಿಎಸ್ (ಹೊಸ ಪಿಂಚಣಿ ಯೋಜನೆಗೆ) ಮತ್ತು ಇಎಸ್‌ಐನಿಂದ ವೈದ್ಯಕೀಯ ಇನ್ಸೂರೆನ್ಸ್ ಪಾಲಿಸಿ (Medical Insurance Policy) ಗೆ ಸೇರಲು ಅವಕಾಶ ನೀಡುವುದಾಗಿ ಪ್ರಕಟಿಸಲಾಯಿತು. ಇಎಸ್‌ಐನ್ನು ಮೆಡಿಕಲ್ ಇನ್ಸೂರೆನ್ಸ್‌ಗೆ ಬದಲಾಯಿಸುವುದರಿಂದ ಖಾಸಗೀ ಕ್ಷೇತ್ರದ ಸಾಮಾನ್ಯ ವಿಮಾ ಕಂಪನಿಗಳಿಗೆ ವ್ಯವಹಾರ ಒದಗಿಸಿಕೊಟ್ಟಂತಾಗಿದೆಯೇ ಹೊರತು ಕಾರ್ಮಿಕರ ಮಟ್ಟಿಗೆ ಇದರಿಂದ ಸ್ವಲ್ಪ ಮಟ್ಟಿಗೆ ಸಿಗುತ್ತಿರುವ ಆಸ್ಪತ್ರೆ ಸೇವೆಯನ್ನು ಹೊರತುಪಡಿಸಿ ಉಳಿದೆಲ್ಲ ಸೌಲಭ್ಯಗಳು ಕಸಿಯಲ್ಪಡುತ್ತವೆ. ಸಾಮಾನ್ಯ ವಿಮಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ಕೊಟ್ಟಿರುವ ಹಿನ್ನೆಲೆಯಲ್ಲಿ ವಿದೇಶಿ ಕಂಪನಿಗಳಿಗೆ ಅವಕಾಶ ದೊರಕುತ್ತದೆ. ನವ ಉದಾರೀಕರಣದ ನೀತಿಗಳ ಪರಿಣಾಮದಿಂದ ಉದ್ಯೋಗಸ್ಥರ ವೆಚ್ಚದಲ್ಲಿ ವಿದೇಶಿ ಮತ್ತು ಖಾಸಗೀ ಕಂಪನಿಗಳಿಗೆ ಲಾಭ ದೊರೆಯಲಿದೆಯಷ್ಟೇ.

ಇಪಿಎಫ್ ಕಾಯ್ದೆಗೇನೆ ತಿದ್ದುಪಡಿ ಮಾಡುವ ಮೂಲಕ ಹೊಸ ಪೆನ್ಷನ್ ಯೋಜನೆಯನ್ನು (ಎನ್‌ಪಿಎಸ್) ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಉದ್ಯೋಗಿಗಳಿಗೆ ನೀಡುವ ಸೂಚನೆಯಿದೆ. ಖಾಸಗೀ ಕ್ಷೇತ್ರದ ಬಹುತೇಕ ಗುತ್ತಿಗೆ ಕಾರ್ಮಿಕರಿಗೆ ಈ ಆಯ್ಕೆಯ ಸೌಲಭ್ಯವಿಲ್ಲದೆ ಎನ್‌ಪಿಎಸ್‌ಗೆ ತಳ್ಳಲ್ಪಡುತ್ತಾರೆ.

2 ಸಾರ್ವತ್ರಿಕವಾದ ಸಾಮಾಜಿಕ ಭದ್ರತೆಯ ರಕ್ಷಣೆ ಎಲ್ಲರಿಗೂ ಸಿಗಬೇಕು :

ಕಾರ್ಮಿಕ ಚಳುವಳಿಗಳ ನಿರಂತರ ಪ್ರಯತ್ನಗಳ ಫಲವಾಗಿ "ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾನೂನು–2008"ನ್ನು ತಂದಿದೆ.

- 2008 ಏಪ್ರಿಲ್‌ನಲ್ಲಿ ಜಾರಿಯಾದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ(RSBY) ಬಿಪಿಎಲ್ ಕಾರ್ಡ್ ಇದ್ದವರಿಗೆ ಮಾತ್ರ ಸವಲತ್ತು ಇತ್ತು. 2015 ಏಪ್ರಿಲ್‌ನಲ್ಲಿ ಮೋದಿ ಸರ್ಕಾರ RSBY, ಆಮ್ ಆದ್ಮಿ ಭೀಮಾ ಯೋಜನಾ, ಇಂದಿರಾ ಗಾಂಧೀ ವೃದ್ಯಾಪ್ಯ ಯೋಜನೆಗಳನ್ನು ಸೇರಿಸಿ ಒಂದೇ ಸ್ಮಾರ್ಟ್ ಕಾರ್ಡ್ ನೀಡಿ ಪ್ರಧಾನ ಮಂತ್ರಿ ಜನಧನ್ ಯೋಜನೆ ಮೂಲಕ ಆಧಾರ್ ಕಾರ್ಡ್‌ನ್ನು ಲಿಂಕ್ ಮಾಡಿದೆ.

  ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (PMJJBY), ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನಾ (PMSBY), ಈ 2 ಯೋಜನೆಗಳು 2001ರಿಂದ ಜಾರಿಯಲ್ಲಿದ್ದ ಆಮ್ ಆದ್ಮಿ ಬಿಮಾ ಯೋಜನೆಯ ರೂಪಾಂತರಗಳು. ಈ ಆಮ್ ಆದ್ಮಿ ಯೋಜನೆಯನ್ನು 47 ವಿವಿಧ ವೃತ್ತಿ ಮಾಡುವ ಗುಂಪುಗಳಿಗೆ ಜಾರಿ ಮಾಡಲಾಗಿತ್ತು. 9 ರಿಂದ 12ನೇ ತರಗತಿಯ ತನಕ ವಿದ್ಯಾರ್ಥಿ ವೇತನ, ಅಪಘಾತ ಪರಿಹಾರ, ಅಪಘಾತ ಅಂಗವೈಕಲ್ಯದ ಪರಿಹಾರಗಳು ಸಿಗುತ್ತಿತ್ತು. ಈಗ ಇದನ್ನು PMJJ-BYಗೆ ಸೇರಿಸಿರುವುದುರಿಂದ ಫಲಾನುಭವಿಯೇ ಹಣವನ್ನು ಭರಿಸಬೇಕು.
- **ಹೊಸ ಅಟಲ್ ಪೆನ್ಷನ್ ಯೋಜನೆ :** 2010 ರಿಂದಲೇ ಜಾರಿಯಲ್ಲಿದ್ದ ಸ್ವಾವಲಂಬನ ಪಿಂಚಣಿ ಯೋಜನೆ (NPS Lite) ಯನ್ನು ಅಟಲ್ ಪೆನ್ಷನ್ ಯೋಜನೆ ಎಂದು ಮರು ನಾಮಕರಣ ಮಾಡಲಾಗಿದೆ. ಇದರಲ್ಲಿ ಕೇವಲ 18 ರಿಂದ 40 ವರ್ಷ ವಯಸ್ಸನ್ನು ಮಾತ್ರ ನಿಗದಿಗೊಳಿಸಿದೆ. ಇದರಲ್ಲಿ ಫಲಾನುಭವಿ ಹಣ ಎಷ್ಟು ತೊಡಗಿಸುತ್ತಾನೆ ಎಂಬುದರ ಆಧಾರದಲ್ಲಿ ಮತ್ತು ಆ ಫಲಾನುಭವಿಗೆ 60 ವರ್ಷ ದಾಟಿದ ನಂತರ ಪೆನ್ಷನ್ ದೊರೆಯುತ್ತದೆ. ಇದರಲ್ಲಿ 50 ರಷ್ಟು ವಂತಿಗೆಯನ್ನು ಸರ್ಕಾರ ಭರಿಸುತ್ತದೆ. 22 ವರ್ಷಗಳು ಕೂಡಿಟ್ಟ ಹಣವನ್ನು ಪಡೆಯಲು 20 ವರ್ಷ ಹೆಚ್ಚುವರಿಯಾಗಿ ಕಾಯಬೇಕು. ಇವರಿಂದ ಕೂಡಿದ ಹಣಕ್ಕೆ 20 ವರ್ಷಗಳ ನಂತರ ಬರುವ ಹಣದ ಮೌಲ್ಯ ಮತ್ತು ಬಡ್ಡಿದರಗಳು ಕಡಿಮೆಯಿರುತ್ತವೆ.
- **ಜನ್‌ಧನ ಯೋಜನೆ :** ಜನ್‌ಧನ್ ಯೋಜನೆ ಜಾರಿಯಾದ ಬಳಿಕ, ಸರ್ಕಾರದ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ 23.62 ಕೋಟಿ ಕೋಟಿ ಜನರು(14.49 ಗ್ರಾಮೀಣ, 9.13 ನಗರ) ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆದಿದ್ದು ಇವುಗಳಲ್ಲಿ 41723.30 ಕೋಟಿ ಹಣ ಇದೆ. ಈ ಯೋಜನೆಯಲ್ಲಿ ಕಡ್ಡಾಯವಾಗಿ 6 ತಿಂಗಳ ಕಾಲ ಫಲಾನುಭವಿ ವ್ಯವಹರಿಸಿದರೆ ಮತ್ತು 500 ರಿಂದ 1000 ರೂ.ಗಳ ಹಣ ಖಾತೆಯಲ್ಲಿದ್ದರೆ ಮಾತ್ರ ಅವರಿಗೆ ಸಾಲ ಸೌಲಭ್ಯ ಸಿಗುತ್ತದೆ.
- ಇತ್ತೀಚೆಗೆ ಹಿರಿಯ ನಾಗರಿಕರಿಗೆ ಸಾಮಾಜಿಕ

ಪುಟ 10 ಕ್ಕೆ

ಇಎಸ್‌ಐ ನಿಯಮಾವಳಿಗೊಂದು ಅನಗತ್ಯ ಕಾನೂನುಬಾಹಿರ ತಿದ್ದುಪಡಿ

– ಕೈಬಿಡಲು ಸಿಐಟಿಯು ಆಗ್ರಹ

ಕೇಂದ್ರ ಕಾರ್ಮಿಕ ಮಂತ್ರಾಲಯ ಇದೇ ಜುಲೈ 25 ರಂದು ಒಂದು ಗಜೆಟ್ ಅಧಿಸೂಚನೆ ಹೊರಡಿಸಿ ಇಎಸ್‌ಐ ನಿಯಮಗಳು, 1950 ಇದರಲ್ಲಿ ಒಂದು ತಿದ್ದುಪಡಿಯನ್ನು(51 ಬಿ) ಸೂಚಿಸಿದೆ. ಅದರ ಪ್ರಕಾರ ಇಎಸ್‌ಐ ಹೊಸದಾಗಿ ಮೊದಲ ಬಾರಿಗೆ ಜಾರಿಯಾಗುತ್ತಿರುವ ಪ್ರದೇಶಗಳಲ್ಲಿ ಮೊದಲ 24 ತಿಂಗಳು ಮಾಲಿಕರ ವಂತಿಗೆಯನ್ನು ಕಾರ್ಮಿಕರ ಸಂಬಳದ 3ಶೇ.ಕ್ಕೆ ಮತ್ತು ಕಾರ್ಮಿಕರ ವಂತಿಗೆಯನ್ನು 1ಶೇ. ಕ್ಕೆ ಇಳಿಸಲಾಗಿದೆ.

ಇದಕ್ಕೆ ಸಿಐಟಿಯು ಬಲವಾದ ಆಕ್ಷೇಪವನ್ನು ಎತ್ತಿದೆ. ಈ ತಿದ್ದುಪಡಿ ಅಗತ್ಯವಿರಲಿಲ್ಲ ಎನ್ನುತ್ತ ಇದು ಒಂದೇ ರೀತಿಯ ಸೌಲಭ್ಯಕ್ಕೆ ಭಿನ್ನ ವಂತಿಗೆ ವಸೂಲಿ ಮಾಡಿದಂತಾಗುತ್ತದೆ. ಇದರಿಂದ ಕೆಲವು ಮಾಲಿಕರಿಗೆ ಶ್ರಮವೆಚ್ಚದಲ್ಲಿ ಇಳಿಕೆಯ ಪ್ರಯೋಜನ ಸಿಕ್ಕಿ ಅನಾರೋಗ್ಯಕರ ಸ್ಪರ್ಧೆಗೆ ದಾರಿ ಮಾಡಿಕೊಡಬಹುದು ಎಂದು ಕಾರ್ಮಿಕ ಇಲಾಖೆಯ ಅಂಡರ್ ಸೆಕ್ರೆಟರಿಗೆ ಬರೆದ ಪತ್ರದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಶಾಸನಬದ್ಧ ಸ್ವರೂಪದ ಸಾಮಾಜಿಕ ಭದ್ರತೆ–ಯ ಒಂದು ಕ್ರಮದಲ್ಲಿ ಮಾಲಕರ ವಂತಿಗೆಯನ್ನು ಈ ರೀತಿ ಇಳಿಸುವುದು ಸರ್ವಥಾ ಸರಿಯಲ್ಲ. ಇದರಿಂದ ಕಾರ್ಮಿಕರ ವಂತಿಗೆಯಿಂದ ನಡೆಯುವ ಈ ಯೋಜನೆಯನ್ನು ನಡೆಸಲು ಇಎಸ್‌ಐ ಕಾರ್ಪೊರೇಶನ್‌ಗೆ ಅಡ್ಡಿ ಉಂಟಾಗುತ್ತದೆ. ಅಲ್ಲದೆ, ಇಎಸ್‌ಐ ಕಾರ್ಪೊರೇಶನ್‌ಗೆ ಹೊಸ ಪ್ರದೇಶಗಳಲ್ಲಿ ಇತರ ಕಡೆಗಳಲ್ಲಿರುವಂತಹ ಸೌಲಭ್ಯಗಳನ್ನು ಒದಗಿಸಲು ಕಷ್ಟವಾಗ ಬಹುದಾಗಿದ್ದು ಮುಂದೆ ಈ ಕಡಿಮೆ ವಂತಿಗೆ ದರವನ್ನೇ ಮುಂದೆ ಸೌಲಭ್ಯಗಳನ್ನು ಕಡಿತ ಮಾಡಲು ನೆವವಾಗಿ ಬಳಸುವ ಸಾ ಧ್ಯತೆ–ಯೂ ಇದೆ ಎಂದು ಸಿಐಟಿಯು ಸಂದೇಹ ವ್ಯಕ್ತಪಡಿಸಿದೆ.

ಹೊಸದಾಗಿ ನೋಟಿಫೈ ಆಗಿರುವ ಪ್ರದೇಶಗಳಲ್ಲಿಯೂ ಸೂಪರ್ ಸ್ಪೆಶಾಲಿಟಿ ಆರೋಗ್ಯ ಸೇವೆಗಳನ್ನು ಒದಗಿಸಬೇಕು, 51 ಬಿ ಎಂಬ ಈ ಹೊಸ ನಿಯವನ್ನು ಸೇರಿಸುವ ತಿದ್ದುಪಡಿಯ ಬದಲು ನೌಕರರ ಭವಿಷ್ಯ ನಿಧಿ(ಇಪಿಎಫ್) ಯಂತೆ ಇಎಸ್‌ಐ ಸೌಲಭ್ಯವನ್ನೂ ಸಾರ್ವತ್ರಿಕವಾಗಿ ಯಾವುದೇ ಸಂಬಳ ಅಥವ ಸೌಲಭ್ಯದ ಮಿತಿ ಹಾಕದೆ ಅನ್ವಯಿಸುವಂತಹ ತಿದ್ದುಪಡಿಯನ್ನು ತರಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ತಕ್ಷಣವೇ ಈ ಗಜೆಟ್ ಅಧಿಸೂಚನೆಯಲ್ಲಿ ಪ್ರಸ್ತಾವಿಸಿರುವ ಕಾನೂನುಬಾಹಿರ ತಿದ್ದುಪಡಿಯನ್ನು ಕೈಬಿಟ್ಟು ಇಎಸ್‌ಐ ಅಡಿಯಲ್ಲಿರುವ ವಿಶ್ವಾಸಾರ್ಹ ಸಾಮಾಜಿಕ ಭದ್ರತಾ ಯೋಜನೆಯನ್ನು ಮತ್ತು ಅದನ್ನು ಒದಗಿಸುವ ಸಂಘಟನೆಯನ್ನು ರಕ್ಷಿಸಲು ಇದು ಅಗತ್ಯ ಎಂದು ಸಿಐಟಿಯು ಹೇಳಿದೆ.

ಗಾರ್ಮೆಂಟ್ ಕಾರ್ಮಿಕರು ಗೌರ್ಮೆಂಟನ್ನು ಗಾರ್ಮೆಂಟ್ ಮಾಡಿದ್ದು

ಚಾರಿತ್ರಿಕ ಗಾರ್ಮೆಂಟ್ ಕಾರ್ಮಿಕರ ಹೋರಾಟ ಸೇರಿದಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಹಲವಾರು ಚಳುವಳಿಗಳಲ್ಲಿ ದುಡಿಯುವ ಮಹಿಳೆಯರೇ ನೇತೃತ್ವ ತೆಗೆದುಕೊಂಡು ಮಾಡಿದಂತಹ ಹೋರಾಟಗಳು ಇತಿಹಾಸದ ಮೈಲಿಗಲ್ಲುಗಳಾಗಿವೆ. ಅಗಸ್ಟ್ 20–21ರಂದು ಮೈಸೂರಿನಲ್ಲಿ ದುಡಿಯುವ ಮಹಿಳಾ ಸಮನ್ವಯ ಸಮಿತಿ (ಸಿಐಟಿಯು) ರಾಜ್ಯ ಸಮಾವೇಶ ನಡೆಯುತ್ತದೆ. ಈ ಸಂದರ್ಭದಲ್ಲಿ ಈ ಬಗ್ಗೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಏಕೆ? ಕರ್ನಾಟಕದಲ್ಲಿ ದುಡಿಯುವ ಮಹಿಳೆಯರಿಗೆ ಇರುವ ಕಾನೂನುಗಳು ಎಷ್ಟು ಮಟ್ಟಿಗೆ ಜಾರಿಯಾಗಿವೆ? ಕಳೆದ 3 ವರ್ಷಗಳ ಅವಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯೇ ಪ್ರಧಾನವಾಗಿರುವ ಕೆಲವು ಪ್ರಮುಖ ಹೋರಾಟಗಳು – ಇವುಗಳ ಬಗ್ಗೆ ಬೆಳಕು ಚೆಲ್ಲುವ ಲೇಖನ.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಏನು? ಏಕೆ?

ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಒಳಗೊಳ್ಳದೇ ದುಡಿಯುವ ವರ್ಗದ ಮುಕ್ತಿಯಾಗಲೀ ಆಳುವವರ ಶೋಷಣೆಯಿಂದ ಪೂರ್ಣ ಬಿಡುಗಡೆಯಾಗಲು ಸಾಧ್ಯವಿಲ್ಲ ಎಂದು ಸಿಐಟಿಯು ದೃಢವಾಗಿ ಹೇಳುತ್ತದೆ. ಅದಕ್ಕಾಗಿಯೇ 1979ರಲ್ಲಿಯೇ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯನ್ನು ಸಿಐಟಿಯು ಅಡಿಯಲ್ಲಿ ರಚಿಸಿತು. ಇದೊಂದು ಪ್ರತ್ಯೇಕ ಸಂಘಟನೆ ಅಲ್ಲ. ಸಿಐಟಿಯು ದುಡಿಯುವ ಮಹಿಳೆಯರ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೋರಾಡಲು, ಕೈಗಾರಿಕಾವಾರು ಉಪಸಮಿತಿ ರಚಿಸಿ, ದುಡಿಯುವ ಮಹಿಳೆಯರು ಪ್ರತ್ಯೇಕವಾಗಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಅದನ್ನು ಸಿಐಟಿಯುನ ಮುಖ್ಯ ಬೇಡಿಕೆಯಾಗಿಸಲು ಮತ್ತು ದುಡಿಯುವ ಮಹಿಳೆಯರನ್ನು ನಾಯಕತ್ವಕ್ಕೆ ತರಲು ಈ ಸಮಿತಿ ಕೆಲಸ ನಿರ್ವಹಿಸಬೇಕಿದೆ. ಇಂದು ಹಲವಾರು ಕಾರ್ಮಿಕ ಸಂಘಗಳು ದುಡಿಯುವ ಮಹಿಳೆಯರನ್ನು ಕೇವಲ ಹೋರಾಟಗಳಿಗೆ ಬಳಸಿಕೊಳ್ಳುತ್ತಾರೆ ವಿನಃ ಅವರದ್ದೇ ಆದ ಪ್ರತ್ಯೇಕ ಬೇಡಿಕೆಗಳನ್ನು ಮುಂಚೂಣಿಗೆ ತಂದು, ಸಾಮಾಜಿಕ ಪ್ರಶ್ನೆಗಳಿಗೆ ಧ್ವನಿಯಾಗುತ್ತಿಲ್ಲ, ಮಾತ್ರವಲ್ಲ ಮಹಿಳಾ ಕಾರ್ಮಿಕರನ್ನು ನಾಯಕತ್ವಕ್ಕೆ ತರಲು ಪ್ರಯತ್ನಿಸುವುದಿಲ್ಲ. ಬದಲಾಗಿ ದುಡಿಯುವ ಮಹಿಳೆಯರನ್ನು ಸಮಾಜದ ವಿಭಿನ್ನ ಹಿತಾಸಕ್ತರು ತಮ್ಮ ಮನಬಂದಂತೆ ನೋಡುತ್ತಾರೆ, ವರ್ತಿಸುತ್ತಾರೆ. ಆದರೆ, **ಸಿಐಟಿಯು ಸಂಘಟನೆಯು ಮಾತ್ರವೇ ದುಡಿಯುವ ಮಹಿಳೆಯರಿಗೆ ಉದ್ಯೋಗ ಭದ್ರತೆ, ಸಮಾನ ಅವಕಾಶ, ಸಮಾನ ಹಕ್ಕು, ಸಮಾನ ಗೌರವಕ್ಕಾಗಿ, ಕೆಲಸದ ಸ್ಥಳದಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆಗೆ, ಮಹಿಳೆಯರ ಮೇಲಿನ ಎಲ್ಲಾ ರೀತಿಯ ದೌರ್ಜನ್ಯ ತಡೆಗಟ್ಟಲು ಎಲ್ಲಾ ಹಂತದಲ್ಲಿ ಸತತ ಪ್ರಯತ್ನಿಸುತ್ತಿದೆ. ಸಿಐಟಿಯುನ** ನಿರಂತರ ಪರಿಶ್ರಮದಿಂದಾಗಿ ಪ್ರತಿಯೊಂದು ಹಂತದ ಸಮಿತಿಗಳಲ್ಲಿ ಮತ್ತು ಸಂಯೋಜಿತ ಸಂಘಗಳಲ್ಲಿ ದುಡಿಯುವ ಮಹಿಳೆಯರು ಇಂದು ದೇಶದಾದ್ಯಂತ ಮತ್ತು ನಮ್ಮ ರಾಜ್ಯದಲ್ಲಿ ನಾಯಕತ್ವಕ್ಕೆ ಬಂದಿರುವುದು ಚಳುವಳಿಯ ಉಜ್ವಲ ಭವಿಷ್ಯದ ಸೂಚನೆಯಾಗಿದೆ.

ಕಾರ್ಮಿಕ ಚಳುವಳಿಗಳಲ್ಲಿ ದುಡಿಯುವ ಮಹಿಳೆಯರು

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಹಲವಾರು ಚಳುವಳಿಗಳಲ್ಲಿ ದುಡಿಯುವ ಮಹಿಳೆಯರೇ ನೇತೃತ್ವ ತೆಗೆದುಕೊಂಡು ಮಾಡಿದಂತಹ ಹೋರಾಟಗಳು ಇತಿಹಾಸದ ಮೈಲಿಗಲ್ಲುಗಳಾಗಿವೆ.

ಈ ಅವಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯೇ ಪ್ರಧಾನವಾಗಿರುವ ಕೆಲವು ಪ್ರಮುಖ ಹೋರಾಟಗಳು

- ಪಿ.ಎಫ್. ಕಾನೂನು ತಿದ್ದುಪಡಿ ವಿರುದ್ಧ ಗಾರ್ಮೆಂಟ್ ಕಾರ್ಮಿಕರ ಹೋರಾಟ
- ತಂಬಾಕು ನಿಷೇಧ ಜಾರಿಯಾದಲ್ಲಿ ಪರ್ಯಾಯ ಉದ್ಯೋಗಕ್ಕಾಗಿ; ಉದ್ಯಮ ಚಿಕ್ಕಟ್ಟಿನ ಹೆಸರಲ್ಲಿ ಕನಿಷ್ಠ ಕೂಲಿ, ಡಿಎ, ಆರೋಗ್ಯ ಸೌಲಭ್ಯಗಳನ್ನು ವಂಚಿಸುತ್ತಿರುವ ಮಾಲಿಕರ ವಿರುದ್ಧ ನಡೆಯುತ್ತಿರುವ ಮಹಿಳಾ ಬೀಡಿ ಕಾರ್ಮಿಕರ ಹೋರಾಟ
- ಐಸಿಡಿಎಸ್ ಯೋಜನೆಗೆ ಅನುದಾನವನ್ನು ಕಡಿತ ಮಾಡಿ, ಮಿಷನ್ ಮೋಡ್ ಮಾಡುವ ಮುಖಾಂತರ ಖಾಸಗೀಕರಿಸುವ ಹುನ್ನಾರದ ವಿರುದ್ಧ 2015 ಫೆಬ್ರವರಿಯಲ್ಲಿ 1.10 ಲಕ್ಷ ಅಂಗನವಾಡಿ ನೌಕರರರು 25 ಜಿಲ್ಲೆಗಳಲ್ಲಿ 10 ದಿನಗಳ ಕಾಲ ನಡೆಸಿದ ಅಹೋರಾತ್ರಿ ಧರಣಿ, ಫೆಬ್ರವರಿ 12ರಂದು ಬೆಂಗಳೂರಿನಲ್ಲಿ ಬೀದಿಗಿಳಿದ 40 ಸಾವಿರ ಅಂಗನವಾಡಿ ನೌಕರರರ ಸಮರಶೀಲ ಹೋರಾಟ
- ಅಕ್ಷರ ದಾಸೋಹ ಯೋಜನೆಗೆ ಅನುದಾನ ಕಡಿತ ಮತ್ತು ಖಾಸಗೀಕರಣದ ಪ್ರಯತ್ನಗಳ ವಿರುದ್ಧ, 2013 ಡಿಸೆಂಬರ್‌ನಲ್ಲಿ ಸುಮಾರು 5 ರಾತ್ರಿ 6 ಹಗಲುಗಳ ಕಾಲ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ
- ಎರಡು ರೀತಿಯ (ಖಾಯಂ, ಚೆಂಗೂಲಿ) ಕೂಲಿ ವ್ಯವಸ್ಥೆ ಹಾಗೂ ಲೈಂಗಿಕ ದೌರ್ಜನ್ಯಗಳ ವಿರುದ್ಧ, ವೈದಕೀಯ ಸೌಲಭ್ಯಗಳಿಗಾಗಿ ಮಹಿಳಾ ಪ್ಲಾಂಟೇಶನ್ ಕಾರ್ಮಿಕರ ಹೋರಾಟ
- 4–5 ತಿಂಗಳಿಗೊಮ್ಮೆ ವೇತನ ಪಡೆಯುವ, ವಾರದ ರಜೆ/ಆರೋಗ್ಯ/ಹೆರಿಗೆ ರಜೆ ಮುಂತಾದ ಸೌಲಭ್ಯಗಳಿಲ್ಲದಿರುವ, ಅಧಿಕಾರಿಗಳ ಒತ್ತಡ, ಲೈಂಗಿಕ ಕಿರುಕುಳ ಸಹಿಸಬೇಕಾದ ಮಹಿಳಾ ಬಿಬಿಎಂಪಿ–ಕಂಪ್ಯೂಟರ್ ಆಪರೇಟರುಗಳ ಸಂಘಟಿತ ಹೋರಾಟ

ಹಾಗೂ

ಪಿಯುಸಿ ಶಿಕ್ಷಕರ, ರಾಜ್ಯ ಸರ್ಕಾರಿ ನೌಕರರ, ರಾಜ್ಯ ಸರಕಾರ ಗುತ್ತಿಗೆ/ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ ವಿದ್ಯುತ್ ಸರಬರಾಜು, 108 ಅಂಬುಲೆನ್ಸ್ ನೌಕರರು, ನರ್ಸ್‌ಗಳು, ಅತಿಥಿ ಶಿಕ್ಷಕರು, ಮೊರಾರ್ಜಿ ದೇಸಾಯಿ ಶಾಲೆಯ ಶಿಕ್ಷಕರು, ಹಾಸ್ಟೆಲ್ ನೌಕರರ ಹೋರಾಟಗಳಲ್ಲೂ ಮಹಿಳಾ ನೌಕರರರು ದೊಡ್ಡ ರೀತಿಯಲ್ಲಿ ಭಾಗವಹಿಸಿದ್ದಾರೆ.

ದುಡಿಯುವ ಮಹಿಳೆಯರಿಗೆ ಇರುವ ಕಾನೂನುಗಳು ಎಷ್ಟು ಮಟ್ಟಿಗೆ ಜಾರಿಯಾಗಿವೆ?

ಎಸ್. ವರಲಕ್ಷ್ಮಿ,-ಯಮುನ ಗಾಂವ್ಕರ್

ದುಡಿಯುವ ಮಹಿಳೆಯರಿಗೆ ಪ್ರಮುಖವಾಗಿ 4 ಕಾನೂನುಗಳಿವೆ.

ಕಾರ್ಖಾನೆಗಳ ಕಾಯ್ದೆ 1948:

ಈ ಕಾಯ್ದೆ ಪ್ರಕಾರ ಕೆಲಸದ ಸ್ಥಳ, ಕನಿಷ್ಠ ಭದ್ರತೆ, ಕೆಲಸದ ಅವಧಿ, ಕನಿಷ್ಠ ಸವಲತ್ತುಗಳಿರಬೇಕೆಂದೂ ತಿಳಿಸಿದೆ. ಮಹಿಳೆಯರನ್ನು ಬೆಳಿಗ್ಗೆ 6 ರಿಂದ ಸಂಜೆ 7 ಗಂಟೆ ತನಕ ದುಡಿಸಬಹುದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಾ ಬೆಳಿಗ್ಗೆ 5 ರಿಂದ ರಾತ್ರಿ 10 ಗಂಟೆ ತನಕ ಮಾತ್ರ ದುಡಿಸಬಹುದು.

- ಮಹಿಳೆಯರನ್ನು ಯಾವುದೇ ಕಾರಣಕ್ಕೂ ವಾರದ ರಜೆ ಮತ್ತು ಇತರ ರಜಾ ದಿನಗಳಲ್ಲಿ, ಹಾಗೂ ಪಾಳಿಯ(ಶಿಫ್ಟ್) ಕೆಲಸಗಳನ್ನು ಮಾಡಿಸಬಾರದು.
- ಅಪಾಯಕಾರಿಯಾದ ಸ್ಥಳಗಳಲ್ಲಿ ಮತ್ತು ಕೆಲಸಗಳಲ್ಲಿ ದುಡಿಸಬಾರದು.
- 30 ಮಹಿಳೆಯರು ಒಂದು ಸಂಸ್ಥೆಯಲ್ಲಿ ದುಡಿಯುತ್ತಿದ್ದರೆ ಅಲ್ಲಿ ಕಡ್ಡಾಯವಾಗಿ ಶಿಶುಪಾಲನಾ ಕೇಂದ್ರ ತೆರೆಯಬೇಕು. ಆದ–ರೆ 26 ವಾರಗಳ ಹೆರಿಗೆಭತ್ಯೆ ಕೊಡಬೇಕೆಂಬ ತಿದ್ದುಪಡಿಯೊಟ್ಟಿಗೆ 50 ಮಹಿಳೆಯರು ಇರುವ ಕಡೆಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಬೇಕೆಂದು ಹೊಸ ತಿದ್ದುಪಡಿಯನ್ನು ಮಾಡಲಾಗಿದೆ. ಇದರಿಂದ ಸಣ್ಣ ಕೈಗಾರಿಕೆಗಳಲ್ಲಿ ಮತ್ತು ವಾಣಿಜ್ಯ ಸಂಕೀರ್ಣಗಳಲ್ಲಿ ಈ ಶಿಶುಪಾಲನಾ ಕೇಂದ್ರಗಳನ್ನು ಪ್ರಾಯೋಗಿಕವಾಗಿ ತೆರೆಯಲು ಸಾಧ್ಯವೇ ಇಲ್ಲ.
- ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯವಿರಬೇಕು, ಸ್ವಚ್ಛವಾಗಿರಬೇಕು.

ಹೆರಿಗೆ ಭತ್ಯೆ ಕಾಯ್ದೆ 1961:

ಈ ಕಾಯ್ದೆ 10 ಜನ ಕಾರ್ಮಿಕರು ಇರುವ ಸಂಸ್ಥೆಗಳಿಗೂ ಅನ್ವಯವಾಗುತ್ತದೆ. ಈಗಿರುವಂತೆ ಕಡ್ಡಾಯವಾಗಿ 12 ವಾರಗಳ ರಜೆಯನ್ನು ಕೊಡಬೇಕು. ಮೆಡಿಕಲ್ ಬೋನಸ್ 2500 ರಿಂದ 3500 ರೂ.ಗಳನ್ನು ಕೊಡಬೇಕು. 26 ವಾರಗಳ ಹೆರಿಗೆ ರಜೆಯನ್ನು ಕೊಡಲು ಈ ಪಾರ್ಲಿಮೆಂಟ್ ಅಧಿವೇಶನದಲ್ಲಿ ಹೆರಿಗೆ ಭತ್ಯೆ ಕಾಯಿದೆಗೆ ತಿದ್ದುಪಡಿಯನ್ನು ತಂದಿದೆ. ಪ್ರಸವ ಪೂರ್ವ 6 ವಾರಗಳ ಮೊದಲು ಹೆರಿಗೆ ರಜೆಯನ್ನು ಕಡ್ಡಾಯಗೊಳಿಸಬೇಕು.

ಸಮಾನ ಕೆಲಸಕ್ಕೆ ಸಮಾನ ವೇತನ ಕಾಯಿದೆ 1976

ದುಡಿಯುವ ಸ್ಥಳಗಳಲ್ಲಿ ಲೈಂಗಿಕ ದಬ್ಬಾಳಿಕೆಯ ವಿರುದ್ಧದ ಕಾಯ್ದೆ 2013

ಹೆರಿಗೆ ರಜೆ ತಪ್ಪಿಸಲು ನೂರಾರು ವಿಧಾನಗಳು

ಈ ಕಾಯ್ದೆಗಳು ಮಹಿಳೆಯರನ್ನು ಹೇಗೆ, ಯಾವಾಗ, ಎಷ್ಟರ ಮಟ್ಟಿಗೆ ದುಡಿಸಬೇಕೆಂದ ಸ್ಪಷ್ಟ ನಿರ್ದೇಶನಗಳಿದ್ದರೂ ಕೂಡಾ ಇಂದು ಈ ಕಾಯ್ದೆಗಳು ಅನ್ವಯ ಆಗದ ರೀತಿಯಲ್ಲಿ ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗುತ್ತಿದೆ. ಗುತ್ತಿಗೆ, ಹೊರಗುತ್ತಿಗೆ ಕೆಲಸಗಳಲ್ಲಿ ಹೆರಿಗೆ ಭತ್ಯೆ ಹೆಸರಿಗಿದೆ. ಉದಾ: ಬೆಂಗಳೂರಿನ ಬಿಬಿಎಂಪಿ ಮಹಿಳಾ ಕಾರ್ಮಿಕರು ಹೆರಿಗೆ ರಜೆ ಮುಗಿಸಿ ಬರುವಾಗ ಅವರ ಜಾಗ–ಕ್ಕೆ ಬೇರೆಯವರು ಬಂದಿರುತ್ತಾರೆ. ಹಾಗೆಯೇ 108 ಅಂಬ್ಯುಲೆನ್ಸ್ ನಲ್ಲಿ ದುಡಿಯುವ ನರ್ಸ್‌ಗಳಿಗೆ ಹೆರಿಗೆ ರಜೆಯೇ ಇಲ್ಲ. ಅಷ್ಟೇಕೆ ಗಾರ್ಮೆಂಟ್ಸ್ ಮತ್ತಿತರ ವಿಭಾಗಗಳಲ್ಲಿ ಕೆಲಸಕ್ಕೆ ರಾಜಿನಾಮೆ ಕೊಟ್ಟು ಹೆರಿಗೆಗೆ ಹೋಗಬೇಕು. ಅಂಚೆ ಕಛೇರಿಗಳ ಇಲಾಖೇತರ ನೌಕರರಿಗೆ, ಏಡೆಡ್ ಸಂಸ್ಥೆಗಳಲ್ಲಿ, ಬಿಸಿಯೂಟ ನೌಕರರಿಗೆ, ಅಂಗನವಾಡಿ ಸಹಾಯಕಿಯರಿಗೆ, ಅತಿಥಿ ಮಹಿಳಾ ಶಿಕ್ಷಕಿಯರಿಗೆ ಇಂದಿಗೂ ಹೆರಿಗೆ ಭತ್ಯೆ ಇಲ್ಲ. ಆಶಾ ನೌಕರರಿಗೆ ಕೆಲಸಕ್ಕೆ ನೇಮಕ ಮಾಡುವಾಗಲೇ ಕಡ್ಡಾಯವಾಗಿ 2 ಮಕ್ಕಳಾಗಿರುವವರು, ಶಸ್ತ್ರ ಚಿಕಿತ್ಸೆ ಆಗಿರುವವರು ಮಾತ್ರ ಎಂಬ ಷರತ್ತನ್ನು ಹಾಕಿ ನೇಮಕ ಮಾಡು ತ್ತಿದ್ದಾರೆ. ಇಂದು ಹೆರಿಗೆ ಭತ್ಯೆಯೇ ಇಲ್ಲದಿದ್ದಾಗ ಕ್ರೆಷ್‌ಗಳ ವ್ಯವಸ್ಥೆ ಹೇಗೆ ಪ್ರಶ್ನಿಸುವುದು?

ಇ.ಎಸ್.ಐ. ಕಾರ್ಪೋರೇಷನ್ ನವ ದೆಹಲಿಯವರ ವರದಿಯ ಪ್ರಕಾರ ಕರ್ನಾಟಕದಲ್ಲಿ 2012–2013ರಲ್ಲಿ 6175 ಮಹಿಳಾ ಕಾರ್ಮಿಕರು ಹೆರಿಗೆ ಭತ್ಯೆಯನ್ನು ಪಡೆದಿದ್ದಾರೆ. ಅಂದರೆ 19.60% ಮಾತ್ರ. ಈ ವರದಿಯ ಪ್ರಕಾರ ಕಾರ್ಖಾನೆಗಳಲ್ಲಿಯೇ ಇದು ಹೆಚ್ಚು ಜಾರಿಯಾಗುತ್ತಿಲ್ಲ.

ರಾತ್ರಿ ಪಾಳಿ, ಲೈಂಗಿಕ ದೌರ್ಜನ್ಯ

ಒಂದೆಡೆ ಮಹಿಳೆಯರನ್ನು ರಾತ್ರಿ ದುಡಿಸಬಾರದೆಂದೂ ಕಾರ್ಖಾನೆ ಕಾಯ್ದೆ ಹೇಳಿದರೂ ಕೂಡಾ ಈಗಾಗಲೇ ಮಹಾರಾಷ್ಟ್ರ ಸರ್ಕಾರ ರಾತ್ರಿ ಪಾಳಿಯದಲ್ಲಿ ದುಡಿಸಲು ಕಾನೂನಿಗೆ ತಿದ್ದುಪಡಿ ತಂದಿದೆ, ಕರ್ನಾಟಕದಲ್ಲಿ 1961 ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯಡಿ ಎಲ್ಲಾ ವಾಣಿಜ್ಯ ಸಂಸ್ಥೆಗಳು 24 ಗಂಟೆ ಅಂಗಡಿಗಳನ್ನು ತೆರೆದಿರಬೇಕು ಮತ್ತು ಮಹಿಳೆಯರು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶವಿರಬೇಕು ಎಂಬ ತಿದ್ದುಪಡಿಗೆ ಕಾಂಗ್ರೆಸ್‌ನ ಸಿದ್ದರಾಮಯ್ಯನವರ ಸರ್ಕಾರದ ಸಚಿವ ಸಂಪುಟ ತೀರ್ಮಾನಿಸಿದೆ. ತುರ್ತು ಸೇವಾ ವಲಯಗಳನ್ನು ಹೊರತುಪಡಿಸಿ, ಇಂದು ಐ.ಟಿ. ಕ್ಷೇತ್ರಗಳಲ್ಲಿ ಈಗಾಗಲೇ ಎಲ್ಲಾ ಕಾನೂನುಗಳ ರಿಯಾಯ್ತಿ ಇರುವುದರಿಂದ ಅಲ್ಲಿ ರಾತ್ರಿ ಪಾಳಿಯಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ.

ಕೆಲಸದ ಸ್ಥಳದಲ್ಲಿ ಲೈಂಗಿಕ ದಬ್ಬಾಳಿಕೆಯ ವಿರುದ್ಧ ಕಾನೂನು 10 ವರ್ಷಗಳ ನಂತರ ಸತತ ಹೋರಾಟಗಳು ಮತ್ತು ಪ್ರಯತ್ನಗಳ ಭಾಗವಾಗಿ 2013ರಲ್ಲಿ ಕಾನೂನು ರಚನೆಯಾಗಿದೆ. ಆದರೆ ಈ ಕಾನೂನು ಇದೆಯೆಂಬುದೇ ಹಲವು ವಿಭಾಗಗಳ ದುಡಿಯುವ ಮಹಿಳೆಯರಿಗೆ ಗೊತ್ತಿಲ್ಲ. ಮಾತ್ರವಲ್ಲ ಈ

ಪುಟ 10 ಕ್ಕೆ



ಸಪ್ಟಂಬರ್ 2 ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆದೇ ನಡೆಯುತ್ತದೆ
ಕೇಂದ್ರ ಸರಕಾರದ ಮೋಸದ ತಂತ್ರಗಳಿಗೆ ಕೇಂದ್ರ ಕಾರ್ಮಿಕ ಸಂಘಟನೆಗಳ ಖಂಡನೆ

ಕಾರ್ಮಿಕರನ್ನು ದಾರಿ ತಪ್ಪಿಸುವ, ಅವರಲ್ಲಿ ಗೊಂದಲ ಉಂಟು ಮಾಡುವ ಮತ್ತು ಅವರನ್ನು ವಿಭಜಿಸುವ ಮೋಸದ ತಂತ್ರಗಳನ್ನು ಸರಕಾರ ನಡೆಸುತ್ತಿದೆ, ಆದರೆ ಇವು ಫಲಕಾರಿಯಾಗುವುದಿಲ್ಲ ಎಂದು ಆಗಸ್ಟ್ 18ರಂದು ಸಭೆ ಸೇರಿದ ಕೇಂದ್ರ ಕಾರ್ಮಿಕ ಸಂಘಟನೆಗಳು ಸರಕಾರವನ್ನು ಎಚ್ಚರಿಸಿವೆ.

ಕಾರ್ಮಿಕರ ಐಕ್ಯ ವೇದಿಕೆ ಮುಂದಿಟ್ಟ 12 ಬೇಡಿಕೆಗಳ ಬಗ್ಗೆ ಚರ್ಚಿಸಲೆಂದು ನೇಮಿಸಿದ ಮಂತ್ರಿಗಳ ಸಮೂಹ ಕಳೆದ ಒಂದು ವರ್ಷದಲ್ಲಿ ಒಂದು ಬಾರಿಯೂ ಕೇಂದ್ರ ಕಾರ್ಮಿಕ ಸಂಘಟನೆಗಳನ್ನು ಮಾತುಕತೆಗಳಿಗೆ ಕರೆದಿಲ್ಲ. ಬದಲಾಗಿ ಈ ಮುಷ್ಕರದ ಕರೆಯಲ್ಲಿ ಭಾಗಿಯಾಗದ ಬಿಎಂಎಸ್‌ನೊಡನೆ ಚರ್ಚೆ ನಡೆಸುತ್ತಿದೆ. ಈ ಮೂಲಕ ಮುಷ್ಕರದ ಪ್ರಚಾರಕ್ಕೆದುರಾಗಿ ಕೇಂದ್ರ ಸರಕಾರ ಕಾರ್ಮಿಕ ಸಂಘಗಳ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ ಎಂದು ನೇರವಾಗಿ ಮತ್ತು ಪರೋಕ್ಷವಾಗಿ ತನ್ನ ವಿವಿಧ ಏಜೆನ್ಸಿಗಳು ಮತ್ತು ಮಿತ್ರರುಗಳ ಮೂಲಕ ಬಿಂಬಿಸುತ್ತ ಕಾರ್ಮಿಕರನ್ನು ಒಡೆಯುವ ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ನೀಡಿರುವ ಜಂಟಿ ಹೇಳಿಕೆಯಲ್ಲಿ ಖಂಡಿಸಿವೆ.

ಸಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರದ ಕರೆಯನ್ನು ಪುನರುಚ್ಚರಿಸುತ್ತ ಈ ಕೇಂದ್ರ ಕಾರ್ಮಿಕ ಸಂಘಟನೆಗಳು, ದೇಶದ ದುಡಿಯುವ ಜನತೆ ಸಪ್ಟಂಬರ್2ರ ಸಾರ್ವತ್ರಿಕ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸಿ ದುಡಿಯುವ ಜನರ ಐಕ್ಯತೆಯನ್ನು ಮತ್ತಷ್ಟು ವ್ಯಾಪಕಗೊಳಿಸಬೇಕು, ಸರಕಾರದ ಜನ-ವಿರೋಧಿ , ಕಾರ್ಮಿಕ-ವಿರೋಧಿ ಧೋರಣೆಗಳ ವಿರುದ್ಧ ಐಕ್ಯತೆಯಿಂದ ಸೆಣೆಸಬೇಕು ಎಂದು ಕರೆ ನೀಡಿವೆ.

ಆಗಸ್ಟ್ 9ರ ಜಂಟಿ ಸಾಮೂಹಿಕ ಸತ್ಯಾಗ್ರಹದ ಕರೆಗೆ ದೇಶದಲ್ಲೆಲ್ಲ ಅತ್ಯುತ್ತಮ ಸ್ಪಂದನೆ ದೊರೆತಿದ್ದು , ಅದು ಜಿಲ್ಲಾ ಮಟ್ಟದ ವರೆಗೂ ತಲುಪಿದೆ. ಇದು ಸಪ್ಟಂಬರ್ 2ರ ಮುಷ್ಕರವನ್ನು ಅತ್ಯಂತ ಯಶಸ್ವಿಗೊಳಸಬೇಕೆಂಬ ದೃಢ ನಿರ್ಧಾರವನ್ನು ಬಿಂಬಿಸುತ್ತದೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಈ ಹೇಳಿಕೆ ತಿಳಿಸಿದೆ.

ಈ ಜಂಟಿ ಹೇಳಿಕೆಗೆ ಇಂಟಕ್, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಯುಟಿಯುಸಿ ಮತ್ತು ಎಲ್‌ಪಿಎಫ್ ಮುಖಂಡರು ಸಹಿ ಹಾಕಿದ್ದಾರೆ.

ದುಡಿಯುವ ಮಹಿಳೆಯರ..........

ಪುಟ 9 ರಿಂದ

ಕಾನೂನಿನಡಿಯಲ್ಲಿ ದೂರುಗಳು ದಾಖಲಾಗುವುದೇ ಅಪರೂಪ ಎಂಬಂತಾಗಿದೆ. ದೂರು ದಾಖಲಾದರೂ ಆರೋಪವನ್ನು ಸಾಬೀತು ಪಡಿಸಲು ಆಗುತ್ತಿಲ್ಲ. ಉದಾಹರಣೆಗೆ ಮಹಿಳೆಗೆ ಸನ್ನೆ ಮಾಡಿದರೂ, ಬಲವಂತ ಮಾಡಿದರೂ ಈ ವಿಷಯಗಳನ್ನು ಸಾಕ್ಷಿ ಸಮೇತ ಹೇಗೆ ಸಮಿತಿಗೆ ಒದಗಿಸುವುದು.

ಇತ್ತೀಚೆಗೆ ಬಿಎಂಟಿಸಿಯಲ್ಲಿ ಕೆಲಸ ಮಾಡುವ ಮಹಿಳಾ ಮೆಕಾನಿಕ್‌ಗೆ ಡಿಪೋ ಮ್ಯಾನೇಜರ್‌ನಂದ ಲೈಂಗಿಕ ಕಿರುಕುಳ ಆಗಿದೆ. ಬಿಎಂಟಿಸಿ-ಕೆಎಸ್‌ಆರ್‌ಟಿಸಿಯಲ್ಲಿ ಲೈಂಗಿಕ ಕಿರುಕುಳ ದೌರ್ಜನ್ಯದ ವಿರುದ್ಧದ ಸಮಿತಿಯೇ ಇಲ್ಲ. ವೈಟ್‌ಫೀಲ್ಡ್‌ನಲ್ಲಿ ಇರುವ ಒಂದು ಬಹುರಾಷ್ಟ್ರೀಯ ಕಂಪನಿಯಲ್ಲಿ ಸಾವಿರಾರು ಉದ್ಯೋಗಸ್ಥರು ಇದ್ದಾರೆ. ಪ್ರಾಜೆಕ್ಟ್ ಕೆಲಸದ ಹಿರಿಯ ವ್ಯವಸ್ಥಾಪಕರೊಂದಿಗೆ ಕಿರಿಯ ವ್ಯವಸ್ಥಾಪಕರೂ ವಿದೇಶಗಳಿಗೂ ಹೋಗಬೇಕು. ಅಲ್ಲಿ ಕೆಲಸದ ನಡುವೆ ಹಿರಿಯ ಪುರುಷರಿಗೆ ಕಿರಿಯ ಮಹಿಳೆಯರು ಎಲ್ಲಾ ರೀತಿಯಲ್ಲಿಯೂ ಸಹಕರಿಸಬೇಕು. ಅದಕ್ಕೆ ಒಪ್ಪದೆ ಮಹಿಳೆ ವಿರೋಧಿಸಿದಾಗ ಇಡೀ ಸಂಸ್ಥೆಯಲ್ಲಿ ಅಕೆಯನ್ನು ಒಬ್ಬಂಟಿಯನ್ನಾಗಿ ಮಾಡಲಾಯಿತು. ಸಾವಿರಾರು ರೂ.ಗಳ ಹಣವನ್ನು ಖರ್ಚು ಮಾಡಿದರೂ ಎಲ್ಲಿಯೂ ಆಕೆಗೆ ನ್ಯಾಯ ಸಿಗಲಿಲ್ಲ. ಕೆಲಸ ಬಿಡಬೇಕೆಂಬುದು ಹಲವರ ಸಲಹೆ, ಹೀಗೆ ಪಟ್ಟಿ ಮಾಡುತ್ತಾ ಹೋದರೆ ಲೆಕ್ಕವಿಲ್ಲ. ಇಂದು ಮಹಿಳೆಯರಿಗೆ ಈ ಎಲ್ಲಾ ಕಾನೂನುಗಳು ಹೆಸರಿಗಿವೆ ಮತ್ತು ಕಾನೂನುಗಳನ್ನು ರೂಪಿಸಿದ ಸರ್ಕಾರಗಳೇ ಇಂದು ಅದನ್ನು ಬಹಿರಂಗವಾಗಿ ಉಲ್ಲಂಘಿಸುತ್ತಿವೆ.

ಇಲ್ಲಿ ಮಹಿಳೆಯರು ಬೀಸುವ ಕಲ್ಲಿನಲ್ಲಿ ಸಿಕ್ಕಿದ ಧಾನ್ಯಗಳಾಗಿದಾರೆ. ಮೂತ್ರ ವಿಸರ್ಜನೆಗೂ ಬಿಡದ ಗಾರ್ಮೆಂಟ್ ಫ್ಯಾಕ್ಟರಿ ಕೆಲಸ, ಪೈಲ್ಸ್‌ನಿಂದ ಬಳಲುವಂತೆ ಮಾಡುವ ಹೊಲಿಗೆ ವೃತ್ತಿ, ಗರ್ಭಕೋಶದ ಕಾಯಿಲೆಗೆ ದೂಡುವ ರಾಸಾಯನಿಕ ಹಾಗೂ ಇತರೇ ಉದ್ಯಮಗಳು, ಕೈಬೆರಳು ಹಾಗೂ ಚರ್ಮವನ್ನೇ ಸುಲಿಯುವ ಗೋಡಂಬಿ ಸಂಸ್ಕರಣ ಕೆಲಸ, ಕಣ್ಣು ಮತ್ತು ಚರ್ಮಕ್ಕೆ ಹಾನಿ ತರುವ ಇಟ್ಟಿಗೆ ಭಟ್ಟಿ ಕೆಲಸ, ದಿನವಿಡೀ ದುಡಿದರೂ ಸಮಾನ ಕೆಲಸಕ್ಕೆ ಸಮಾನ ಕೂಲಿ ಸಿಗದ ಅಂಗನವಾಡಿ, ಬಿಸಿಯೂಟ, ಆಶಾ, ಕಂಪ್ಯೂಟರ್ ಅಪರೇಟರ್ ಇತ್ಯಾದಿ ಕೆಲಸಗಳು ನಮ್ಮೆದುರಿವೆ.

ಇರುವ ಹಕ್ಕುಗಳ ನಿರಾಕರಣೆಯಲ್ಲಿ

ಹೀಗೆ ಹೆರಿಗೆ ಭತ್ಯೆ, ಹೆರಿಗೆ ಸೌಲಭ್ಯದಿಂದ ನುಣುಚಿಕೊಳ್ಳಲು ತಮ್ಮದೇ ಪ್ರತ್ಯೇಕ ಕಾನೂನು ರೂಪಿಸಿಕೊಳ್ಳುವವರು ನಮ್ಮಲ್ಲಿದ್ದಾರೆ. ಇತ್ತೀಚೆಗೆ ಶ್ರಮ ಸಂಹಿತೆ ಎಂಬ ಹೆಸರಲ್ಲಿ ಶ್ರಮಿಕರ ಸಂಹಾರಕ್ಕೆ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ. ಹಾಗಾದರೆ ಇಂಥ ಪರಿಸ್ಥಿತಿಯಲ್ಲಿ ಸಮಾನ ಹಕ್ಕುಗಳು, ಸಮಾನ ಅವಕಾಶಗಳು ಕೇವಲ ಬೆಲೆ ಇಲ್ಲದ ಮಾತುಗಳು ಆಗುತ್ತಿವೆ. ಜಾಗತಿಕ ಒಪ್ಪಂದ ಹಾಗೂ ಭಾರತದ ಸಂವಿಧಾನದಂತೆ ನಡೆಯುವ ಅವಕಾಶ ನಿರಾಕರಿಸುವ ನಿಯಮ ನಿರ್ಮಾಪಕರು ಇದ್ದಾರೆ ಎಚ್ಚರ! ಕ್ಯೂಬಾದಲ್ಲಿ ಮಾತೃತ್ವದ ರಜೆ 9 ತಿಂಗಳು ಎಲ್ಲಾ ಸೌಲಭ್ಯ ನೀಡಿ. ಇನ್ನೂ ಹೆಚ್ಚಿ ಅವಧಿ ರಜಾ ಅಗತ್ಯವಿದ್ದಲ್ಲಿ 75% ಸಂಬಳದ ಜೊತೆಗೆ 3 ತಿಂಗಳು ರಜಾ ವಿಸ್ತರಣೆ! ಆದರೆ ಒಂದೇ ವಿಶ್ವದಡಿ ನಾವು? ನಮ್ಮ ಪರಿಸ್ಥಿತಿ?

ಇನ್ನೊಂದೆಡೆ ಹಣ ತರುವ ಹೊರ ಕೆಲಸ ಮಾಡಿಯೇ ಜೀವನ ಸಾಗಿಸಲು ಮುಂದಾದ ಮಹಿಳೆಯರಿಗೆ ಕೂಲಿ ತಾರತಮ್ಯ, ಕಾರ್ಮಿಕ ಹಕ್ಕುಗಳ ನಿರಾಕರಣೆಗಾಗಿ ಖಾಯಂ ಸ್ವರೂಪದ ಕೆಲಸಗಳ ಬಾಗಿಲು ಮುಚ್ಚಿರುವುದು. ಕೆಲಸ ಕಾಯಂ ಮಾಡಲು ಕೇಳಿದರೆ ಲಾಠಿ ಬೀಸ್ತಾರೆ ಅಥವಾ ನೀವು ಕ್ಷಮಯಾ ಧರಿತ್ರಿಗಳು, ಸೇವೆಗೆ ಇನ್ನೊಂದು ಹೆಸರೇ ಮಹಿಳೆ. ದೇಶದ ವೃದ್ಧರ, ಮಹಿಳೆಯರ, ರೋಗಿಗಳ, ಅಂಗವಿಕಲರ ಸೇವೆಗೆ "ನಿಮ್ಮದು ಮೀಸಲು ಸೇವೆ" ಎನ್ನುತ್ತಾರೆ. ಹಾಗಾಗಿಯೇ ದುಡಿಮೆಯ ಮಹಿಳೀಕರಣವಾಗುತ್ತಿದೆ. ಶ್ರಮಶಕ್ತಿಯನ್ನು ದೋಚಲು ಸುಲಭ ಮಾರ್ಗ ಕಂಡುಕೊಳ್ಳಲಾಗಿದೆ. ●

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ............

ಪುಟ 8 ರಿಂದ

ಭದ್ರತಾ ಯೋಜನೆ ಜಾರಿಗೆ ತರುವುದಾಗಿ ಸರಕಾರ ಹೇಳಿದೆ. ಆದರೆ ಇದಕ್ಕೆ ಬೇಕಾದ ಅನುದಾನವನ್ನು ಸರಕಾರ ಕೊಡುವುದಿಲ್ಲ, ಬದಲಾಗಿ, ಪಿಎಫ್‌ನಲ್ಲಿ ಚಾಲ್ತಿಯಲ್ಲಿಲ್ಲದ ಖಾತೆಗಳಲ್ಲಿ ಇರುವ ಹಣವನ್ನು ಕೊಡಲಾಗುವುದು ಎನ್ನಲಾಗಿದೆ. ಈ ಖಾತೆಗಳಲ್ಲಿ ಸಂಬಂಧಪಟ್ಟ ಖಾತೆದಾರರು ಅಂದರೆ ಕಾರ್ಮಿಕರ, ಹಲವಾರು ಕಾರಣಗಳಿಂದಾಗಿ, ಬಹುಶಃ ಅವರಿಗೇ ತಿಳಿಯದೆ ಇರುವ ಕೋಟಿಗಟ್ಟಲೆ ಹಣ ಇದೆ. ಅಂದರೆ ಒಬ್ಬ ಸಾಮಾನ್ಯ ಕಾರ್ಮಿಕ ತೆಗೆದುಕೊಳ್ಳದೇ ಇರುವ ಪಿಎಫ್ ಹಣದಲ್ಲೇ ಯೋಜನೆಯನ್ನು ರೂಪಿಸುವ ಸರ್ಕಾರದ ಉಚಿತ ಬೇಕಾಬಿಟ್ಟಿ ಯೋಜನೆಗಳ ವಿಧಾನವನ್ನು ಅರಿಯಬೇಕಾಗಿದೆ.

ಈಗಾಗಲೇ ತಿಳಿಸಿದಂತೆ 2010ರಲ್ಲಿ ಬಂದ ಸ್ವಾವಲಂಬನಾ ಯೋಜನೆ (NPS Lite) ಯಡಿಯಲ್ಲಿ ಕರ್ನಾಟಕ ರಾಜ್ಯದ 1,25,000 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸದಸ್ಯರಾಗಿದ್ದರು. ಈಗ ಈ ಯೋಜನೆ ಅಟಲ್ ಪೆನ್ಷನ್‌ಗೆ ಸೇರ್ಪಡೆಯಾಗಿರುವುದರಿಂದ ಇವರಿಗೆ NPS Lite ನಲ್ಲಿ ಕೊಟ್ಟಂತಹ ಭರವಸೆ ಕನಿಷ್ಟ ಪಿಂಚಣಿ ಈಗ ಸಿಗುತ್ತಿಲ್ಲ. ಹೊಸದಾಗಿ ಆಯ್ಕೆಯಾಗುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ NPS Lite ಇಲ್ಲ. APY ಇದೆ. ಅಂದರೆ ಒಂದೇ ಸಂಸ್ಥೆಯಲ್ಲಿ ದುಡಿಯುವ ಇವರಿಗೆ 2 ರೀತಿಯ ಯೋಜನೆಗಳು. ಪುನ: ಈ ಯೋಜನೆಗಳು ಬದಲಾಗುವುದಿಲ್ಲ ಎಂಬುದಕ್ಕೆ ಯಾವುದೇ ಖಾತ್ರಿಗಳಿಲ್ಲ.

ಈ ಎಲ್ಲಾ ಯೋಜನೆಗಳನ್ನು ಕೂಡಾ ಬ್ಯಾಂಕ್ ಖಾತೆಗಳಿಗೆ ಲಿಂಕ್ ಮಾಡಲಾಗಿದೆ. ಅಂದರೆ ಕೋಟಿಗಟ್‌ಲೆ ಜನರು ಬ್ಯಾಂಕ್ ಖಾತೆ ತೆರೆದು ಕನಿಷ್ಟ ಹಣ ತೊಡಗಿಸಿದರೆ ಅದೇ ಹಣ ಮತ್ತು ಅದರ ಮೇಲೆ ಬರುವ ಬಡ್ಡಿಯಿಂದಲೇ ಈ ಸವಲತ್ತುಗಳು ಸಿಕ್ಕರೂ ಅದು ತನ್ನಿಂದಲೇ ಆಯ್ತು ಎಂದು ತನ್ನ ಬೆನ್ನು ತಟ್ಟಿಕೊಳ್ಳುವುದೇ ಇವುಗಳಲ್ಲಿ ಇರುವ ಸರ್ಕಾರದ ಬಹು ದೊಡ್ಡ ತಂತ್ರ.

3 ಸಾರ್ವತ್ರಿಕ ಸಾಮಾಜಿಕ ಭದ್ರತೆಯ ಹಿನ್ನೆಲೆ :

ಕಾರ್ಮಿಕರಿಗೆ ಭದ್ರತೆಯನ್ನು ನೀಡುವುದರ ಮೂಲಕ ಔದ್ಯಮಿಕ ಶಾಂತಿಯನ್ನು ಕಾಪಾಡಲು (ಪ್ರವರ್ತಿಸಲು) ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸಲು ಐಎಲ್‌ಓವನ್ನು 1919ರ ವರ್ಸೈಲ್ಸ್ ಒಪ್ಪಂದದ ಆಧಾರದಲ್ಲಿ ಸ್ಥಾಪಿಸಲಾಯಿತು. ಐಎಲ್‌ಓ ಸಂವಿಧಾನದ ಪ್ರಸ್ತಾವನೆಯು ಮೇಲ್ಕಂಡ ಧ್ಯೇಯೋದ್ದೇಶಗಳ ಮೇಲೆ ಒತ್ತು ನೀಡುತ್ತದೆ. ಜಗತ್ತಿನ ಯಾವ ಮೂಲೆಯಲ್ಲಾದರೂ ದಾರಿದ್ರ್ಯವಿದ್ದರೆ ಅದು ಜಗತ್ತಿನ ಅಭಿವೃದ್ಧಿಗೆ ಮಾರಕವಾಗುತ್ತದೆಯೆಂದೂ ಅದು ಸಾರುತ್ತದೆ.

ವಿಶ್ವಸಂಸ್ಥೆಯೂ 1948ರ ಮಾನವ ಹಕ್ಕುಗಳ ಘೋಷಣೆಯ ಪರಿಚ್ಛೇದ 22ರಲ್ಲಿ ಹೀಗೆ ಸಾರುತ್ತದೆ. "ಸಮಾಜದ ಸದಸ್ಯನಾಗಿರುವ ಪ್ರತಿಯೊಬ್ಬರೂ ಸಾಮಾಜಿಕ ಭದ್ರತೆಯನ್ನು ಹೊಂದಿದ್ದಾನೆ(ಳೆ)" 2ನೇ ಮಹಾಯುದ್ಧದ ಬಳಿಕ ಇದೊಂದು ಮಾನವ ಹಕ್ಕುಗಳ ಪ್ರಮುಖ ಘೋಷಣೆಯಾಯಿತು.

1966ರಲ್ಲಿ ವಿಶ್ವಸಂಸ್ಥೆಯು ಸಾಮಾಜಿಕ ಭದ್ರತೆಗೆ ಸಾಮಾಜಿಕ ವಿಮೆಯ ಹಕ್ಕನ್ನು ಪ್ರತಿಪಾದಿಸಿತು.

1. ಸಾಮಾಜಿಕ ರಕ್ಷಣೆ ಎನ್ನುವುದು ಐಎಲ್‌ಓ ಪ್ರಕಾರ ಆರೋಗ್ಯ ಮತ್ತು ವೈದ್ಯಕೀಯ ಪಾಲನೆಯ ಅಗತ್ಯಗಳು.
2. ರೋಗ, ಹೆರಿಗೆ, ಉದ್ಯೋಗದಲ್ಲಾಗುವ ಅಪಘಾತ, ವೃದ್ಧಾಪ್ಯ, ಅತಂತ್ರವಾಗುವುದು, ಮರಣ ಅಥವಾ ನಿರುದ್ಯೋಗವು ಮನೆಯ ಒಡೆಯನಿಗೆ ಉಂಟಾಗಿ ದುಡಿಮೆಯಲ್ಲಿ ಗಮನಾರ್ಹ ಇಳಿಕೆ ಅಥವಾ ಕಡಿತ.
3. ಮಕ್ಕಳನ್ನು ಬೆಳೆಸಲು ಉಂಟಾಗುವ ಖರ್ಚುಗಳು.
4. ಕನಿಷ್ಟ ಮಟ್ಟದ ವರಮಾನದಿಂದ ಯಾರ್‍ಯಾರು ಕೆಳಗೆ ತಳ್ಳಲ್ಪಡುತ್ತಾರೆಯೋ ಅವರೆಲ್ಲರಿಗೂ ಸಾಮಾಜಿಕ ರಕ್ಷಣೆಯೊದಗಿಸುವುದು.

ಈ ಅಂಶಗಳನ್ನು ಅನೇಕ ರಾಷ್ಟ್ರಗಳು ತಮ್ಮ ಸಂವಿಧಾನದಲ್ಲಿ ಸೇರಿಸಿಕೊಂಡಿವೆ. ಹಾಗೇಯೇ ಇದು ಭಾರತ ಸರ್ಕಾರದ ಸಂವಿಧಾನಬದ್ಧ ಜವಾಬ್ದಾರಿಯೂ ಆಗಿದೆ. ಇಂತಹ ಇತಿಹಾಸ ಹೊಂದಿರುವ ಸಾಮಾಜಿಕ ಭದ್ರತೆ ಇಂದು ಭಾರತದಲ್ಲಿ ಉದಾರೀಕರಣ ನೀತಿಗಳ ಭಾಗವಾಗಿ ಕ್ಷೀಣಗೊಳ್ಳುತ್ತಿದೆ.


ಈ ಯೋಜನೆಗಳಲ್ಲಿ ಹಲವಾರು ಲೋಪದೋಷಗಳಿವೆ. **ಉದಾ:** * ಅಸಂಘಟಿತ ಕಾರ್ಮಿಕರನ್ನು ವ್ಯಾಖ್ಯಾನಿಸುವ ಕಾಯ್ದೆಯು 10 ಕಾರ್ಮಿಕರಿಗಿಂತ ಹೆಚ್ಚು ಕಾರ್ಮಿಕರು ಒಂದೆಡೆ ಕಾರ್ಯ ನಿರ್ವಹಿಸಿದರೆ ಅವರು ಅಸಂಘಟಿತರಲ್ಲ ಎಂದು ತಿಳಿಸಿದೆ. ಆದ್ದರಿಂದ ಲಕ್ಷಾಂತರ ಕಾರ್ಮಿಕರು ಇದರಿಂದ ಹೊರಗೆ ಉಳಿದಿದ್ದಾರೆ. * ಬಿಪಿಎಲ್ ಕಾರ್ಡ್‌ನ್ನು ಕಡ್ಡಾಯಗೊಳಿಸಿರುವುದರಿಂದ ಲಕ್ಷಾಂತರ ಕಾರ್ಮಿಕರು ಇದರ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. * ಕಾಲಕಾಲಕ್ಕೆ ಯೋಜನೆಗಳನ್ನು ಬದಲಾಯಿಸುವುದು ಅಥವಾ ವಿಲೀನಗೊಳಿಸುವುದರಿಂದ ಪ್ರಾಯೋಗಿಕವಾಗಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ.

ಆದ್ದರಿಂದ ಈ ಯೋಜನೆಗಳಲ್ಲಿ ಸವಲತ್ತು ಪಡೆಯಲು ಪ್ರಾಯೋಗಿಕ ಸಮಸ್ಯೆಗಳನ್ನು ಕಡಿಮೆ ಮಾಡಬೇಕು, ಸಾರ್ವತ್ರಿಕ ಸಾಮಾಜಿಕ ಭದ್ರತೆಯ ರಕ್ಷಣೆ ಎಲ್ಲರಿಗೂ ಸಿಗಬೇಕು, ಎಲ್ಲಾ ಕಾರ್ಮಿಕರಿಗೂ ಕನಿಷ್ಠ ನಿವೃತ್ತಿ ವೇತನ 3000 ರೂ. ಸಿಗಬೇಕು ಮತ್ತು ಭವಿಷ್ಯ ನಿಧಿ ಮತ್ತು ಇಎಸ್‌ಐ ಸೌಲಭ್ಯಗಳ ಮಿತಿ ಹೆಚ್ಚಳ ಮಾಡಬೇಕು ಎಂಬದು ದೇಶದ ಕಾರ್ಮಿಕ ಆಂದೋಲನದ ಈ ಕಾರ್ಯಾಚರಣೆಯ ಇನ್ನೊಂದು ಪ್ರಮುಖ ಬೇಡಿಕೆ. ●

ಈ ವಾರ ಚರಿತ್ರೆಯಲ್ಲಿ

19 ಅಗಸ್ಟ್ 1948

'ಸಖಾವು' ಕೃಷ್ಣ ಪಿಳ್ಳೆ ನಿಧನರಾದ ದಿನ



ಈ ದಿನದಂದು ಕೇರಳದ 'ಮೊದಲ ಕಮ್ಯುನಿಸ್ಟ್' ಮತ್ತು 'ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರೆಂದೇ' ಪ್ರಖ್ಯಾತರಾದ ಕೃಷ್ಣ ಪಿಳ್ಳೆ ಅವರು ಭೂಗತರಾಗಿದ್ದಾಗ ಹಾವು ಕಡಿದು ತಮ್ಮ 42 ವರ್ಷದ ಇಳಿವಯಸ್ಸಿನಲ್ಲೇ ನಿಧನ ಹೊಂದಿದರು. ಅವರನ್ನು ಜನ 'ಸಖಾವು'(ಸಂಗಾತಿ) ಎಂದೇ ಕರೆಯುತ್ತಿದ್ದರು. ಕೇರಳದ ಇತರ ಇಬ್ಬರು ಸ್ಥಾಪಕ ನಾಯಕರಂತೆ (ಇ.ಎಂ.ಎಸ್. ಮತ್ತು ಎ.ಕೆ.ಜಿ.) ಅವರು ಸಹ ತಮ್ಮ ರಾಜಕೀಯ ಜೀವನವನ್ನು ಕಾಂಗ್ರೆಸ್ ನಲ್ಲ ಆರಂಭಿಸಿ, ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿಯ ಮೂಲಕ ಕಮ್ಯುನಿಸ್ಟ್ ಪಕ್ಷಕ್ಕೆ ಬಂದವರು. ಅವರು 1920ರ ದಶಕದಲ್ಲಿ ಉತ್ತರ ಭಾರತದಲ್ಲಿ ಸಾಕಷ್ಟು ಅಲೆದವರು. ನಂತರ ಕೇರಳಕ್ಕೆ ಮರಳಿ ಎಲ್ಲಾ ಪ್ರಮುಖ ಸಾಮೂಹಿಕ ಚಳುವಳಿಗಳಲ್ಲಿ – ವೈಕಂ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಗುರುವಾಯೂರು ದೇವಸ್ಥಾನ ಪ್ರವೇಶ ಚಳುವಳಿ, ರೈತ ಕಾರ್ಮಿಕರ ಸಂಘಟನೆ ಮತ್ತು ಸಮರಶೀಲ ಹೋರಾಟಗಳು, ಪುನ್ನಪ್ರ ವಯಲಾರ್ ಹೋರಾಟ, ತಿರುವಾಂಕೂರು ವಿಮೊಚನಾ ಹೋರಾಟ – ಪ್ರಧಾನ ಪಾತ್ರ ವಹಿಸಿದರು. ಇ.ಎಂ.ಎಸ್. ಅವರನ್ನು 'ಕೇರಳ ಕಮ್ಯುನಿಸ್ಟ್ ಚಳುವಳಿಯ ಬೌದ್ಧಿಕ ಕೇಂದ್ರ' ಮತ್ತು 'ಅವರು ದುಡಿಯುವ ಜನರಿಂದ ಬಂದು ಅವರ ಆಕಾಂಕ್ಷೆಗಳನ್ನು ಸ್ವತಃ ಬಲ್ಲವರಾಗಿದ್ದರಿಂದ' ತನಗಿಂತಲೂ 'ಹೆಚ್ಚು ನಿಜವಾದ ಕಮ್ಯುನಿಸ್ಟ್ ಸ್ಪಿರಿಟ್'ಗೆ ಹತ್ತಿರವಿದ್ದವರು' ಎಂದಿದ್ದಾರೆ.

ತೆಂಗು ನಾಡಿನಲ್ಲಿ ಅಲ್ಲೋಲ ಕಲ್ಲೋಲ

ರವೀಂದ್ರ ನಂದನವನ

ದೇಶದ ಅತಿ ಹೆಚ್ಚು ತೆಂಗು ಬೆಳೆಯುವ ಎರಡನೇ ಜಿಲ್ಲೆ, ರಾಜ್ಯದ ಮೊದಲ ಜಿಲ್ಲೆಯಾಗಿರುವ ತುಮಕೂರು ಜಿಲ್ಲೆಯ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಲ್ಪತರು ನಾಡೆಂದು ಖ್ಯಾತಿ ಪಡೆದಿರುವ ಜಿಲ್ಲೆಯ ರೈತರ ಬದುಕಿನಲ್ಲಿ ಬಿರುಗಾಳಿ ಬೀಸಿದೆ. ಅಲ್ಲೋಲ, ಕಲ್ಲೋಲದ ನಡುವೆ ಉಸಿರಾಡಬೇಕಾಗಿದೆ.

ಆದರೆ ಇದ್ಯಾವುದು ಸರ್ಕಾರದ ಗಮನಕ್ಕೆ ಬರುತ್ತಿಲ್ಲ. ಒಂದು ಕಡೆ ನಿರಂತರ ಬರದಿಂದ ಒಣಗಿ ಹೋಗಿರುವ ತೆಂಗು, ಅಡಿಕೆ. ಇದೇ ಅವಧಿಯಲ್ಲಿ ಕ್ವಿಂಟಲ್ ಅಡಿಕೆ 80 ಸಾವಿರದಿಂದ 27 ಸಾವಿರಕ್ಕೆ ಇಳಿದಿದೆ. ಕ್ವಿಂಟಲ್ ಕೊಬ್ಬರಿ ಬೆಲೆ 20 ಸಾವಿರದಿಂದ 7 ಸಾವಿರಕ್ಕೆ ಇಳಿದಿದೆ. ತೆಂಗಿನಕಾಯಿ ಸಗಟು ಬೆಲೆ 17 & 18 ರಿಂದ ನಾಲ್ಕೈದು ರೂಪಾಯಿಗೆ ಕುಸಿದಿದೆ. ಇಷ್ಟಾದರೂ ಜಿಲ್ಲೆಯ ಯಾವ ಪಕ್ಷದ ಶಾಸಕರು ಈವರೆಗೂ ತೆಂಗು ಬೆಳೆಗಾರರ ಬಗ್ಗೆ ತುಟಿ ಬಿಚ್ಚಿಲ್ಲ. ಸರ್ಕಾರ ಮೌನ ಮುರಿದಿಲ್ಲ.

ತಿಪಟೂರು ಎಪಿಎಂಸಿಯಲ್ಲಿ ಆನ್-ಲೈನ್ ಟ್ರೇಡಿಂಗ್ ಜಾರಿ ಮೂಲಕ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಜಂಭ ಕೊಚ್ಚಿಕೊಂಡಿದ್ದ ಸಿದ್ದರಾಮಯ್ಯ ಸರ್ಕಾರ ಅದನ್ನೇ ಅಷ್ಟೇ ಜಾಣತನದಲ್ಲಿ ಹಳ್ಳ ಹಿಡಿಸಿದೆ. ಆನ್ ಲೈನ್ ಟ್ರೇಡಿಂಗ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ಅದೇ ಅವಧಿಯಲ್ಲಿ ಕೊಬ್ಬರಿ ಕಳ್ಳ ಸಾಗಣೆಯನ್ನು ಊರೂರಿಗೆ ಭೇಟಿ ನೀಡಿ ಮಟ್ಟ ಹಾಕಿದ್ದ ಅಂದಿನ ಎಪಿಎಂಸಿ ಕಾರ್ಯದರ್ಶಿ ನ್ಯಾಮಗೌಡ ಅವರನ್ನು ಸರ್ಕಾರ ಎತ್ತಂಗಡಿ ಮಾಡಿದ ನಂತರ ತೆಂಗು ಬೆಳೆಗಾರರ ಬದುಕು ಬೀದಿಗೆ ಬಂತು. ದಕ್ಷ ಅಧಿಕಾರಿ ನ್ಯಾಮಗೌಡ ಅವರನ್ನು ಉಳಿಸಿಕೊಳ್ಳುವಂತೆ ಜನರು ಪರಿಪರಿಯಾಗಿ ಬೇಡಿದರೂ ಸರ್ಕಾರ ಉಳಿಸಿಕೊಳ್ಳಲಿಲ್ಲ. ತಮ್ಮನ್ನು ಭೇಟಿಯಾದ ರೈತ ಮುಖಂಡರಿಗೆ ನ್ಯಾಮಗೌಡ ಅವರನ್ನು ವರ್ಗ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತರು ವಾಪಸ್ ತಿಪಟೂರು ಸೇರುವುದರೊಳಗೆ ಆ ಅಧಿಕಾರಿಯನ್ನು ಇಲ್ಲಿಂದ ವರ್ಗ ಮಾಡಿ, ರೈತರ ಬೆನ್ನಿಗೆ ಚೂರಿ ಹಾಕಿದರು.

ಕೊಬ್ಬರಿ ವರ್ತಕರ ಲಾಬಿಗೆ ಇಡೀ ಸರ್ಕಾರ ಮಂಡಿಯೂರಿತು. ಅಲ್ಲಿಂದ ಈಚೆಗೆ ಕ್ವಿಂಟಲ್ ಕೊಬ್ಬರಿ ಬೆಲೆ 19 ಸಾವಿರರಿಂದ ಸಾವಿರ, ಸಾವಿರವೇ ಇಳಿಯುತ್ತಾ ಬಂದು ಈಗ ಏಳೆಂಟು ವರ್ಷಗಳ ಹಿಂದಿನ ದರಕ್ಕೆ ಬಂದು ನಿಲ್ಲಿಸಲಾಗಿದೆ. ಜಿಲ್ಲೆಯಲ್ಲಿ ಬಹುಪಾಲು ರೈತರು ತೆಂಗು, ಅಡಿಕೆ ಅವಲಂಬಿಸಿದ್ದಾರೆ. ತೆಂಗು ಬೆಳೆಗಾರರು ಸಂಘಟಿತರಲ್ಲದ ಕಾರಣ ಅವರೊಂದಿಗೆ ಇಲ್ಲಿನ ಶಾಸಕರು ಚೆಲ್ಲಾಟ ಆಡುತ್ತಾರೆ. ಹೋಬಳಿ, ಹೋಬಳಿಯಲ್ಲಿ ಅಕ್ರಮವಾಗಿ ಕೊಬ್ಬರಿ ಮಂಡಿಗಳನ್ನು ತೆರೆಯಲಾಗಿದೆ. ಈ ಮಂಡಿಗಳಿಂದ ಅಕ್ರಮವಾಗಿ ಕೊಬ್ಬರಿ ಉತ್ತರ ಭಾರತದ ರಾಜ್ಯಗಳಿಗೆ ರವಾನೆ ಆಗುತ್ತಿರುವುದು ಬೆಲೆಯೊಂದಿಗೆ ವರ್ತಕರು ಆಟವಾಡಲು ಸಾಧ್ಯವಾಗಿದೆ. ಆದರೆ ಇದು ಗೊತ್ತಿದ್ದು ಶಾಸಕರುಗಳು ಮೌನವಹಿಸಿದ್ದಾರೆ.

ಬರದಿಂದ, ರೋಗದಿಂದ ಸಾಕಷ್ಟು ಪ್ರಮಾಣದಲ್ಲಿ ಜಿಲ್ಲೆಯಲ್ಲಿ ತೆಂಗು ನಾಶವಾಗಿದೆ. ರೈತರಿಗೆ ನೆರವಾಗಲು ಕೇಂದ್ರ ಸರ್ಕಾರದಿಂದ ಗೋರಖ್ ಸಿಂಗ್ ಪ್ಯಾಕೇಜ್ ನೀಡಲಾಯಿತು. ಇದರಲ್ಲೂ ರಾಜ್ಯಕ್ಕೆ ಅನ್ಯಾಯ ಮಾಡಲಾಯಿತು. ಒಂದು ತೆಂಗು ಇಟ್ಟರೆ ಕೇವಲ 56 ಪರಿಹಾರ ಘೋಷಿಸಲಾಯಿತು! ಇಂಥ ಅನ್ಯಾಯದ ವಿರುದ್ಧ ರಾಜ್ಯ ಸರ್ಕಾರ ಪ್ರತಿಭಟಿಸಲಿಲ್ಲ. ಶಾಸಕರು ಸಹ ಧ್ವನಿ ಎತ್ತಲಿಲ್ಲ.

ತೆಂಗು ಜತೆಗೆ 36 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಜಿಲ್ಲೆಯಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಬರ, ಅಂತರ್ಜಲ ಕುಸಿತದಿಂದ ಅಡಿಕೆಯ ಉತ್ಪಾದನಾ ವೆಚ್ಚ ಹೆಚ್ಚಿದೆ. ಆದರೆ ಬೆಲೆ ಮಾತ್ರ ಇಳಿಯುತ್ತಿದೆ. ಇದ-ರಿಂದಾಗಿ ಕಂಗಾಲಾದ ರೈತರು ಸರ್ಕಾರದ ವಿರುದ್ಧ ಪ್ರತಿಭಟನೆಗೆ ಸಜ್ಜಾದರು. ಅಲ್ಲಲ್ಲಿ ಚೆದುರಿದಂತೆ ನಡೆಯುತ್ತಿದ್ದ ಪ್ರತಿಭಟನೆಗೆ ಸಾಹಿತಿ ಎಸ್.ಗಂಗಾಧರಯ್ಯ, ಕೃಷಿಕ ಶ್ರೀಕಾಂತ ಕೆಳಹಟ್ಟಿ ನೇತೃತ್ವದ ಬೆಲೆ ಕಾವಲು ಸಮಿತಿಯು ಒಂದು ಹೊಸ ರೂಪುರೇಷೆ ನೀಡಿದೆ. ರೈತ ಹೋರಾಟಗಾರ ಕಡಿದಾಳ್ ಶ್ಯಾಮಣ್ಣ ಗೌರವ ಅಧ್ಯಕ್ಷರಾಗಿರುವ ಬೆಲೆ ಕಾವಲು ಸಮಿತಿಯಲ್ಲಿ ಸಾಹಿತಿ ಹುಳಿಯಾರ್ ನಟರಾಜ್ ಸೇರಿ ಪತ್ರಕರ್ತರು, ಹೋರಾಟಗಾರರು, ಲೇಖಕರು ಸೇರಿಕೊಂಡಿದ್ದಾರೆ.

ಎಪಿಎಂಸಿ ಆಡಳಿತದ ವಿರುದ್ಧ ಬೆಲೆ ಕಾವಲು ಸಮಿತಿ ಸಾಕಷ್ಟು ಹೋರಾಟ ನಡೆಸಿತು. ಆದರೂ ಏನು ಪ್ರಯೋಜನವಾಗಲಿಲ್ಲ. ಸರ್ಕಾರದ ಮೌನದಿಂದ ಬೇಸತ್ತ ರೈತರು ರಾಜ್ಯ ರೈತ ಸಂಘ, ಹಸಿರು ಸೇನೆ, ಬೆಲೆ ಕಾವಲು ಸಮಿತಿ ನೇತೃತ್ವದಲ್ಲಿ ತಿಪಟೂರಿನಿಂದ ಬೆಂಗಳೂರು ವಿಧಾನಸೌಧಕ್ಕೆ ಆಗಸ್ಟ್ 10ರಂದು ಜಾಥಾ ಕೈಗೊಂಡರು. ಅಷ್ಟರಲ್ಲಾಗಲೇ ಯಮನೂರು ಗಲಾಟೆಯಿಂದ ಮುಖಭಂಗಕ್ಕೀಡಾಗಿದ್ದ ರಾಜ್ಯ ಸರ್ಕಾರ ಏನಾದರೂ ಮಾಡಿ ಈ ಜಾಥಾವನ್ನು ಅರ್ಧಕ್ಕೆ ನಿಲ್ಲಿಸಲು ಶತ ಪ್ರಯತ್ನ ಮಾಡಿತು. ಕಾನೂನು ಸಚಿವ ಟಿ.ಬಿ.ಜಯಚಂದ್ರ ಅವರು ಗುಬ್ಬಿ ಬಳಿ ಸುಮಾರು ಎರಡೂವರೆ ತಾಸು ರೈತ ಮುಖಂಡರೊಂದಿಗೆ ಚರ್ಚೆ ನಡೆಸಿ ಸಮಯ ಹಾಳು ಮಾಡಿದರು. ದಕ್ಷ ಅಧಿಕಾರಿ ನ್ಯಾಮಗೌಡ ಅವರನ್ನು ಮತ್ತೇ ವಾಪಸ್ ಜಿಲ್ಲೆಗೆ ಕಳಿಸುವಂತೆ ರೈತರ ಮನವಿಗೆ ನಾಳೆಯೇ ಆ ಕೆಲಸ ಮಾಡುವುದಾಗಿ ಸಚಿವರು ಭರವಸೆ ನೀಡಿದರು. ಅದು ಇವೊತ್ತಿಗೂ ಈಡೇರಿಲ್ಲ.

ಕೇಂದ್ರ ಸರ್ಕಾರ ನೀಡಿರುವ ಬೆಂಬಲ ಬೆಲೆಗೆ ಹೆಚ್ಚುವರಿ ರಾಜ್ಯ ಸರ್ಕಾರ 4000 ಸಾವಿರ ನೀಡಿ ಕ್ವಿಂಟಲ್‌ಗೆ 10 ಸಾವಿರದಂತೆ ಕೊಬ್ಬರಿ ಖರೀದಿಸಬೇಕೆಂಬ ಬೇಡಿಕೆ ರೈತರ ಬೇಡಿಕೆಯನ್ನು ಸರ್ಕಾರ ತಳ್ಳಿ ಹಾಕಿದೆ. ಬೆಂಗಳೂರುವರೆಗೂ ರೈತರು ಜಾಥಾ ನಡೆಸಿದರೆ ಕಷ್ಟವಾಗಲಿದೆ ಎಂದರಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಮಾತುಕತೆಗೆ ಕರೆಸಿಕೊಂಡು ನಯವಾಗಿ ಮಾತನಾಡಿ, ಜಾಥಾ ಮೊಟಕುಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರ ಸರ್ಕಾರ ನೀಡಿದಷ್ಟೇ ಹಣವನ್ನು ರಾಜ್ಯ ಸರ್ಕಾರವೂ ನೀಡಲಿದೆ ಎಂಬ ಭರವಸೆ ನೀಡಿದ್ದಾರೆ. ರೈತರ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಬೊಟ್ಟು ತೋರಿಸುತ್ತಾ ಒಬ್ಬರಿಗೊಬ್ಬರು ನುಣುಚಿಕೊಳ್ಳುವ ಕೆಲಸ ಮಾಡುತ್ತಿವೆ. ●

ತಾಲ್ಲೂಕು	ಒಣಗಿದ ವಿಸ್ತೀರ್ಣ (ಹೆಕ್ಟೇರ್)	ಸಂಕಷ್ಟಕ್ಕೀಡಾದ ರೈತರ ಸಂಖ್ಯೆ
ತುಮಕೂರು	243	8306
ಗುಬ್ಬಿ	914	11676
ಕುಣಿಗಲ್	63	3411
ತಿಪಟೂರು	2027	25152
ಚಿ.ನಾ.ಹಳ್ಳಿ	738	15797
ಮಧುಗಿರಿ	17	152
ಶಿರಾ	333	5581
ತುರುವೇಕೆರೆ	452	5473
ಕೊರಟಗೆರೆ	18	117
ಪಾವಗಡ	7	43

ತೆಂಗು ಎಲ್ಲಿ? ಎಷ್ಟು?

ತಾಲ್ಲೂಕು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
ತುರುವೇಕೆರೆ	30963
ಗುಬ್ಬಿ	28940
ಚಿ.ನಾ.ಹಳ್ಳಿ	26940
ತಿಪಟೂರು	28911
ಕೊರಟಗೆರೆ	1552
ಕುಣಿಗಲ್	6571
ಮಧುಗಿರಿ	1050
ಪಾವಗಡ	894
ಶಿರಾ	6615
ತುಮಕೂರು	13058

ಆತ್ಮಹತ್ಯೆ ಮಾಡಿಕೊಂಡಿರುವ ಜಿಲ್ಲೆಯ ರೈತರ ಸಂಖ್ಯೆ

ತಾಲ್ಲೂಕು	ರೈತರ ಸಂಖ್ಯೆ
ಶಿರಾ	31
ಪಾವಗಡ	14
ಗುಬ್ಬಿ	24
ಮಧುಗಿರಿ	1
ಕೊರಟಗೆರೆ	13
ತುಮಕೂರು	12
ತಿಪಟೂರು	8
ಕುಣಿಗಲ್	8
ಚಿ.ನಾ.ಹಳ್ಳಿ	7
ತುರುವೇಕೆರೆ	13

ತೆಂಗಿಗೆ ಕಾಡುತ್ತಿರುವ ರೋಗ

ಜಿಲ್ಲೆಯಲ್ಲಿ ಬರದೊಂದಿಗೆ ರೋಗ ತೆಂಗನ್ನು ಬೆಂಬಿಡದಂತೆ ಕಾಡುತ್ತಿದೆ. ರೈನೋಸೆರಸ್ ದುಂಬಿ, ಕೆಂಪುಮೂತಿ ಹುಳು, ನುಸಿ, ಕಾಂಡಸೋರುವ ರೋಗ, ಅಣಬೆ ರೋಗ, ಸುಳಿಕೊಳೆ ರೋಗ, ಎಲೆ ಚುಕ್ಕೆರೋಗ, ಹಿಬ್ಬು ತಿಗಣೆ ಹಾವಳಿ.

ತೆಂಗು ಮುಂದೇನು?

ರೋಗ, ಬರ, ಮಾರುಕಟ್ಟೆ ಕೊರತೆಯಿಂದ ಬಳಲುತ್ತಿರುವ ತೆಂಗು ಮೇಲೆತ್ತಲು ಸರ್ಕಾರ ಮುಂದಾಗಬೇಕಾಗಿದೆ. ಜತೆಗೆ ರೈತರ ಸಹಕಾರ ಆಂದೋಲನದ ಮೂಲಕವೇ ತೆಂಗಿನ ಮಾರುಕಟ್ಟೆಗೆ ತಳಪಾಯ ಹಾಕಿಕೊಳ್ಳಬೇಕಾಗಿದೆ. ಕೇರಳದಲ್ಲಿ ಮಹಿಳಾ ಗುಂಪುಗಳು ಹಳ್ಳಿ, ಹಳ್ಳಿಗಳಲ್ಲಿ ತೆಂಗಿನ ಉಪ ಉತ್ಪನ್ನ ತಯಾರಿಕೆಯಲ್ಲಿ ತೊಡಗಿವೆ. ಇದೇ ಕೆಲಸ ಜಿಲ್ಲೆಯಲ್ಲೂ ಆಗಬೇಕು.

ಅತಿ ಸರಳ, ಕೇವಲ ನಾಲ್ಕೈದು ಸಾವಿರ ರೂಪಾಯಿ ತಂತ್ರಜ್ಞಾನ ಬಳಸಿಕೊಂಡು ಮಾಡಬಹುದಾದ ತೆಂತಾ ಎಣೆ (ತೆಂಗಿನ ಎಣ್ಣೆ) ಉತ್ಪಾದನೆ ಕಡೆಗೆ ಸ್ವಸಹಾಯ ಗುಂಪುಗಳು ಮುಂದಾಗಬೇಕು.

ಮುಖಭಂಗ ಅನುಭವಿಸಿದ ಬಿಜೆಪಿ

ಅಡಿಕೆ ಬೆಲೆ ಕುಸಿತದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಚಿವರ ಬಳಿ ನಿಯೋಗದ ಹೋದ ಬಿಜೆಪಿ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಮತ್ತವರ ತಂಡ ಅಲ್ಲಿ ತೆಂಗು ಬೆಳೆಗಾರರ ಪರಿಸ್ಥಿತಿ ಬಗ್ಗೆ ಹೇಳಲಿಲ್ಲ. ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರು ಸಂಘಟಿತರು. ಅಲ್ಲಿ ಬಿಜೆಪಿ ಪ್ರಾಬಲ್ಯ ಇರುವುದರಿಂದ ಮತದ ಮೇಲೆ ಕಣ್ಣಿಟ್ಟುಕೊಂಡು ಅಡಿಕೆ ಬೆಳೆಗಾರರನ್ನು ಮೆಚ್ಚಿಸಲು ನಿಯೋಗ ಹೋಗಿ ಬಂದಿದ್ದಾರೆ.

ಅಡಿಕೆ ಬೆಳೆಗಾರರಷ್ಟೇ ಸಂಕಷ್ಟಕ್ಕೀಡಾಗಿರುವ ತೆಂಗು ಬೆಳೆಗಾರರ ಬಗ್ಗೆ ಸೊಲ್ಲೆತ್ತದ ಬಿಜೆಪಿ ನಾಯಕರ ಬಗ್ಗೆ ತೆಂಗು ಬೆಳೆಯುವ ರಾಜ್ಯದ 14 ಜಿಲ್ಲೆಗಳ ತೆಂಗು ಬೆಳೆಗಾರರು ಗರಂ ಆಗಿದ್ದಾರೆ.

ಹುಸಿ ಭರವಸೆಯ ಸರ್ಕಾರ

ತೆಂಗು ಉಪ ಉತ್ಪನ್ನಗಳಿಗೆ ಬೇಡಿಕೆ ಹಾಗೂ ತೆಂಗು ಬೆಳೆಗಾರರಿಗೆ ತಾಂತ್ರಿಕ, ಮಾರುಕಟ್ಟೆಯ ನೆರವು ಒದಗಿಸಲು ತೆಂಗು ಪಾರ್ಕ್ ಆರಂಭ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಿಸಿ ಮೂರು ವರ್ಷವಾದರೂ ಅದು ಜಾರಿಗೆ ಬಂದಿಲ್ಲ.

ಉಸ್ತುವಾರಿ ಸಚಿವ ಟಿ.ಬಿ.ಜಯಚಂದ್ರ ದುರಾಸೆ ಕಾರಣ ತಿಪಟೂರು, ಗುಬ್ಬಿ ಅಥವಾ ತುರುವೇಕೆರೆ ತಾಲ್ಲೂಕಿನ ಹೆಚ್ಚು ತೆಂಗು ಬೆಳೆಯುವ ಪ್ರದೇಶದಲ್ಲಿ ತೆಂಗು ಪಾರ್ಕ್ ಸ್ಥಾಪಿಸುವ ಬದಲು ಶಿರಾ (ಇಲ್ಲಿ ತೆಂಗು ಬೆಳೆಯುವುದು ಕಡಿಮೆ) ತೆಗೆದುಕೊಂಡು ಹೋದರು. ಆದರೆ ಅಲ್ಲೂ ಪಾರ್ಕ್ ಇನ್ನೂ ಸ್ಥಾಪನೆ ಆಗಿಲ್ಲ. ತಿಪಟೂರು ತಾಲ್ಲೂಕಿನ ತಿಮ್ಲಾಪುರ, ಶಿರಾದ ಮಾನಂಗಿ ಹಾಗೂ ತುರುವೇಕೆರೆಯ ಚಿಕ್ಕಾಪುರದಲ್ಲಿ ತೆಂಗು ಪಾರ್ಕ್ ಸ್ಥಾಪಿಸಲು ಜಿಲ್ಲಾ ತೋಟಗಾರಿಕೆ ಇಲಾಖೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದರಲ್ಲಿ ಮಾನಂಗಿ ಪಾರ್ಕ್‌ಗೆ ಮಾತ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಮೊದಲ ಹಂತವಾಗಿ 25 ಲಕ್ಷ ಬಿಡುಗಡೆ ಮಾಡಲಾಗಿದೆ. ನಂತರ ಈ ಬಗ್ಗೆ ಸುದ್ದಿಯೇ ಇಲ್ಲವಾಗಿದೆ.

ಶಿರಾ ಭಾಗದಲ್ಲಿ ಬೆಳೆಯುವ ತೆಂಗಿಗೆ ಅಂಥ ಮಹತ್ವ ಇಲ್ಲ. ತೆಂಗು ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ಅತಿ ಹೆಚ್ಚು ತೆಂಗು ಬೆಳೆಯುವ ತುರುವೇಕೆರೆ, ಗುಬ್ಬಿ ತಾಲ್ಲೂಕಿನಲ್ಲಿ ತೆಂಗು ಪಾರ್ಕ್ ನಿರ್ಮಾಣ ಮಾಡಬೇಕಾಗಿತ್ತು ಎಂಬ ಮಾತುಗಳು ಕೇಳಿಬಂದಿವೆ. ಸರ್ಕಾರ ಬಿಡುಗಡೆ ಮಾಡಿರುವ ಹಣದ ಪ್ರಮಾಣ ಗಮನಿಸಿದರೆ, ಪಾರ್ಕ್ ತಲೆ ಎತ್ತಲು ಇನ್ನೆಷ್ಟು ವರ್ಷಗಳು ಬೇಕೋ ಗೊತ್ತಿಲ್ಲ. ತೆಂಗು ಪಾರ್ಕ್ ಗಳಲ್ಲಿ ತೆಂಗು ಸಂಸ್ಕರಣಾ ಉದ್ದಿಮೆ, ಉಪ ಉತ್ಪನ್ನಗಳಿಗೆ ಮಾರುಕಟ್ಟೆ, ಸಮಗ್ರ ಸಂಸ್ಕರಣೆ, ರಫ್ತು ಉತ್ತೇಜನ, ಉದ್ಯೋಗವಕಾಶದ ಗುರಿ ಹಾಕಿಕೊಳ್ಳಲಾಗಿದೆ.

ನೀರಾವು ಸಿಗಲಿಲ್ಲ

ತೆಂಗು, ಅಡಿಕೆ ಬೆಳೆ ಕುಸಿತದಿಂದ ಕಂಗಲಾಗಿರುವ ಜಿಲ್ಲೆಯ ರೈತರಿಗೆ ನೀರಾ ನೀತಿ ಕೈ ಹಿಡಿಯಬಹುದೆಂದು ನಿರೀಕ್ಷಿಸಲಾಗಿತ್ತು. ಎರಡು ವರ್ಷದ ಹಿಂದಿನ ಬಜೆಟ್‌ನಲ್ಲೇ ನೀರಾ ನೀತಿ ಜಾರಿಗೆ ತರುವುದಾಗಿ ಸರ್ಕಾರ ಪ್ರಕಟಿಸಿತ್ತು. ಆದರೆ ಅದು ಕೂಡ ಹುಸಿಯಾಗಿದೆ. ಇಲ್ಲಿನ ನೀರಾ ರೈತ ಹೋರಾಟಗಾರರಿಗೆ ಭರವಸೆ ಮೇಲೆ ಭರವಸೆ ನೀಡಿದ ಕಾನೂನು ಸಚಿವ ಟಿ.ಬಿ.ಜಯಚಂದ್ರ ನಂತರ ಈ ರೈತರಿಂದ ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ.

ಮಾಜಿ ಸ್ಪೀಕರ್ ಕೆ.ಆರ್. ಕೃಷ್ಣ ಅವರು ನೀರಾ ನೀತಿ ಪರವಾಗಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೂ ಪ್ರಯೋಜನವಾಗಿಲ್ಲ. ತೆಂಗು ಅಭಿವೃದ್ಧಿ ಮಂಡಳಿಯೂ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ನೀರಾ ನೀತಿಯಿಂದ ಆಗುವ ಉದ್ಯೋಗ ಸೃಷ್ಟಿ, ರೈತರಿಗೆ ಬರುವ ಆದಾಯದ ಬಗ್ಗೆ ವಿವರವಾಗಿ ಬರೆದು ತಿಳಿಸಿದೆ. ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ಕೋಟಿ ಲಾಭ ತಂದುಕೊಡಬಲ್ಲದು. ಅಲ್ಲದೇ 16 ಲಕ್ಷ ಉದ್ಯೋಗ ಸೃಸ್ಟಿಸಲಿದೆ ಎಂದು ಸಹ ತಿಳಿಸಿದೆ. ಕೇರಳ, ತಮಿಳುನಾಡು ರಾಜ್ಯಗಳಲ್ಲಿ ನೀರಾ ನೀತಿ ಜಾರಿಯಿಂದ ಆಗಿರುವ ಬದಲಾವಣೆ, ಉದ್ಯೋಗ ಸೃಷ್ಟಿಯ ಬಗ್ಗೆಯೂ ಹೇಳಿದೆ. ಮದ್ಯದ ಲಾಬಿಗೆ ಮಣಿದಿರುವ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿ ರೈತರ ಮೂಗಿಗೆ ತುಪ್ಪ ಸವರಿ ಮೌನವಹಿಸಿದೆ.

ಒಣಗಿದ ಕಲ್ಪವೃಕ್ಷ

ಬರ, ಕೀಟ, ರೋಗ ಬಾಧೆಯಿಂದ ಜಿಲ್ಲೆಯಲ್ಲಿ ಸುಮಾರು 12 ಸಾವಿರ ಎಕರೆಯಷ್ಟು ತೆಂಗು ಸಂಪೂರ್ಣ ಒಣಗಿ ಹೋಗಿದೆ. ಸುಮಾರು 1 ಲಕ್ಷ ಎಕರೆ ಪ್ರದೇಶದಲ್ಲಿ ಇಳುವರಿ ಶೇ 50ರಷ್ಟು ಕಡಿಮೆಯಾಗಿದೆ. ಸುಮಾರು 75688 ಕುಟುಂಬಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿವೆ ಎಂದು ತೋಟಗಾರಿಕೆ ಇಲಾಖೆ ಸಮೀಕ್ಷೆ ಅಂದಾಜಿಸಿದೆ.

ಅಖಿಲ ಭಾರತ ಮುಷ್ಕರ ಬೆಂಬಲಿಸಿ ವಾಹನ ಪ್ರಚಾರ ಜಾಥಾ:

ಸೆಪ್ಟೆಂಬರ್ 2ರ ಅಖಿಲ ಭಾರತ ಮುಷ್ಕರವನ್ನು ಸಂಪೂರ್ಣ ಯಶಸ್ವಿಗೊಳಿಸಲು ದಕ್ಷಿಣ ಕನ್ನಡ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯು ಭಾರೀ ಸಿದ್ದತೆ ನಡೆಸುತ್ತಿದ್ದು, ಈಗಾಗಲೇ ಆಗಸ್ಟ್ 09 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಗಿದೆ.

ಆಗಸ್ಟ್ 17,18 ಮತ್ತು 19 ರಂದು ಜೆಸಿಟಿಯು ಜಿಲ್ಲಾದ್ಯಂತ ವಾಹನ ಪ್ರಚಾರ ಜಾಥಾವನ್ನು ಹಮ್ಮಿಕೊಂಡಿದ್ದು, ಜಾಥಾ ಮಂಗಳೂರಿನಿಂದ ಆರಂಭವಾಗಿ ತೊಕ್ಕೊಟ್ಟು, ಬಿ.ಸಿ.ರೋಡ್ (ಬಂಟ್ವಾಳ), ಕಲ್ಲಡ್ಕ, ವಿಟ್ಲ, ಪುತ್ತೂರು, ಸುಳ್ಯದಿಂದಲಾಗಿ ಬೆಳ್ತಂಗಡಿ, ಮೂಡಬಿದ್ರಿ, ಗುರುಪುರ, ಸುರತ್ಕಲ್ ಮೂಲಕ ಸಾಗಿ ಮಂಗಳೂರು ಹೊರ ವಲಯದ ಕೂಳೂರಿನಲ್ಲಿ ಸಮಾಪ್ತಿಗೊಂಡಿದೆ. ಜಾಥಾದ ನೇತೃತ್ವವನ್ನು ಸಿಐಟಿಯು ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ವಹಿಸಿದ್ದಾರೆ.

ಆಗಸ್ಟ್ 17 ರಂದು ಮಂಗಳೂರು ಕೇಂದ್ರ ಬಸ್ ನಿಲ್ದಾಣದಲ್ಲಿ ವಾಹನ ಪ್ರಚಾರ ಜಾಥಾವನ್ನು ಎಚ್‌ಎಂಎಸ್‌ನ ರಾಜ್ಯಾಧ್ಯಕ್ಷ ಸುರೇಶ್ಚಂದ್ರ ಶೆಟ್ಟಿ ಉದ್ಘಾಟಿಸಿ ಮಾತನಾಡಿ "ದೇಶದ ಆಸ್ತಿಯಾಗಿರುವ ಕಾರ್ಮಿಕ ವರ್ಗ ಇವತ್ತಿನ ಕೇಂದ್ರ ಸರಕಾರದ ನೀತಿಗಳಿಂದಾಗಿ ಸಹಿಸಲಾರದ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ಅದಕ್ಕಾಗಿಯೇ ಕಾರ್ಮಿಕ ಸಂಘಟನೆಗಳು ಒಟ್ಟಾಗಿ ಅಖಿಲ ಭಾರತ ಮುಷ್ಕರವನ್ನು ಹಮ್ಮಿಕೊಂಡಿದೆ ಎಂದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ "ಕಾರ್ಮಿಕರನ್ನು ರಕ್ಷಿಸಬೇಕಾದ ಕೇಂದ್ರ ಸರ್ಕಾರ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುತ್ತಿದೆ, ಅಲ್ಲದೆ ಉದ್ಯೋಗಪತಿಗಳಾದ ಬಂಡವಾಳಶಾಹಿಗಳಿಗೆ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ. ಬೆಲೆ ಏರಿಕೆಯನ್ನು ತಡೆಗಟ್ಟುತ್ತಿಲ್ಲ. ಹಾಗಾಗಿ ಕಾರ್ಮಿಕರು ತಮ್ಮ ರಕ್ಷಣೆಗಾಗಿ ಹೋರಾಟಕ್ಕೆ ಮುಂದಾಗಿದ್ದಾರೆ. ಸೆಪ್ಟೆಂಬರ್ 2ರಂದು ಇಡೀ ದೇಶದಲ್ಲಿ ಸಂಚಾರ ಸ್ಥಗಿತಗೊಳಿಸುವ ಮೂಲಕ ದೇಶವನ್ನೇ ಸ್ತಬ್ಧಗೊಳಿಸಲು ಕಾರ್ಮಿಕರು ಸಿದ್ಧರಾಗಿದ್ದಾರೆ ಎಂದು ಹೇಳಿದರು.

ಎಐಟಿಯುಸಿ ದ.ಕ. ಜಿಲ್ಲಾ ಕಾರ್ಯದರ್ಶಿ ಎಚ್.ವಿ.ರಾವ್ ಮಾತನಾಡಿದರು. ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ ಪ್ರಸ್ತಾವನೆ ಮಾಡಿದರು. ಸುನೀಲ್‌ಕುಮಾರ್ ಬಜಾಲ್ ವಂದಿಸಿದರು. ಬಿಎಸ್‌ಎನ್‌ಎಲ್ ನೌಕರ ಸಂಘದ ಮುಖಂಡರಾದ ಕೃಷ್ಣ, ಎಐಟಿಯುಸಿ, ಎಚ್‌ಎಂಎಸ್, ಎಚ್‌ಎಂಎಸ್, ಸಿಐಟಿಯು ಇಂಟಕ್ ಸಂಘಟನೆಗಳ ಮುಖಂಡರು ಹಾಗೂ ಸದಸ್ಯರು ಜಾಥಾ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು.

ಮುಷ್ಕರಕ್ಕೆ ಬೆಂಬಲಿಸಿ ಕಾರ್ಮಿಕ ಬೃಹತ್ ಸಮಾವೇಶ

ಬಂಡವಾಳಶಾಹಿಗಳ ಬಾಲಬಡುಕರ ಸುಳ್ಳು ಪ್ರಚಾರ, ನವ-ಉದಾರವಾದಿ ಧೋರಣೆಗಳ ಹಿಂದಿರುವ ರಾಜಕೀಯವನ್ನು ಅಮೂಲಾಗ್ರವಾಗಿ ಬಯಲಿಗೆಳೆಯಬೇಕು. ಈ ಹಿನ್ನಲೆಯಲ್ಲಿ ದೇಶದ ಸಮಸ್ತ ಶ್ರಮ ಜೀವಿಗಳು ಸೆಪ್ಟೆಂಬರ್ 2, 2016 ರ ದೇಶವ್ಯಾಪ್ತಿ ಸಾರ್ವತ್ರಿಕ ಮುಷ್ಕರವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಲು ಒಗ್ಗಟ್ಟಿನಿಂದ ಮುನ್ನಡೆಯಿರಿ ಎಂದು ಸಿಐಟಿಯು ರಾಜ್ಯ ಮುಖಂಡ ರತ್ನಾಕರ ಶೆಣೈ ಹೇಳಿದರು.

ಸಿಐಟಿಯು ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರ ಬೃಹತ್ ಸಮಾವೇಶವನ್ನು ಕಾರ್ಮಿಕ ಭವನದ ಸಭಾಂಗಣದಲ್ಲಿ ಅವರು ಉದ್ಘಾಟಿಸಿ ಮಾತನಾಡಿದರು.

ತಾಲೂಕು ಅಧ್ಯಕ್ಷ ಎಚ್. ನರಸಿಂಹರವರು ಮಾತನಾಡುತ್ತಾ ಮುಷ್ಕರ ಯಶಸ್ವಿಗೊಳಿಸುವುದಕ್ಕೆ 29 ಆಗಸ್ಟ್ 2016 ರಿಂದ ವಾಹನ ಪ್ರಚಾರ ಜಾಥಾ ಬೈಂದೂರಿನಲ್ಲಿ ಉದ್ಘಾಟನೆಗೊಂಡು ತಾಲೂಕಿನಾದ್ಯಂತ - ಸಂಚರಿಸಲಿದೆ ಎಂದು ಹೇಳಿದರು. ಸಿಐಟಿಯು ಮುಖಂಡರಾದ ಕೆ. ಶಂಕರ, ಸುರೇಶ ಕಲ್ಲಾಗರ, ರಾಜೀವ ಪಡುಕೋಣೆ, ಶೀಲಾವತಿ ನಾಡ, ಜಯಶ್ರೀ ಪಡುವರಿ, ಮಹಾಬಲ ವಡೇರ ಹೋಬಳಿ, ಉಪಸ್ಥಿತರಿದ್ದರು. ಸಿಐಟಿಯು ತಾಲೂಕು ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಬಿಸಿಯೂಟ ನೌಕರರಿಂದ ಮುಷ್ಕರಕ್ಕೆ ಕರೆ :

ಬಿಸಿಯೂಟ ನೌಕರರ ಬೇಡಿಕೆಗಳನ್ನು ಈಡೇರಿಕೆಗಾಗಿ ಸೆಪ್ಟಂಬರ್ 02ರಂದು ಮುಷ್ಕರ ನಡೆಸಲು ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಸಂಘ (ರಿ) (ಸಿಐಟಿಯು) ಕರೆ ನೀಡಿದೆ. ಕೇಂದ್ರ ಸರಕಾರ ಒಪ್ಪಿರುವ ರೂ. 1,000/- ವೇತನ ಹಾಗೂ ರಾಜ್ಯ ಸರಕಾರ ಮಾಸಿಕ ಗೌರವಧನವನ್ನು ಹೆಚ್ಚಿಸಬೇಕು. ಹಾಜರಾತಿ ಆಧಾರದಲ್ಲಿ ಕೆಲಸದಿಂದ ತೆಗೆದು ಹಾಕುವ ಕ್ರಮ ಖಂಡಿಸಿ, 8 ವರ್ಷಗಳಿಂದ ವೇತನ ಹೆಚ್ಚಳ ಮಾಡದಿರುವುದು, 45-46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು. ಬಿಸಿಯೂಟ ನೌಕರರಿಗೆ ಭವಿಷ್ಯನಿಧಿ ನೀಡಬೇಕು. ಬಿಸಿಯೂಟ ನೌಕರರನ್ನು ನೇರವಾಗಿ ಶಿಕ್ಷಣ ಇಲಾಖೆಯಡಿಯಲ್ಲಿ ತರುವುದರ ಮೂಲಕ ನೌಕರರ ಮೇಲೆ ಎಸ್.ಡಿ.ಎಂ.ಸಿ ಸಮಿತಿ ಕಿರುಕುಳ ನಿಲ್ಲಬೇಕು. ಇನ್ನಿತರೆ ಬೇಡಿಕೆಗಳ ಈಡೇರಿಕೆಗಾಗಿ ಬಿಸಿಯೂಟ ನೌಕರರ ಮುಷ್ಕರಕ್ಕೆ ಮುಂದಾಗಬೇಕು.

ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಆಗಸ್ಟ್ 16ರಂದು ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳನ್ನು ಭೇಟಿ ಮಾಡಿದ ನೌಕರರು ಮನವಿ ಸಲ್ಲಿಸಿ ಮುಷ್ಕರದ ನೋಟಿಸ್ ನೀಡಿದರು. ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಗಿರಿಜ ಮೂಡಬಿದ್ರಿ, ಖಜಾಂಚಿ ಭವ್ಯಾರವರನ್ನೊಳಗೊಂಡ ನಿಯೋಗವು ಅಕ್ಷರದಾಸೋಹ ನೌಕರರು ಮುಷ್ಕರ ನಡೆಸಲಿದ್ದಾರೆ ಎಂದು ಕರೆ ನೀಡಿದರು.

ಭೂಮಿ ಹಾಗೂ ಸಾಮುದಾಯಿಕ ಹಕ್ಕಿಲ್ಲದೇ ಆದಿವಾಸಿಗಳ ಅಭಿವೃದ್ಧಿ ಅಸಾಧ್ಯ – ವಿಚಾರ ಸಂಕಿರಣದಲ್ಲಿ ಹೊಮ್ಮಿದ ಅಭಿಪ್ರಾಯ

'ಆದಿವಾಸಿ-ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ನಿಜಕ್ಕೂ ಪರಿವರ್ತನೆಯನ್ನು ತಂದು ಪ್ರಗತಿಗಭಿಮುಖವಾಗಿ ಚಲಿಸಬೇಕಾದಲ್ಲಿ ಅವರಿಗೆ ಭೂಮಿಯ ಹಕ್ಕು ಹಾಗೂ ಸಾಮುದಾಯಿಕ ಹಕ್ಕುಗಳ ನೀಡಿಕೆಯು ಅತ್ಯಂತ ನಿರ್ಣಾಯಕವಾಗಿದೆ. ಈ ದೆಸೆಯಲ್ಲಿ ನಮ್ಮ ಸರಕಾರಗಳು ಪ್ರಾಮಾಣಿಕವಾದ ನೈಜ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲಿ' ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕರಾದ ಎಸ್.ವೈ. ಗುರುಶಾಂತ್ ರವರು ಆಗ್ರಹಿಸಿದರು.

ಇದೇ ಜುಲೈ 25ರಂದು ಹೊಸನಗರ ತಾಲೂಕಿನ ನಿಟ್ಟೂರು ಗ್ರಾಮದಲ್ಲಿ ಅವರು 'ಆದಿವಾಸಿ-ಬುಡಕಟ್ಟು ಸಮುದಾಯಗಳ ಅಭಿವೃದ್ಧಿ' ಕುರಿತ ಶಿವಮೊಗ್ಗ ಜಿಲ್ಲಾ ಮಟ್ಟದ ಜಾಗೃತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

'ಸರಕಾರವೇ ಬಿಡುಗಡೆ ಮಾಡಿದ ವರದಿಗಳಂತೆ ಆದಿವಾಸಿ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕ-ಸಾಂಸ್ಕೃತಿಕವಾಗಿ ಅತ್ಯಂತ ಹಿಂದುಳಿದಿವೆ. ಅನೇಕ ಸಮುದಾಯಗಳು ವಿನಾಶದ ಅಂಚಿನಲ್ಲಿವೆ. ರಕ್ತ ಹೀನತೆ, ಅಪೌಷ್ಠಿಕತೆ , ಬಹುಬೇಗ ಸಾವು, ಅಲ್ಲದೇ ಅನಕ್ಷರತೆ, ಮೌಢ್ಯತೆಗಳ ತೀವ್ರತೆಯಲ್ಲಿ ನರಳುತ್ತಿದ್ದಾರೆ. ಹೀಗಾಗಿ ಅವರಲ್ಲಿ ಅಪಾರ ಪಾರಂಪರಿಕ ಜ್ಞಾನವಿದ್ದರೂ, ಅವರ ಭಾಷೆ ಮತ್ತು ಸಂಸ್ಕೃತಿ ಸಿರಿವಂತಿಕೆಯಿಂದ ಕೂಡಿದ್ದರೂ ಅವನ್ನು ಉಳಿಸಿ ಬೆಳೆಸಲು, ಇಡೀ ಸಮಾಜಕ್ಕೆ ಬಳಸಲು ಸಾಧ್ಯವಾಗುತ್ತಿಲ್ಲ. ಆಧುನಿಕ ಸಮಾಜ ಅಗಣಿತ ಸಾಧನೆಗಳನ್ನು ಮಾಡಿದಾಗಲೂ ಅದರ ಫಲವೇಕೆ ಈ ಸಮುದಾಯಗಳಿಗೆ ದೊರೆಯುತ್ತಿಲ್ಲ ಎಂಬ ಪ್ರಶ್ನೆಯನ್ನು ಮುಂದುವರಿದಿದ್ದೇವೆ ಎಂದು ಬೀಗುವ ನಮ್ಮ ನಾಗರೀಕ ಸಮಾಜ ಮತ್ತು ಸರಕಾರಗಳು ಕೇಳಿಕೊಳ್ಳಬೇಕಿದೆ. ಹಾಗಾದಲ್ಲಿ ಈ ಸಮುದಾಯಗಳ ನೋವು, ನರಳಿಕೆಗಳಲ್ಲಿ ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಜಾರಿಗೊಳಿಸುವಲ್ಲಿನ ಹೊಣೆಗಾರಿಕೆಯಿಂದ ಕಿಂಚಿತ್ತಾದರೂ ಪ್ರಗತಿ ಸಾಧ್ಯವಾದೀತು' ಎಂದರು.

'ಡಾ॥ಅಂಬೇಡ್ಕರ್ ರವರು ನಮ್ಮ ಸಂವಿಧಾನದಲ್ಲಿ ಬುಡಕಟ್ಟು ಸಮುದಾಯಗಳು ಹಾಗೂ ದಲಿತ, ಶೋಷಿತ ಸಮುದಾಯಗಳಿಗೆ ಸ್ಥಾನವನ್ನು ಕಲ್ಪಿಸಿದರು. ಆದರೂ ದಬ್ಬಾಳಿಕೆ ನಿಲ್ಲಲಿಲ್ಲ. ಇಂದಿಗೂ ಅತಂತ್ರ, ಹತಾಶ ಸ್ಥಿತಿಯಲ್ಲೇ ಈ ಶ್ರಮಿಕ ಮೂಲ ಸಮುದಾಯಗಳು ಬದುಕುತ್ತಿವೆ. ಇಂದು ಕಸ್ತೂರಿ ರಂಗನ್ ವರದಿ, ಹುಲಿ ಯೋಜನೆ, ಆನೆ ಕಾರಿಡಾರ್, ಗಣಿಗಾರಿಕೆ, ಅಭಿವೃದ್ಧಿ ಮುಂತಾದವುಗಳ ಹೆಸರಿನಲ್ಲಿ ಒಕ್ಕಲೆಬ್ಬಿಸಲಾಗುತ್ತಿದೆ. ಸಮುದಾಯಗಳನ್ನು ರಕ್ಷಿಸಬೇಕಾದ ಕಾನೂನುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಆದ್ದರಿಂದ ಈ ಕಾಯ್ದೆಗಳನ್ನು ಜಾರಿಗೊಳಿಸಲು ಬದ್ಧತೆ ಬೇಕು' ಎಂದು ಆಗ್ರಹಿಸಿದರು.

ಮುಖ್ಯ ಅತಿಥಿಗಾಗಿ ಆಗಮಿಸಿದ್ದ ನಗರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ದೇವರಾಯರವರು "ಡಾ.ಅಂಬೇಡ್ಕರ್ ರವರ 125ನೆಯ ಜನ್ಮವಾರ್ಷಿಕ ಆಚರಿಸುತ್ತಿದ್ದೇವೆ. ಅವರ ಜೀವನ, ಸಾಧನೆಗಳಿಂದ ಪಾಠ ಕಲಿಯಬೇಕು. ಶಿಕ್ಷಿತರಾಗಬೇಕು. ಸಂವಿಧಾನ ಬದ್ಧ ಹಕ್ಕುಗಳಿಗಾಗಿ ಹೋರಾಡಬೇಕು' ಎಂದರು.

ಇನ್ನೊಬ್ಬ ಅತಿಥಿಗಳಾಗಿದ್ದ ಕರ್ನಾಟಕ ರಾಜ್ಯ ಕುಣಬಿ ಸಮಾಜದ ಅಭಿವೃದ್ಧಿ ಮಹಾಮಂಡಲದ ರಾಜ್ಯ ಅಧ್ಯಕ್ಷರೂ, ವಕೀಲರೂ ಆದ ಮಂಜಪ್ಪ ಸಾಗರ ರವರು ಮಾತನಾಡಿ 'ಇಂದು ಆದಿವಾಸಿಗಳಿಗೆ ಕಾಯ್ದೆಗಳ ಬಗ್ಗೆ ಅರಿವಿಲ್ಲ, ಜಾಗೃತಿ ಇಲ್ಲ. ಅದನ್ನು ಪಡೆಯಬೇಕು. ಆದಿವಾಸಿ ಸಮುದಾಯಗಳ ಹಕ್ಕುಗಳನ್ನು ಗೌರವಿಸಿ ಕಾಯ್ದೆ ಜಾರಿಗೊಳಿಸಬೇಕು. ಇನ್ನೂ ಎಸ್.ಟಿ.ಪಟ್ಟಿಗೆ ಸೇರದ ಕುಣಬಿಯಂತಹ ಹಲವು ಸಮುದಾಯಗಳನ್ನು ಸೇರಿಸಲು ಕ್ರಮ ವಹಿಸಬೇಕು ಎಂದು ಸರಕಾರವನ್ನು ಆಗ್ರಹಿಸಿದರಲ್ಲದೇ ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ತಿಳಿಸಿದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ನಾಗರತ್ನ ನಾಗರಾಜು, ಸದಸ್ಯರಾದ ಹೂವಮ್ಮ ಹಿರೆಮನೆ, ಪಿಡಿಓ ಗೋಪಾಲ ಆಚಾರ್ ಮಾತನಾಡಿದರು. ಚಂದ್ರಶೇಖರ್ ಗಂಗನಜೆಡ್ಡು, ಲಕ್ಷ್ಮಿದೇವಿ, ಚಂದ್ರ ತುಮರಿ ಮುಂತಾದವರು ಉಪಸ್ಥಿತರಿದ್ದರು. ಬಳಿಕ ವಿವಿಧ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಪ್ರತಿನಿದಿಗಳು ಮಾತನಾಡಿದರು. ಬಳಿಕ ಸಂಘಟನಾ ಕಾರ್ಯ ಯೋಜನೆ, ಹೋರಾಟದ ರೂಪು ರೇಷೆಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು.

ಆರಂಭದಲ್ಲಿ ಆದಿವಾಸಿ ಹಕ್ಕುಗಳ ಸ.ಸಮಿತಿಯ ರಾಜ್ಯ ಸಮಿತಿಯ ಸದಸ್ಯರಾದ ಶ್ರೀಧರ ಕೊರಗ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಚಾಲಕರಾದ ನಾಗರಾಜ್ ಏಳಿಗೆಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಧರ ವಳಗೆರೆ ಧನ್ಯವಾದಗಳನ್ನು ಅರ್ಪಿಸಿದರು.

-ವರದಿ : ಶ್ರೀಧರ ಕೊರಗ

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ

ಪ್ರಧಾನಿ ಮೋದಿ ದಲಿತ ಪರ ಹೇಳಿಕೆ, ರಾಜಕೀಯ ಬೂಟಾಟಿಕೆ– ಡಾ.: ಜಿ. ರಾಮಕೃಷ್ಣ

ಪ್ರಧಾನಿ ನರೇಂದ್ರ ಮೋದಿಯವರ ದಲಿತರ ಬದಲು ನನ್ನನ್ನು ಕೊಲ್ಲಿ ಎಂಬ ಹೇಳಿಕೆ ರಾಜಕೀಯ ಬೂಟಾಟಿಕೆ ಹಾಗೂ ದುಷ್ಟತನದ ಪ್ರಹಸನ ಎಂದು ಖ್ಯಾತ ಚಿಂತಕ ಡಾ॥ಜಿ.ರಾಮಕೃಷ್ಣ ಗುಡುಗಿದ್ದಾರೆ.

ಸಮಕಾಲೀನ ವಿಚಾರ ವೇದಿಕೆಯ ಆಶ್ರಯದಲ್ಲಿ ಬೆಂಗಳೂರು ನಗರದ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ನಡೆದ "ಗೋ ರಕ್ಷಣೆ ರಾಜಕೀಯ" ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು "ಪ್ರಧಾನಿ ಮೋದಿ ಬುದ್ದಿವಂತಿಕೆ ರಾಜಕೀಯ ಮಾಡುತ್ತಿದ್ದಾರೆ. ಗುಜರಾತಿನಲ್ಲಿ ದಲಿತರ ಪರ ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಇದರ ಲಾಭ ಪಡೆಯಲು ಬೂಟಾಟಿಕೆಯ ಹೇಳಿಕೆಗಳನ್ನು ಮೋದಿ ನೀಡುತ್ತಿದ್ದಾರೆ. ಗೋವನ್ನು ರಾಜಕೀಯ ಅಸ್ತ್ರವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಗೋವಿನ ರಕ್ಷಣೆ ಬಗ್ಗೆ ಮಾತನಾಡುವವರೆ ಗೋವುಗಳ ಸಾಗಾಣಿಕೆ ಮಾಡುವವರಿದ್ದಾರೆ ಎಂದರು. ಬದಲಾದ ಕಾಲ ಘಟ್ಟದಲ್ಲಿ ಸಂಪ್ರದಾಯಗಳು ಬದಲಾವಣೆ ಆಗುತ್ತಿವೆ. ಗೋವನ್ನು ತಿನ್ನಲು ಬಲವಂತವನ್ನಾಗಲಿ, ತಿನ್ನದಂತೆ ಅಡ್ಡಿಯನ್ನಾಗಲಿ ಮಾಡುವುದು ಬೇಡ. ತಿನ್ನುವ ಆಹಾರದ ವಿಷಯದಲ್ಲಿ ರಾಜಕೀಯ ಸರಿಯಲ್ಲ. ಗೋವು ಮಾಂಸ ತಿನ್ನಬೇಡಿ ಎನ್ನುವುದು ಆಹಾರ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಅವರು ಪ್ರತಿಪಾದಿಸಿದರು.

ಮುಖ್ಯ ಅತಿಥಿಯಾಗಿದ್ದ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಅಧ್ಯಕ್ಷ ಮಾವಳ್ಳಿ ಶಂಕರ ಮಾತನಾಡಿ "ಗೋವನ್ನು ಬಿಜೆಪಿ ಮುಂದಿನ ಚುನಾವಣೆಯ ಅಜೆಂಡ ಮಾಡಿಕೊಂಡಿದೆ. ಬಿಜೆಪಿ ಹಿಂದುತ್ವದ, ಜೀವ ವಿರೋಧಿ ನೀತಿ ಪಾಲಿಸುತ್ತಿದೆ. ದಲಿತರ ಅಸಹಾಯಕತೆಯನ್ನು ಇದು ಬಳಸಿಕೊಳ್ಳುತ್ತಿದೆ. ಬೀದಿ ಬೀದಿಗಳಲ್ಲಿ ಜನತೆ ಬಡಿದಾಡಿಕೊಳ್ಳುವಂತೆ ಸಂಚನ್ನು ರೂಪಿಸಿದೆ" ಎಂದು ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿ ಡಿ.ವೈ.ಎಫ್.ಐ ರಾಜ್ಯಾಧ್ಯಕ್ಷ ಮುನೀರ ಕಾಟೀಪಾಳ್ಯ ಮಾತನಾಡಿ "ದಲಿತರನ್ನು ಮುಸ್ಲಿಮರಿಂದ ದೂರ ಸರಿಸಲು, ಈ ಮೂಲಕ ಮುಸ್ಲಿಮರನ್ನು ಗುರಿಯನ್ನಾಗಿ ಮಾಡಲು ಯತ್ನಿಸುತ್ತಿದ್ದಾರೆ. ಕರಾವಳಿ ಪ್ರದೇಶದಲ್ಲಿ ಗೋವಿನ ಹೆಸರಲ್ಲಿ ರಾಜಕೀಯ ಮಾಡಲಾಗುತ್ತಿದೆ. ಪೊಲೀಸ ಇಲಾಖೆ ಸಹ ಗೋವಿನ ರಾಜಕೀಯದ ಒಂದು ಭಾಗವಾಗಿದೆ. ಗೋ ರಕ್ಷಣೆ ಕಾಯಿದೆಯ ಸರಳೀಕರಣಗೊಳಿಸಬೇಕಿದೆ" ಎಂದು ತಿಳಿಸಿದರು.

ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದ ಯುವ ಚಿಂತಕ ಭಾಸ್ಕರ ಪ್ರಸಾದ ಮಾತನಾಡಿ "ಈಗ ಬಿಜೆಪಿಯವರು ಗೋ ರಕ್ಷಕರ ಮುಖವಾಡ ಹಾಕಿಕೊಂಡಿದ್ದಾರೆ. ದನದ ಮಾಂಸ ತಿನ್ನುವವರು, ಸಾಗಾಟ ಮಾಡುವವರ ಮೇಲೆ ಹಲ್ಲೆ ಮಾಡಿದರೆ, ಸುಮ್ಮನಿರದೆ ಅಂತವರ ಮೇಲೆ ನೀವೂ ಹಲ್ಲೆ ಮಾಡಿ. ಕೈಗೆ ಕೈ, ಕಾಲಿಗೆ ಕಾಲು ತೆಗೆಯಿರಿ" ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪತ್ರಕರ್ತೆ ಗೌರಿ ಲಂಕೇಶ ಮಾತನಾಡಿ ಮೋದಿಯವರ ಮಾತುಗಳು ಮುಸ್ಲಿಮರು ಮತ್ತು ದಲಿತರನ್ನು ಎತ್ತಿ ಕಟ್ಟುತ್ತಿವೆ. ಪಂಜಾಬ, ಹರ್‍ಯಾಣ, ಮೊದಲಾದ ರಾಜ್ಯಗಳಲ್ಲಿ ಗೋ ರಕ್ಷಕ ದಳ ಎಂಬುವ ಸಂಘಟನೆಗಳು ಹುಟ್ಟಿಕೊಂಡು ದಂಧೆ ಮಾಡುತ್ತಿವೆ. ಮೋದಿ ಸರ್ಕಾರ ದಲಿತರ ಪರವಲ್ಲ. ದಲಿತರು , ಮುಸ್ಲಿಮರು ಮತ್ತು ರೈತರು ಒಟ್ಟಾಗಿ ಹೋರಾಡಬೇಕಿದೆ ಎಂದರು.


ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಹಾಗೂ ಮಹಿಳಾ ಸಾಹಿತಿ ಬಿ.ಟಿ.ಲಲಿತಾ ನಾಯಕ, ಶಫೀಉಲ್ಲಾ, ಮಹಮ್ಮದ್ ಖುರೇಷಿ, ಮತ್ತಿತರರು ಭಾಗವಹಿಸಿದ್ದರು. ಹಿರಿಯ ಸಾಹಿತಿ ಡಾ.ಕೆ. ಮರುಳ ಸಿದ್ದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಚಿಕ್ಕರಾಜು ಸ್ವಾಗತಿಸಿದರು, ಬಿ ರಾಜಶೇಖರಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ವರದಿ: ಅರುಣಾ ಶಿರಗುಪ್ಪಿ

1991 ರಲ್ಲಿ ನರಸಿಂಹ ರಾವ್ ಆಳ್ವಿಕೆಯಲ್ಲಿ ಡಾ.ಮನಮೋಹನ್‌ಸಿಂಗ್‌ರವರ ಸಾರಥ್ಯದಲ್ಲಿ ಆರಂಭವಾದ ನವ-ಉದಾರವಾದಿ 'ಸುಧಾರಣೆ'ಗಳ ಬೆಳ್ಳಿಹಬ್ಬವನ್ನು ಅದರ ಪರಾಕುದಾರರು ಆಚರಿಸುತ್ತಿದ್ದಾರೆ, ಆದರೆ ಅವರು ಹೇಳುವಂತೆ ಅದರ 25 ವರ್ಷಗಳ ಅದರ ಸಾಧನೆ ಭಾರತವನ್ನು ಪ್ರಕಾಶಮಾನಗೊಳಿಸಿದ್ದಲ್ಲ, ಬದಲಿಗೆ ಭಾರತದ ಎಡಪಂಥೀಯ ಆಂದೋಲನ ಆಗಲೇ ಎಚ್ಚರಿಸಿದಂತೆ ಎರಡು 'ಭಾರತ'ಗಳನ್ನು ಸೃಷ್ಟಿಸಿದ್ದು- 'ಹೊಳೆಯುತ್ತಿರುವ ಭಾರತ' ಮತ್ತು 'ನರಳುತ್ತಿರುವ ಭಾರತ'.

ಇದನ್ನು ಆರಂಭದಿಂದಲೂ ಮನಗಂಡು ಪ್ರತಿರೋಧಿಸುತ್ತ ಬಂದಿರುವ ದೇಶದ ಕಾರ್ಮಿಕ ಆಂದೋಲನ ಮುಂದಿನ ವಾರ, ಸಪ್ಟಂಬರ್ 2ರಂದು ಈ 25 ವರ್ಷಗಳಲ್ಲಿ 17ನೇ ಬಾರಿಗೆ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ನಡೆಸುತ್ತಿದೆ. ಈ ಇಪ್ಪತ್ತೈದು ವರ್ಷಗಳಲ್ಲಿ ನವ-ಉದಾರವಾದಿ 'ಸುಧಾರಣೆ'ಗಳು ಬಹುಪಾಲು ದುಡಿಯುವ ಜನರಿಗೆ ನೀಡಿದ್ದೇನು? ಸಿಐಟಿಯು ಅಧ್ಯಕ್ಷರಾದ ಎ.ಕೆ.ಪದ್ಮನಾಭನ್‌ರವರ ಈ ಲೇಖನ ಅದರ ಒಂದು ಪಕ್ಷಿನೋಟವನ್ನು ಕೊಡುತ್ತದೆ. ಭಾವಾನುವಾದ: ಕೆ.ಎಂ.ನಾಗರಾಜ್

25 ವರ್ಷಗಳ ನವ-ಉದಾರೀ 'ಸುಧಾರಣೆ'ಗಳು ಜನಸಾಮಾನ್ಯರ ಬದುಕನ್ನು ಬೆಳಗಿಸಿಲ್ಲ, ಕತ್ತಲಿನತ್ತ ತಳ್ಳಿದೆ



ಸಂಘಟಿತ ಕಾರ್ಮಿಕರ ಶಕ್ತಿಯನ್ನು ಅಡಗಿಸುವುದೇ ನವ-ಉದಾರೀ ನೀತಿಗಳ ಏಕೈಕ ಗುರಿಯಾಗಿತ್ತು ಎಂಬುದು ಈಗ ನಿರ್ವಿವಾದವಾಗಿದೆ. ಸಂಘಟಿತ ಕಾರ್ಮಿಕರ ಶಕ್ತಿಯನ್ನು ನಾಶಮಾಡುವುದೇ ಈ ನೀತಿಗಳ ಉದ್ದೇಶ ಎಂದು ಸಿಐಟಿಯು ಮತ್ತು ಇತರ ಎಡ ನಿಲುವಿನ ಕೇಂದ್ರ ಕಾರ್ಮಿಕ ಸಂಘಟನೆಗಳು, 1991ರಲ್ಲಿ ಉದಾರೀಕರಣ, ಖಾಸಗೀಕರಣ ಮತ್ತುಜಾಗತೀಕರಣ ನೀತಿಗಳ ಅಳವಡಿಕೆಯ ಆರಂಭದಲ್ಲೇ ಹೇಳಿದ್ದವು. ಆಗ, ಬಹಳ ಮಂದಿ ಈ ಅಭಿಪ್ರಾಯವನ್ನು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಕಳೆದ 25 ವರ್ಷಗಳಲ್ಲಿ ಈ ನೀತಿಗಳು ತಂದೊಡ್ಡಿರುವ ವಿಪತ್ತುಗಳ ಬಗ್ಗೆ ಈಗ ಯಾರಿಗೂ ಅನುಮಾನ ಉಳಿದಿಲ್ಲ. ಕಾರ್ಮಿಕ ವರ್ಗ ಈ ಅವಧಿಯುದ್ದಕ್ಕೂ ಕಹಿ ಅನುಭವಿಸಿದೆ.

ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗಳಲ್ಲಿ, ಮಂತ್ರಿಗಳಿಂದ ಹಿಡಿದು ಅಧಿಕಾರಿಗಳು, ಮಾಧ್ಯಮ ಪಂಡಿತರು, ಕೈಗಾರಿಕೆ-ವಾಣಿಜ್ಯದ ಪ್ರತಿನಿಧಿಗಳು ಮತ್ತು ಉದ್ಯಮಪತಿಗಳವರೆಗೆ ಎಲ್ಲರೂ ಹೇಳುತ್ತಿದ್ದ ಮಂತ್ರ ಒಂದೇ-'ಹೆಚ್ಚಿನ ಮಟ್ಟದಲ್ಲಿ ಬಂಡವಾಳ ಹೂಡಿಕೆಯಾಗದ ಹೊರತು ದೇಶದ ಅಭಿವೃದ್ಧಿಯಾಗುವುದಿಲ್ಲ. ಆದರೆ, ಕಾರ್ಮಿಕ ಕಾನೂನುಗಳು ಬಂಡವಾಳ ಹೂಡಿಕೆಗೆ ಅಡಚಣೆಯಾಗಿವೆ. ಆದ್ದರಿಂದ, ಕಾರ್ಮಿಕ ಕಾನೂನುಗಳನ್ನು ಬದಲಾಯಿಸಬೇಕು'. ಈ ಮಾತುಗಳನ್ನು ಅವರು "ಶ್ರಮ ಮಾರುಕಟ್ಟೆಯ ಸುಧಾರಣೆಗಳು" ಎನ್ನುವ ನಯವಾದ ಹೆಸರಿನಿಂದ ಕರೆಯುತ್ತಿದ್ದರು.

ಬಂಡವಾಳ ಹೂಡಿಕೆ, ಕೈಗಾರಿಕೀಕರಣ, ಉದ್ಯೋಗ ಸೃಷ್ಟಿ ಮುಂತಾದ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆಯುವ ಪ್ರತಿ ಸಂದರ್ಭದಲ್ಲೂ ಈ ಶ್ರಮ ಮಾರುಕಟ್ಟೆಯ ಸುಧಾರಣೆಗಳ ಬಗ್ಗೆ ಪ್ರಸ್ತಾಪ ಮಾಡುವುದು ಖಾಯಂ ಆಗಿತ್ತು. 'ಕಾರ್ಮಿಕ ಕಾನೂನುಗಳು ಬಹಳ ಬಿಗಿಯಾಗಿವೆ ಮತ್ತು ಅವುಗಳ ಸಂಖ್ಯೆಯೂ ಅಧಿಕವಾಗಿದೆ. ಆದ್ದ-ರಿಂದ, ಅವುಗಳನ್ನು ಸಡಿಲಗೊಳಿಸಬೇಕು ಮತ್ತು ಅವುಗಳನ್ನು ನಯಗೊಳಿಸಬೇಕು. ನಾಯಿ ಕೊಡೆಗಳ ರೀತಿಯಲ್ಲಿ ಹುಟ್ಟುತ್ತಿರುವ ಕಾರ್ಮಿಕ ಸಂಘಟನೆಗಳಿಗೆ ಕಡಿವಾಣ ಹಾಕಬೇಕು' ಎಂಬ ತೀರ್ಮಾನಗಳು ಈ ಚರ್ಚೆಗಳಿಂದ ಹೊರಬರುತ್ತಿದ್ದವು. ಇಡೀದೇಶವನ್ನೇ ಆವರಿಸಿರುವ ಆರ್ಥಿಕ ಬಿಕ್ಕಟ್ಟಿಗೆ ಇರುವ ಏಕೈಕ ಪರಿಹಾರವೆಂದರೆ, ಶ್ರಮ ಮಾರುಕಟ್ಟೆಯ ಸುಧಾರಣೆಗಳು ಎನ್ನುವಂತೆ ಚರ್ಚೆಗಳಾಗುತ್ತಿದ್ದವು.

ಕಾರ್ಮಿಕ ಕಾನೂನುಗಳಿಗೆ ಒಂದು ದೊಡ್ಡ ಇತಿಹಾಸವೇ ಇದೆ. ಅಸಂಖ್ಯ ಕಾರ್ಮಿಕರ ಅನೇಕ ವರ್ಷಗಳ ಹೋರಾಟಗಳ ಫಲವಾಗಿ, ಕಾರ್ಮಿಕ ಕಾನೂನುಗಳು ರಚನೆಯಾಗಿವೆ. ಅದಕ್ಕಾಗಿ ಕಾರ್ಮಿಕರು ತಮ್ಮ ರಕ್ತ ಹರಿಸಿದ್ದಾರೆ ಮತ್ತು ಪ್ರಾಣ ಕಳೆದುಕೊಂಡಿದ್ದಾರೆ. ತಮ್ಮ ಆಯ್ಕೆಯ ಸಂಘ ರಚನೆಮಾಡಿಕೊಳ್ಳುವ ಹಕ್ಕುಗಳನ್ನು ಕೊಡುವ ಟ್ರೇಡ್ ಯೂನಿಯನ್ ಆಕ್ಟ್ 1926 ಜಾರಿಗೆ ಬಂದದ್ದು ಕಾರ್ಮಿಕರ ಹೋರಾಟಗಳ ಫಲವಾಗಿಯೇ. ಬ್ರಿಟಿಷರು ನಮ್ಮ ದೇಶವನ್ನು ಆಳುತ್ತಿದ್ದ ಕಾಲದಲ್ಲಿ ಈ ಕಾಯ್ದೆ ಜಾರಿಗೆ ಬಂದಿತ್ತಾದರೂ, ರಾಷ್ಟ್ರ ಮಟ್ಟದಲ್ಲಿ ಆಡಳಿತ ವರ್ಗ/ ಮಾಲೀಕರು, ಕಾರ್ಮಿಕರ ಸಾಮೂಹಿಕ ಚೌಕಾಸಿಯ ಹಕ್ಕುಗಳನ್ನು ಮಾನ್ಯ ಮಾಡುವಂತೆ ಕಡ್ಡಾಯಗೊಳಿಸುವ ಕ್ರಮ ಸ್ವತಂತ್ರ ಭಾರತದಲ್ಲಿ ಇನ್ನೂ ಜಾರಿಯಾಗಿಲ್ಲ.

ಹಾಲಿ ಇರುವ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡದಿರುವುದು, ಕಾರ್ಮಿಕ ಕಾನೂನು ಜಾರಿ ವ್ಯವಸ್ಥೆಯನ್ನು ಕಳಚಿಹಾಕುವುದು, ಕಾರ್ಮಿಕರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಈಗಿರುವ ಕಾನೂನುಗಳಿಗೆ ತಿದ್ದುಪಡಿ ಮಾಡುವುದು - ಸರ್ಕಾರದ ಇಂತಹ ಕ್ರಮಗಳೇ - ಶ್ರಮ ಮಾರುಕಟ್ಟೆಯ ಸುಧಾರಣೆಗಳು. ಆದರೆ, ಮುಷ್ಕರಗಳ ಮೂಲಕ ಕಾರ್ಮಿಕರು ಒಡ್ಡಿದ ಪ್ರತಿರೋಧ ಮತ್ತು ಒಟ್ಟಾರೆ ರಾಜಕೀಯ ಪರಿಸ್ಥಿತಿಯಿಂದಾಗಿ, ಅಂದರೆ, ಅನೇಕ ಸಂದರ್ಭಗಳಲ್ಲಿ ಆಳುವ ಪಕ್ಷಗಳಿಗೆ ಬಹುಮತ ಇಲ್ಲದಿದ್ದ ಕಾರಣದಿಂದಾಗಿ, ಶ್ರಮ ಮಾರುಕಟ್ಟೆ ಸುಧಾರಣೆಗಳು ದೊಡ್ಡ ಪ್ರಮಾಣದಲ್ಲಿ ಆಗಿಲ್ಲ.



ಆದರೆ, ದೇಶದ ಅನೇಕ ಭಾಗಗಳಲ್ಲಿ, ಎಂಎನ್‌ಸಿಗಳೂ ಸೇರಿದಂತೆ, ಆರಂಭ ಮಾಡಿರುವ ಹೊಸ ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ರಕ್ಷಣೆ ಒದಗಿಸುವ ಟ್ರೇಡ್ ಯೂನಿಯನ್ ರಚನೆ ಮಾಡಿಕೊಳ್ಳುವ ಹಕ್ಕುಗಳನ್ನು ನಿರಾಕರಿಸಲಾಗಿದೆ. ಅಷ್ಟೇ ಅಲ್ಲದೆ, ಹಿಂದೆ ಇಂತಹ ಹಕ್ಕುಗಳನ್ನು ಮಾನ್ಯ ಮಾಡಿದ್ದ ಭಾರತೀಯ ಕಂಪೆನಿಗಳೂ ಈಗ ಎಂಎನ್‌ಸಿಗಳ ಕುತಂತ್ರಗಳನ್ನು ಅನುಸರಿಸುತ್ತಿದ್ದಾರೆ. ಹಾಗಾಗಿ, ಕಾರ್ಮಿಕರಿಗೆ ಕೆಲಸದ ಭದ್ರತೆ ಇಲ್ಲವಾಗಿದೆ. ಖಾಯಂ ಸ್ವರೂಪದ ಉದ್ಯೋಗಗಳ ಬದಲಿಗೆ ದಿನಗೂಲಿ(casualisation), ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಮತ್ತು ಕ್ಯಾಶ್ಯುಅಲ್ ದಿನ ಕೂಲಿ (contractorisation) ಪದ್ಧತಿ ಜಾರಿಯಲ್ಲಿದೆ. ಖಾಯಂ ಸ್ವರೂಪದ ಕೆಲಸಗಳಿಗೆ ಒಬ್ಬ ಖಾಯಂ ಉದ್ಯೋಗಿಯನ್ನೂ ನೇಮಕ ಮಾಡಿಕೊಳ್ಳದೆ, ಬರೀ ದಿನಗೂಲಿ ಮತ್ತು ತಾತ್ಕಾಲಿಕ ಉದ್ಯೋಗಿಗಳ ಮೂಲಕವೇ, ಹಲವಾರು ವರ್ಷಗಳ ಕಾಲ ಉತ್ಪಾದನೆಯಲ್ಲಿ ತೊಡಗಿರುವ ಅನೇಕ ಕಾರ್ಖಾನೆಗಳಿವೆ. ಉದಾಹರಣೆಗೆ, 2011ರಲ್ಲಿ, ಮಾರುತಿ ಸುಝುಕಿ ಕಂಪೆನಿಯಲ್ಲಿದ್ದ ಒಟ್ಟು 3400 ಕಾರ್ಮಿಕರ ಪೈಕಿ, ಖಾಯಂ ಕಾರ್ಮಿಕರು ಕೇವಲ 1000, ಟ್ರೇನೀಗಳು 800, ಅಪ್ರೆಂಟಿಸ್‌ಗಳು 400 ಮತ್ತು ಗುತ್ತಿಗೆ ಕಾರ್ಮಿಕರು 1200 ಮಂದಿ ಇದ್ದರು. ಅವರ ತಿಂಗಳ ಸಂಬಳ ಹೀಗಿತ್ತು: ಖಾಯಂಕಾರ್ಮಿಕರಿಗೆ ರೂ.13,000-17,000; ಟ್ರೇನೀಗಳಿಗೆ ರೂ.8,000; ಅಪ್ರೆಂಟಿಸ್‌ಗಳಿಗೆ ರೂ.4,000; ಮತ್ತು ಗುತ್ತಿಗೆ ಕಾರ್ಮಿಕರಿಗೆ ರೂ.6,500. 2010-11ರಲ್ಲಿ 2,288 ಕೋಟಿರೂ.ಲಾಭ ಗಳಿಸಿದ್ದ ಮಾರುತಿ ಸುಝುಕಿ ಕಂಪೆನಿಯು ಕಾರ್ಮಿಕರನ್ನು ಎಷ್ಟು ತೀವ್ರವಾಗಿ ಶೋಷಣೆ ಮಾಡಿದೆ ಎಂಬುದನ್ನು ಇದು ತೋರಿಸುತ್ತದೆ.

ಸಂಘಟಿತ ವಲಯದಲ್ಲಿ ಶೇ.60 ಮಂದಿ ಕಾರ್ಮಿಕರು ಕನಿಷ್ಠ ಕೂಲಿ ಮತ್ತು ಇಎಸ್‌ಐ ಹಾಗೂ ಪಿಎಫ್ ನಂತಹ ಸಾಮಾಜಿಕ ಭದ್ರತೆಗಳಿಂದ ವಂಚಿತರಾಗಿದ್ದಾರೆ. ಸಾರ್ವಜನಿಕ ವಲಯದಲ್ಲಿ ಶೇ.50 ಮಂದಿ ಮತ್ತು ಖಾಸಗಿ ವಲಯದಲ್ಲಿ ಶೇ.70 ಮಂದಿ ಗುತ್ತಿಗೆ ಕಾರ್ಮಿಕರಿದ್ದಾರೆ. ಎಲ್ಲ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ, ಇವರಿಂದ ದಿನಕ್ಕೆ 12 ಗಂಟೆ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ. ಈ ರೀತಿಯಲ್ಲಿ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ಮೂಲಕ ಲಾಭದ ಪಾಲು ಹೆಚ್ಚುತ್ತಿದೆ ಮತ್ತು ಕೂಲಿಯ ಅಂಶ ಇಳಿಯುತ್ತಿದೆ. 1982-83ರಲ್ಲಿ ಶೇ.30ರಷ್ಟಿದ್ದ ಕೂಲಿಯ ಪಾಲು, 2012-13ರ ವೇಳೆಗೆ ಶೇ.12.9ಕ್ಕೆ ಇಳಿದಿದೆ. ಇದೇಅವಧಿಯಲ್ಲಿ, ಲಾಭದ ಪಾಲು ಶೇ.20ರಿಂದ ಶೇ.50ಕ್ಕೆ ಏರಿದೆ.

1991 ರಿಂದ 2013 ರ ವರೆಗೆ ಅನೇಕ ಸರ್ಕಾರಗಳು ಬಂದು ಹೋದರೂ ಕಾರ್ಮಿಕರ ಸ್ಥಿತಿ-ಗತಿಗಳು ಬದಲಾಗಲಿಲ್ಲ. 2014ರಲ್ಲಿ ನರೇಂದ್ರ ಮೋದಿ ಸರ್ಕಾರಅಧಿಕಾರಕ್ಕೆ ಬಂದ ನಂತರ ಕಾರ್ಮಿಕರ ಸ್ಥಿತಿ-ಗತಿಗಳು ಮತ್ತಷ್ಟು ಹದಗೆಟ್ಟಿವೆ. ಮೋದಿ ಸರ್ಕಾರ ಸುಧಾರಣೆಗಳನ್ನು ಜಾರಿಗೆ ತರಲು ರಭಸದಿಂದ ನುಗ್ಗುತ್ತಿರುವುದು ದುಡಿಯುವ ಜನತೆಯ ಜೀವನವನ್ನು ವಿಧ್ವಂಸದ ಅಂಚಿಗೆ ತಳ್ಳಿದೆ.

ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಶೋಷಣೆ ವಿಪರೀತವಾಗಿದೆ. ಎಲ್ಲ ವಲಯಗಳಲ್ಲೂ ದುಡಿಯುವ ಜನತೆ ಈಗಾಗಲೇ ಗಂಡಾಂತರದಲ್ಲಿದ್ದಾರೆ. ಒಂದು ಅತಿ ಸಣ್ಣ ಮೊತ್ತದ ಗೌರವಧನ ಪಡೆದು ಸರ್ಕಾರದ ವಿವಿಧ ಸ್ಕೀಂಗಳಲ್ಲಿ ಕೆಲಸಮಾಡುತ್ತಿರುವ ಒಂದು ಕೋಟಿಗಿಂತಲೂ ಅಧಿಕ ಸಂಖ್ಯೆಯ ನೌಕರರ ಪರಿಸ್ಥಿತಿಯಂತೂ ಹೇಳತೀರದು.

ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಲು ಮೋದಿ ಸರ್ಕಾರವು ಕಳೆದ 26 ತಿಂಗಳಿಂದಲೂ ಹವಣಿಸುತ್ತಿದೆ. ಟ್ರೇಡ್ ಯೂನಿಯನ್ ಹಕ್ಕುಗಳು ಮತ್ತು ಉದ್ಯೋಗ ರಕ್ಷಣೆಯಂತಹ ಬಹಳ ಮುಖ್ಯವಾದ ಕೆಲವು ಕಲಂಗಳನ್ನು ಕಾಯ್ದೆಗಳಿಂದ ಕಿತ್ತು ಹಾಕಿ, 44 ಕಾರ್ಮಿಕ ಕಾಯ್ದೆಗಳ ಬದಲಿಗೆ ಐದು ಲೇಬರ್ ಕೋಡ್(ಕಾರ್ಮಿಕ ಸಂಹಿತೆ) ಗಳಿಗೆ ಇಳಿಸುವ ಕಾರ್ಯದಲ್ಲಿ ಮೋದಿ ಸರ್ಕಾರ ನಿರತವಾಗಿದೆ. ಈ ಬದಲಾವಣೆಯಿಂದಾಗಿ, ಶೇ.75 ರಷ್ಟು ಕಾರ್ಮಿಕರು ಕನಿಷ್ಠ ಕೂಲಿ, ಇಎಸ್‌ಐ, ಪಿಎಫ್ ಮುಂತಾದ ಅನುಕೂಲಗಳನ್ನು ಕಳೆದುಕೊಳ್ಳುತ್ತಾರೆ. ಈ ಬದಲಾವಣೆಗಳಿಂದಾಗಿ ಕಾರ್ಮಿಕರ ಮೇಲಿನ ಶೋಷಣೆ ಹೆಚ್ಚುತ್ತದೆ ಮತ್ತು ಕಾರ್ಮಿಕರು ಅಕ್ಷರಶಃ ಜೀತದಾಳುಗಳಾಗಿ ಬದಲಾಗುತ್ತಾರೆ.

ಕಾರ್ಮಿಕ ಕಾನೂನುಗಳ ತಿದ್ದುಪಡಿಯ ಹವಣಿಕೆಯಲ್ಲಿ ಕೆಲವು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕಿಂತಲೂ ಒಂದು ಹೆಜ್ಜೆ ಮುಂದಿವೆ. ರಾಜಾಸ್ತಾನದ ಬಿಜೆಪಿ ಸರ್ಕಾರವು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ತಿದ್ದುಪಡಿ ಪ್ರಸ್ತಾಪಗಳನ್ನು ಈಗಾಗಲೇ ಅನುಮೋದಿಸಿದೆ. ರಾಜಾಸ್ತಾನದ ಮಾದರಿಯನ್ನು ಅನುಸರಿಸುವಂತೆ ಪ್ರಧಾನ ಮಂತ್ರಿಗಳ ಕಾರ್ಯಾಲಯವು ಉಳಿದ ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದೆ.

ನವ ಉದಾರೀ ನೀತಿಗಳು (ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ) 1991ರಲ್ಲಿ ಆರಂಭವಾದ ಸಮಯದಿಂದಲೂ ದುಡಿಯುವ ಜನತೆ ಈ ನೀತಿಗಳ ವಿರುದ್ಧ ತಮ್ಮ ಪ್ರತಿರೋಧ ಒಡ್ಡಿದ್ದಾರೆ. ಕೆಲಸದಿಂದ ವಜಾ, ಪೋಲೀಸ್ ಮತ್ತು ಗೂಂಡಾಗಳಿಂದ ದೈಹಿಕ ಹಲ್ಲೆಗಳನ್ನೂ ಲೆಕ್ಕಿಸದೆ, ಯೂನಿಯನ್ ಕಟ್ಟಲು ಕಾರ್ಮಿಕರು ಹೋರಾಡಿರುವ ಘಟನೆಗಳು ದೇಶದ ಎಲ್ಲ ದೊಡ್ಡ ಕೈಗಾರಿಕಾ ಕೇಂದ್ರಗಳಲ್ಲೂ ನಡೆದಿವೆ. ಈ ನೀತಿಗಳಿಗೆ ಸಂಬಂಧಿಸಿ, ವಿಧಿವತ್ತಾಗಿ ಸ್ಥಾಪಿಸಿದ ಒಂದು ಯೂನಿಯನ್ ಇಲ್ಲದಿದ್ದ ಸ್ಥಳಗಳಲ್ಲೂ, ಫ್ಯಾಕ್ಟರಿ, ವಲಯ ಮತ್ತು ರಾಜ್ಯ ಮಟ್ಟದಲ್ಲೂ ಮುಷ್ಕರಗಳು ನಡೆದಿವೆ.

ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಅಖಿಲ ಭಾರತ ಫೆಡರೇಷನ್‌ಗಳು ಜಂಟಿ-ಯಾಗಿ ನಿರ್ಮಿಸಿಕೊಂಡ ಒಂದು ವೇದಿಕೆಯಡಿಯಲ್ಲಿ, ಈ ನೀತಿಗಳ ವಿರುದ್ಧವಾಗಿ ಅವಿರತ ಹೋರಾಟ ನಡೆಸಿದ ಶ್ರೇಯಸ್ಸು ಸಂಘಟಿತ ಟ್ರೇಡ್ ಯೂನಿಯನ್ ಚಳವಳಿಗೆ ಸಲ್ಲುತ್ತದೆ. ಈ ಹೋರಾಟದಲ್ಲಿ ಮುಂದಿಟ್ಟ ಹಕ್ಕೊತ್ತಾಯಗಳು ಕೇವಲ ಕಾರ್ಮಿಕರ ಸಮಸ್ಯೆಗಳಲ್ಲದೆ, ಎಲ್ಲ ವಿಭಾಗದ ಜನರ ದಿನ ನಿತ್ಯದ ಸಮಸ್ಯೆಗಳಿಗೆ ಸಂಬಂಧಿಸಿದ್ದವು. ಎಡ ನಿಲುವಿನ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಕೆಲವು ಅಖಿಲ ಭಾರತ ಫೆಡರೇಷನ್‌ಗಳು ಜಂಟಿಯಾಗಿ ಈ ಹೋರಾಟಗಳನ್ನು 1991ರಲ್ಲಿ ಆರಂಭಿಸಿದರೂ, ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಎಲ್ಲ ಅಖಿಲ ಭಾರತ ಫೆಡರೇಷನ್‌ಗಳನ್ನೂ ಒಟ್ಟಿಗೆ ಹೋರಾಟದ ಚೌಕಟ್ಟಿನೊಳಗೆ ತರುವುದು ಸೆಪ್ಟೆಂಬರ್ 2009ರಲ್ಲಿ ಸಾಧ್ಯವಾಯ್ತು. 12 ಅಂಶಗಳ ಒಂದು ಹಕ್ಕೊತ್ತಾಯಗಳ ಪಟ್ಟಿ ಭಾರತ ಸರ್ಕಾರ-ಕ್ಕೆ ಸಲ್ಲಿಕೆಯಾಗಿದೆ. ಯಾವ ಸರ್ಕಾರವೂ ಈ ಬಗ್ಗೆ ತುಟಿ ಬಿಚ್ಚಿಲ್ಲ.

1991 ರಿಂದಇಲ್ಲಿಯ ವರೆಗೆ ಒಟ್ಟು ಹದಿನೇಳು ದಿನಗಳ ಕಾಲದ ಅಖಿಲ ಭಾರತ ವ್ಯಾಪ್ತಿಯ ಹದಿನಾರು ಸಾರ್ವತ್ರಿಕ ಮುಷ್ಕರಗಳು ನಡೆದಿವೆ. 2015ರ ಸೆಪ್ಟೆಂಬರ್ 2 ರಂದು ನಡೆದ ಹದಿನಾರನೇ ಸಾರ್ವತ್ರಿಕ ಮುಷ್ಕರದಲ್ಲಿ, ಬಿಎಂಎಸ್ ಕೊನೆ ಗಳಿಗೆಯಲ್ಲಿ, ಸರ್ಕಾರಕ್ಕೆ ತನ್ನ ಆಶ್ವಾಸನೆಗಳನ್ನು ಕಾರ್ಯಗತಗೊಳಿಸಲು ಕಾಲಾವಕಾಶ ಕೊಡಬೇಕೆಂಬ ಕಾರಣ ಮುಂದಿಟ್ಟು, ಮುಷ್ಕರದಿಂದ ಹಿಂದೆ ಸರಿಯಿತು. ಈ ಮುಷ್ಕರದಲ್ಲಿ ಭಾಗವಹಿಸಿದ್ದ ಹದಿನೈದು ಕೋಟಿ ದುಡಿಯುವ ಮಂದಿಯ ಪೈಕಿ ಶೇ.40 ರಷ್ಟು ಕಾರ್ಮಿಕರು ಯಾವುದೇ ಯೂನಿಯನ್ನಿನ ಸದಸ್ಯರಾಗಿರಲಿಲ್ಲ. ಕಾರ್ಮಿಕರಲ್ಲಿ ಮಡುಗಟ್ಟಿದ್ದ ಆಕ್ರೋಶದಿಂದಾಗಿ ಮುಷ್ಕರ ವ್ಯಾಪ್ತಿ ಮತ್ತು ಯಶಸ್ಸು ಬಹಳ ದೊಡ್ಡ ಪ್ರಮಾಣದಲ್ಲಿತ್ತು.

ಸೆಪ್ಟೆಂಬರ್ 2,2015ರ ಮುಷ್ಕರದ ನಂತರ, ಮೋದಿ ಸರ್ಕಾರವು ಅನೇಕ ವಲಯಗಳಲ್ಲಿ ಸುಧಾರಣೆಗಳ ಜಾರಿ ಪ್ರಕ್ರಿಯೆಯನ್ನು ಚುರುಕುಗೊಳಿಸಿದೆ. 'ನಿಗದಿತ ಅವಧಿಯ ಉದ್ಯೋಗ' ವ್ಯವಸ್ಥೆಯನ್ನು ಜಾರಿ ಮಾಡುವುದಾಗಿ ಘೋಷಣೆ ಮಾಡಿದೆ. (ವಾಜಪೇಯಿ ಸರ್ಕಾರ ಇದನ್ನು ಚಾಲ್ತಿಗೊಳಿಸಿತ್ತು. ಎಡ ಪಕ್ಷಗಳ ಒತ್ತಾಯದಿಂದಾಗಿ ಯುಪಿಎ ಸರ್ಕಾರ ಅದನ್ನು ಕೈಬಿಟ್ಟಿತ್ತು.) ಈ ವ್ಯವಸ್ಥೆ ಜಾರಿಯಾದಲ್ಲಿ, ಕೆಲಸದ ಭದ್ರತೆ ಇಲ್ಲವಾಗುತ್ತದೆ ಮತ್ತು ಬೇಕೆಂದಾಗ ಕೆಲಸಕ್ಕೆ ಸೇರಿಸಿಕೊಳ್ಳುವುದು ಮತ್ತು ಬೇಡದಾಗ ಕಿತ್ತು ಹಾಕುವುದು ಕಾನೂನು ಸಮ್ಮತವಾಗುತ್ತದೆ.

ನವ ಉದಾರೀ ನೀತಿಗಳು ಜಾರಿಯಾದ ಇಪ್ಪತ್ತೈದು ವರ್ಷಗಳಲ್ಲಿ ಉಂಟಾದ ಈ ಪರಿಸ್ಥಿತಿಯಲ್ಲಿ, ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ನೌಕರರ ಅಖಿಲ ಭಾರತ ಫೆಡರೇಷನ್‌ಗಳ ಜಂಟಿ ವೇದಿಕೆಯು, ಸೆಪ್ಟೆಂಬರ್ 2, 2016 ರಂದು ಹದಿನೇಳನೇ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹೂಡುವ ತಯಾರಿಯಲ್ಲಿದೆ.

ದುಡಿಯುವ ಎಲ್ಲ ವಿಭಾಗಗಳ ಜನರನ್ನು ಕಾರ್ಮಿಕ ಚಳವಳಿಯ ವ್ಯಾಪ್ತಿಯೊಳಗೆ ತರಲು ಕಾರ್ಮಿಕ ಸಂಘಟನೆಗಳು ಬಹಳಷ್ಟು ಶ್ರಮಿಸಬೇಕಿದೆ. ಆದರೂ, ನವ ಉದಾರೀ ನೀತಿಗಳ ವಿರುದ್ಧ ಭಾರತದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಹೋರಾಟಗಳು, ಬಂಡವಾಳಶಾಹಿ ವರ್ಗದ ದಾಳಿಗೆ ಎದುರಾಗಿ ಹೋರಾಡುತ್ತಿರುವ ವಿಶ್ವದ ದುಡಿಯುವ ಜನತೆಯ ಹೋರಾಟದ ಒಂದು ಮುಖ್ಯವಾದ ಅಂಗವಾಗಿದೆ. ■

ಹಿರಿಯ ಕಾರ್ಮಿಕ ಮುಂದಾಳು ಆರ್. ಶ್ರೀನಿವಾಸ್ ಬಿಡುಗಡೆ





ಹಿರಿಯ ಕಾರ್ಮಿಕ ಮಂದಾಳು ಮತ್ತು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಆರ್.ಶ್ರೀನಿವಾಸ್ 16 ವರ್ಷಗಳ ದೀರ್ಘ ಸೆರೆವಾಸದ ನಂತರ ಆಗಸ್ಟ್ 15ರಂದು ಬಿಡುಗಡೆಯಾಗಿದ್ದಾರೆ. ನವ–ಉದಾರವಾದೀ ಅವಧಿಯಲ್ಲಿ ಬಂಡವಾಳ ಮತ್ತು ಶ್ರಮದ ನಡುವಿನ ವರ್ಗಸಂಘರ್ಷದ ಒಂದು ಜ್ವಲಂತ ಉದಾಹರಣೆಯಾಗಿ ಬಿಟ್ಟಿರುವ 'ಬಿಪಿಎಲ್ ಕೇಸ್'ನಲ್ಲಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದ ಆರ್.ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಟಿ.ಕೆ.ಎಸ್. ಕುಟ್ಟಿ ಸೇರಿದಂತೆ ಐದು ಮುಖಂಡರಿಗೆ ಜೀವಾವಧಿ ಶಿಕ್ಷೆಯಾಗಿತ್ತು. ಈ ನಡುವೆ ಟ್ರಯಲ್ ಕೋರ್ಟ್, ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟಿನಲ್ಲಿ ಕಾನೂನು ಸಮರ ಹಾಗೂ 16 ವರ್ಷಗಳ ಸೆರೆವಾಸದ ನಂತರ ಕಳೆದ ಜನವರಿ 26ರಂದು ಟಿ.ಕೆ.ಎಸ್ ಕುಟ್ಟಿ ಸೇರಿದಂತೆ ನಾಲ್ಕು ಮುಖಂಡರ ಬಿಡುಗಡೆಯಾಗಿತ್ತು. ಈ ಆಗಸ್ಟ್ 15ರಂದು ಆರ್.ಶ್ರೀನಿವಾಸ್ ಬಿಡುಗಡೆ ಹೊಂದಿದ್ದಾರೆ.

ಅಂದು ಮಧ್ಯಾಹ್ನದಿಂದಲೇ ನೂರಾರು ಕಾರ್ಮಿಕ ಸಂಘಟನೆಗಳ ಮತ್ತು ಇತರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಕಾರ್ಮಿಕ ಮುಖಂಡರಾದ ವಿಜೆಕೆ ನಾಯರ್, ಎಸ್.ವರಲಕ್ಷ್ಮಿ ಹಾಗೂ ಮೀನಾಕ್ಷಿ ಸುಂದರಂ ನೇತೃತ್ವದಲ್ಲಿ ಆರ್ಎಸ್ ಅವರನ್ನು ಸ್ವಾಗತಿಸಲು ಬೆಂಗಳೂರಿನ ಹೊರವಲಯದಲ್ಲಿರುವ ಸೆಂಟ್ರಲ್ ಜೈಲಿನ ಆವರಣದಲ್ಲಿ ಕಾದಿದ್ದರು. ಬಿಡುಗಡೆಯ ಕ್ರಮಗಳನ್ನು ಪೂರೈಸಿಕೊಂಡು ಸಂಜೆಯ ವೇಳೆಗೆ ಆರ್.ಶ್ರೀನಿವಾಸ್ ಜೈಲಿನ ದ್ವಾರದಿಂದ ಹೊರ ಬರುತ್ತಿದ್ದಂತೆ ಅವರಿಗೆ 'ಲಾಲ್ ಸಲಾಮ್'ನ ಘೋಷಣೆಗಳು ಮೊಳಗಿದವು. ನಂತರ ನಡೆದ ಸಭೆಯಲ್ಲಿ ಆರ್.ಶ್ರೀನಿವಾಸ್, ಟಿ.ಕೆ. ಎಸ್.ಕುಟ್ಟಿ ಮತ್ತು ರವಿನಂದಕುಮಾರ್, ಜಗದೀಶ್, ಆರ್. ರಮೇಶ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕರ್ತರನ್ನುದ್ದೇಶಿಸಿ ಮೀನಾಕ್ಷಿ ಸುಂದರಂ, ವರಲಕ್ಷ್ಮಿ ಹಾಗೂ ವಿಜೆಕೆ ನಾಯರ್ ಮತ್ತು ಸ್ವತಃ ಆರ್.ಶ್ರೀನಿವಾಸ್ ಮಾತಾಡಿದರು. ವಿಜೆಕೆ ನಾಯರ್ ಈ ಐತಿಹಾಸಿಕ ಬಿಪಿಎಲ್ ಹೋರಾಟದ ಕಿರು ಪರಿಚಯವನ್ನೂ ನೀಡಿದರು.

ಬೆಂಗಳೂರಿನ ಎಂಟು ಕಡೆಗಳಲ್ಲಿ ಒಟ್ಟು ಸುಮಾರು 4000 ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದ ಬಿಪಿಎಲ್ ಎಂಜಿನಿಯರಿಂಗ್ ಲಿಮಿಟೆಡ್ ಕಾರ್ಮಿಕರ, ಅದರಲ್ಲೂ ಮಹಿಳಾ ಕಾರ್ಮಿಕರ ಶೋಷಣೆಗೆ ಕುಖ್ಯಾತವಾಗಿದ್ದವು. ಈ ಕಾರ್ಮಿಕರು ಸಂಘಟಿತರಾಗದಂತೆ ತಡೆಯಲು ಮಾಲಿಕರು ಶತಪ್ರಯತ್ನ ನಡೆಸಿದರೂ, ಕೊನೆಗೂ ಸಿಐಟಿಯು ಮುಖಂಡರ ಪರಿಶ್ರಮದಿಂದ ಈ ಎಲ್ಲ ಘಟಕಗಳ ಕಾರ್ಮಿಕರನ್ನು ಪ್ರತಿನಿಧಿಸುವ ಬಿಪಿಎಲ್ ಕಾರ್ಮಿಕ ಸಂಘ ಅಸ್ತಿತ್ವಕ್ಕೆ ಬರುವುದನ್ನು ಅವರಿಗೆ ತಡೆಯಲಾಗಲಿಲ್ಲ. ಸಂಘದ ಸ್ಥಾಪನೆಯಾದ ನಂತರವೂ ಅದರ ನೋಂದಾವಣೆಯನ್ನು ರದ್ದು ಮಾಡಿಸಲು ಅವರು ನಡೆಸಿದ ಪ್ರಯತ್ನಗಳೂ ಸಫಲವಾಗಲಿಲ್ಲ. ಆದರೂ ನಂತರ ಆರ್. ಶ್ರೀನಿವಾಸ್ ನೇತೃತ್ವದಲ್ಲಿ ಆರಂಭವಾದ ಕಾರ್ಮಿಕರ ಸಮರಧೀರ ಹೋರಾಟವನ್ನು ಬಗ್ಗುಬಡಿಯುವ ಅವರ ಪ್ರಯತ್ನ ನಿಲ್ಲಲಿಲ್ಲ. ಈ ಹೋರಾಟದ ಸಂದರ್ಭದಲ್ಲಿ 1999ರ ಮಾರ್ಚ್ 25ರಂದು ನಡೆದ ಘಟನೆ ಮತ್ತು ನಂತರದ ಘಟನೆಗಳೂ ಅವರ ಈ ಪ್ರಯತ್ನದ ಭಾಗವೇ ಆಗಿದ್ದವು. ಅಂದು ಮುಷ್ಕರ ನಿರತ ಸಹೋದ್ಯೋಗಿಗಳ ಹೋರಾಟವನ್ನು ಧಿಕ್ಕರಿಸಿದ ಕಾರ್ಮಿಕರನ್ನು ಒಯ್ಯಲು ಮಾಲಿಕರು ನೇಮಿಸಿದ್ದ ಬಸ್ ಒಂದನ್ನು ತಡೆಯಲಾಯಿತು. ನಂತರ ಅದಕ್ಕೆ ಬೆಂಕಿ ಹಚ್ಚಿದ ದುರದೃಷ್ಟಕರ ಘಟನೆಯೂ ನಡೆಯಿತು, ಇಬ್ಬರು ಮಹಿಳಾ ಕಾರ್ಮಿಕರು ತೀವ್ರವಾಗಿ ಗಾಯಗೊಂಡು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಇದು ಕಾರ್ಮಿಕ ಸಂಘದ್ದೇ ಕೃತ್ಯ ಎಂದು ಆಪಾದಿಸಿ ಸಂಘದ ಅಧ್ಯಕ್ಷ ಆರ್. ಎಸ್. ಹಾಗೂ ಕಾರ್ಯದರ್ಶಿ ಕುಟ್ಟಿ ಸೇರಿದಂತೆ 47 ಮಂದಿಯನ್ನು ಬಂಧಿಸಲಾಯಿತು. ನಂತರ ಖಾಸಗೀ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿದ್ದ ಇಬ್ಬರು ಮಹಿಳಾ ಕಾರ್ಮಿಕರ ಸಾವು ಸಂಭವಿಸಿದಾಗ ಇದನ್ನು ಕೊಲೆ ಕೇಸಾಗಿ ಪರಿವರ್ತಿಸಲಾಯಿತು. ಕೇಸು ವಿಚಾರಣಾ ಕೋರ್ಟ್, ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟಿನ ವರೆಗೂ ಹೋಗಿ 42 ಕಾರ್ಯಕರ್ತರು ಆರೋಪ ಮುಕ್ತರಾದರು. ಐದು ಮಂದಿಗೆ ಮರಣದಂಡನೆ ವಿಧಿಸುವಂತೆ ಮಾಡುವ ಆಳುವ ಮಂದಿಯ ಪ್ರಯತ್ನ ಸಫಲವಾಗಲಿಲ್ಲ, ಆದರೆ ಜೀವಾವಧಿ ಶಿಕ್ಷೆ ಖಾಯಂ ಆಯಿತು. ಆದರೂ ಸುಪ್ರಿಂ ಕೋರ್ಟಿನ ತೀರ್ಪು ಕೂಡ ಈ ಇಡೀ ಪ್ರಕ್ರಿಯೆಯಲ್ಲಿ ಕಾನೂನಿನ ದೋಷಗಳಿವೆ ಎಂದು ಬೊಟ್ಟು ಮಾಡಿದೆ ಎಂಬುದು ಗಮನಾರ್ಹ.

ಕಾರ್ಮಿಕರ ಸಮರಧೀರ ಹೋರಾಟಕ್ಕೆ ನೇತೃತ್ವ ನೀಡಿದ್ದಕ್ಕಾಗಿ ಶಿಕ್ಷೆಗೆ ಗುರಿಯಾದಾಗ ಆರ್ಎಸ್ ಅವರಿಗೆ 53 ವರ್ಷ. ಈ ನಡುವೆ 16 ವರ್ಷಗಳ ಜೈಲುವಾಸದಿಂದ ಅನಾರೋಗ್ಯ ಉಂಟಾದರೂ ಈಗಲೂ ಅವರ ಸಮರಧೀರತೆಗೆ ಎಳ್ಳಷ್ಟೂ ಕುಂದು ಬಂದಿಲ್ಲ. ●

ರಿಯೋ ಒಲಿಂಪಿಕ್ಸ್ : ಕೊನೆಗೂ ಭಾರತಕ್ಕೆ ಎರಡು ಪದಕಗಳು

ಆಗಸ್ಟ್ 5 ರಂದು ಆರಂಭವಾದ 16 ದಿನಗಳ ರಿಯೊ ಒಲಿಂಪಿಕ್ಸ್ ಪಂದ್ಯಗಳಲ್ಲಿ 10 ದಿನಗಳಾದರೂ ಪದಕ ಪಟ್ಟಿಯಲ್ಲಿ ಭಾರತದ ಹೆಸರು ಕಾಣಿಸದ್ದು ಭಾರತೀಯರಲ್ಲಿ ಬಹಳ ನಿರಾಸೆ ಮೂಡಿಸಿತ್ತು. ಕೊನೆಗೂ ಇಬ್ಬರು ಮಹಿಳಾ ಕ್ರೀಡಾಪಟುಗಳು ಈ ನಿರಾಸೆಯನ್ನು ನೀಗಿಸಿದ್ದಾರೆ.

ಆಗಸ್ಟ್ 17ರಂದು 58ಕೆ.ಜಿ. ಮಹಿಳಾ ಫ್ರೀಸ್ಟೈಲ್ ಕುಸ್ತಿ ವಲಯದಲ್ಲಿ ಸೆಮಿ ಫೈನಲ್ ತಲುಪಿದ ಸಾಕ್ಷಿ ಮಲಿಕ್ ಕಂಚಿನ ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾಳೆ. ಭಾರತದ ಮಟ್ಟಿಗೆ ಆಕೆ ಕುಸ್ತಿಯಲ್ಲಿ ಒಲಿಂಪಿಕ್ಸ್ ಪದಕ ಪಡೆದ ಮೊದಲ ಮಹಿಳೆ ಎಂದು ದಾಖಲೆ ನಿರ್ಮಿಸಿದ್ದಾಳೆ.

ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ.ಸಿಂಧು ಫೈನಲ್ ತಲುಪಿದ್ದು ಭಾರತಕ್ಕೆ ಇನ್ನೊಂದು ಪದಕವನ್ನು ಖಚಿತಪಡಿಸಿದ್ದಾಳೆ. ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ಅದು ಚಿನ್ನವೋ, ಬೆಳ್ಳಿಯೋ ಎಂದು ತಿಳಿದಿರುತ್ತದೆ.

ಇದಕ್ಕೆ ಮೊದಲು ಜಿಮ್ನಾಸ್ಟಿಕ್ಸ್‌ನ ಬಹಳ ಕಠಿಣ ಸ್ಪರ್ಧೆಯಲ್ಲಿ ಫೈನಲ್ ತಲುಪಿ ಭಾರತದ ಮಟ್ಟಿಗೆ ದಾಖಲೆ ನಿರ್ಮಿಸಿದ್ದ ದೀಪಾ ಕರ್ಮಕಾರ್‌ಗೆ ಸ್ವಲ್ಪದರಲ್ಲೇ ಕಂಚಿನ ಪದಕ ಕೈತಪ್ಪಿ ಹೋಗಿ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

10ಮೀ. ಏರ್ ರೈಫಲ್ಸ್‌ನಲ್ಲಿ ಅಭಿನವ್ ಬಿಂದ್ರಾ 4ನೇ ಸ್ಥಾನ ಗಳಿಸಿದ್ದಾರೆ ಮತ್ತು ಟೆನಿಸ್‌ನಲ್ಲಿ ಸಾನಿಯಾ ಮಿರ್ಝಾ ಹಾಗೂ ರೋಹನ್ ಬೋಪಣ್ಣ ಜೋಡಿ ಮಿಶ್ರ ಡಬಲ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಉಳಿದಂತೆ ಭಾರತದ ಕ್ರೀಡಾಪಟುಗಳ ಸಾಧನೆ ಕಳಪೆ ಮಟ್ಟದಲ್ಲೇ ಇತ್ತು.

ಈ ಬಾರಿ ಅತಿ ಹೆಚ್ಚು ಕ್ರೀಡಾಪಟುಗಳನ್ನು ಕಳಿಸಿರುವುದಾಗಿ ಸರಕಾರ ಹೆಮ್ಮೆ ಪಟ್ಟುಕೊಂಡಿತ್ತು. ಕಳೆದ ಬಾರಿ 2012ರ ಲಂಡನ್ ಒಲಿಂಪಿಕ್ಸ್‌ಗೆ 83 ಕ್ರೀಡಾಪುಟುಗಳ ತಂಡವನ್ನು ಕಳಿಸಿದ್ದರೆ ಈ ಬಾರಿ, ಅದರ ಸುಮಾರು ಒಂದೂವರೆ ಪಟ್ಟು, 117 ಕ್ರೀಡಾಪಟುಗಳ ತಂಡವನ್ನು ಭಾರೀ ನಿರೀಕ್ಷೆಗಳನ್ನು ನಿರ್ಮಿಸಿ ಕಳಿಸಿ ಕೊಡಲಾಗಿತ್ತು. ಆದರೆ ಕಳೆದ ಬಾರಿ 2 ಬೆಳ್ಳಿಯ ಪದಕಗಳನ್ನು ಮತ್ತು ನಾಲ್ಕು ಕಂಚಿನ ಪದಕಗಳನ್ನು ಪಡೆಯಲು ಸಾಧ್ಯವಾಗಿದ್ದರೆ ಈ ಬಾರಿ ಬಹುಶಃ ಎರಡು ಪದಕಗಳಿಂದಲೇ ತೃಪ್ತಿ ಪಟ್ಟುಕೊಳ್ಳಬೇಕಾಗಿ ಬಂದಿದೆ.


ಭಾರತದ ಒಲಿಂಪಿಕ್ಸ್ ತಂಡದ 117 ಸದಸ್ಯರಲ್ಲಿ ಪುರುಷರ ಸಂಖ್ಯೆ 63, ಮಹಿಳೆಯರ ಸಂಖ್ಯೆ 54, ಆದರೂ ಮಹಿಳಾ ಕ್ರೀಡಾಪಟುಗಳೇ ಉತ್ತಮ ಸಾಧನೆ ಪ್ರದರ್ಶಿಸಿರುವುದು ಗಮನಾರ್ಹ.

ಒಟ್ಟಾರೆಯಾಗಿ ಭಾರತದ ತಂಡದ ನಿರಾಶಾದಾಯಕ ಪ್ರದರ್ಶನ ಮತ್ತೆ ದೇಶದಲ್ಲಿ ಆಟೋಟಗಳ ರಂಗದಲ್ಲಿ ನಿರ್ವಹಣೆಯಲ್ಲಿನ ಸಮಸ್ಯೆಗಳು ಮತ್ತು ಅದಕ್ಕಿಂತ ಹೆಚ್ಚಾಗಿ ಜನಾರೋಗ್ಯದ ಸಾರ್ವತ್ರಿಕ ಪ್ರಶ್ನೆಗಳತ್ತ ಗಮನ ಸೆಳೆದಿದೆ. ಭಾರತ ಜಾಗತಿಕ ರಂಗದಲ್ಲಿ ಒಂದು ದೊಡ್ಡ ಶಕ್ತಿಯಾಗಿ ಮೂಡಿ ಬರುತ್ತಿದೆ ಎಂದು ಜಿಡಿಪಿವಾಲಾಗಳು ಬೆನ್ನು ತಟ್ಟಿಕೊಳ್ಳುತ್ತಿರುವ 'ಒಳ್ಳೆಯ' ದಿನಗಳಲ್ಲಿ ಇದು ಇನ್ನೂ ಢಾಳಾಗಿ ಕಣ್ಣಿಗೆ ರಾಚುತ್ತಿದೆ.

ಇಂತಹ ದುಸ್ಥಿತಿಗೆ ಕಿರೀಟವಿಟ್ಟಂತೆ ಮೋದಿ ಸರಕಾರದ ಕ್ರೀಡಾ ಮಂತ್ರಿಗಳ ವರ್ತನೆ ಭಾರತ ಮತ್ತಷ್ಟು ತಲೆ ತಗ್ಗಿಸುವಂತೆ ಮಾಡಿದೆ. ರಿಯೋಡಿ ಜನೆರೊಗೆ ಭಾರತದ ಕ್ರೀಡಾಪಟುಗಳ ಮನೋಸ್ಥೈರ್ಯವನ್ನು ಹೆಚ್ಚಿಸಲೆಂದು ತನ್ನ ಎಂದಿನ ಚಮಚಾಗಳೊಂದಿಗೆ ಸರಕಾರೀ ಖರ್ಚಿನಲ್ಲಿ ಪಯಣಿಸಿದ ಈ ಮಹಾನುಭಾವನ ತಂಡದ ಈಗ ಕುಖ್ಯಾತವಾಗಿ ಬಿಟ್ಟಿರುವ 'ಗೋರಕ್ಷಕ'ರಂತಹ ವರ್ತನೆ ಒಲಿಂಪಿಕ್ ಸಂಘಟನಾ ಸಮಿತಿಯವರು ಭಾರತದ ತಂಡದ ಮುಖ್ಯಸ್ಥರಿಗೆ ಎಚ್ಚರಿಕೆ ಪತ್ರವನ್ನು ಕಳಿಸುವ ಮಟ್ಟದ ವರೆಗೆ ಇಳಿಯಿತು. ಇದಕ್ಕೆ ಮೊದಲು ಆತ ಪ್ರಧಾನ ಮಂತ್ರಿಗಳು ನಿರ್ಮಿಸಿದ ಸೆಲ್ಫಿ ಮಾದರಿಯನ್ನು ಜಾರಿಗೆ ತರುವ ಭರದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಲೇವಡಿಗೆ ಗು–ರಿಯಾಗಿದ್ದರು.

ಇದಕ್ಕೆ ಮೊದಲು ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ಸಾಮಾನ್ಯ ದರ್ಜೆಯ ವಿಮಾನ ಪ್ರಯಾಣ, ಜತೆಗೆ ಹೋಗುವ ಮ್ಯಾನೇಜರುಗಳಿಗೆ ಮಾತ್ರ ಮೇಲ್ದರ್ಜೆಯ ಪ್ರಯಾಣ ಸೌಲಭ್ಯ, ಕ್ರೀಡಾಪಟುಗಳ ಕೋಚ್‌ಗಳಿಗೆ ಅವಕಾಶ ನಿರಾಕರಣೆ ಮುಂತಾದವುಗಳು ಸಾರ್ವತ್ರಿಕ ಟೀಕೆಗೊಳಗಾಗಿದ್ದವು.

ಇಂತಹ ವಾತಾವರಣದಲ್ಲಿ ಭಾರತದ ಮಹಿಳಾ ಕ್ರೀಡಾಪಟುಗಳು ಎರಡು ಪದಕಗಳನ್ನಾದರೂ ತಂದಿದ್ದಾರೆ ಎಂಬುದಕ್ಕೆ ಸಂತೋಷ ಪಡಬಹುದು.









ಡೊಗ್ಗು ಸಲಾಮ್ ಹೊಡೆಯುವ ಮೋದಿ ಸರ್ಕಾರ: ಮೀನಾಕ್ಷಿ ಸುಂದರಂ



ಭಾರತೀಯರಾದ ನಾವು ವಿದೇಶಿ ವಸ್ತುಗಳನ್ನು ಕೊಂಡು ಬದುಕುವಂತಹ ಸ್ಥಿತಿ ನಿರ್ಮಾಣವಾಗಿದೆ. ನಾವು ಬಿತ್ತಿದ ಬೆಳೆಗಳನ್ನು ಸಹ ವಿದೇಶಿಯರಿಂದ ಪಡೆದು ತಿನ್ನಬೇಕಾಗಿದೆ, ಜೀವಜಲವಾದ ನೀರನ್ನು ಹಣಕೊಟ್ಟು ಕುಡಿಯುವ ಸ್ಥಿತಿ ಬಂದಿದೆ, ನೀರಿಗಾಗಿ ಕರ್ನಾಟಕ ಬಂದ್ ಆದರೂ ಸಹ ನಮ್ಮ ದೇಶದ ಪ್ರಧಾನಿಗಳಿಗೆ ಕಿವಿ ಕೇಳುವುದಿಲ್ಲ ಮತ್ತೊಂದೆಡೆ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಸೆಪ್ಟಂಬರ್ 2 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಮುಂದಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರೇ ನೀವು ಹೇಳಿದ ಅಚ್ಛೇದಿನ್ ಯಾರಿಗೆ ಬಂದಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಪ್ರಶ್ನಿಸಿದರು.

ಬೆಲೆ ಏರಿಕೆ ನಿಯಂತ್ರಣಕ್ಕೆ, ಕಾರ್ಮಿಕರ ಕಾನೂನುಗಳ ತಿದ್ದುಪಡಿ ವಿರೋಧಿಸಿ, ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಗೆ, ಉದ್ಯೋಗ ಸೃಷ್ಠಿಗೆ ಹಾಗೂ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ ಆಗಸ್ಟ್ 6 ಮತ್ತು 7ರಂದು ಎರಡು ದಿನ ನಡೆದ ಸಿಐಟಿಯುನ 5ನೇ ತುಮಕೂರು ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ತುಮಕೂರಿನ ಟೌನ್‌ಹಾಲ್ ವೃತ್ತದಲ್ಲಿ ಬಹಿರಂಗ ಸಭೆ ಹಮ್ಮಿಕೊಳ್ಳಲಾಗಿತ್ತು.

ಅನ್ನ ಬೆಳೆಯುವ ರೈತ ಸಣ್ಣಮಟ್ಟ ಸಾಲ ಮಾಡಿಕೊಂಡರೆ ಮನೆಯ ಬಾಗಿಲಿಗೆ ಬರುತ್ತಾರೆ. ಬ್ಯಾಂಕ್ ಅಧಿಕಾರಿಗಳು. ಸರ್ಕಾರ ಮಾತ್ರ ರೈತರ ಸಾಲ ಮನ್ನಾ ಮಾಡಲು ಹಿಂಜರಿಯುತ್ತದೆ. ಆದರೆ ಪ್ರದಾನಿ ಮೋದಿಯವರು ದೊಡ್ಡ ದೊಡ್ಡ ಬಂಡವಾಳಗಾರರ ಸಾವಿರಾರು ಕೋಟಿ ಬ್ಯಾಂಕ್‌ಗಳ ಸಾಲವನ್ನು ಮನ್ನಾ ಮಾಡುತ್ತಾರೆ. ಯಾರಿಗೆ ಬಂದಿದೆ ಅಚ್ಛೇದಿನ್ ಎಂದು ಮೀನಾಕ್ಷಿ ಸುಂದರಂ ಪ್ರಶ್ನಿಸಿದರು.

ಸಿಐಟಿಯುನ ರಾಜ್ಯ ಕಾರ್ಯದರ್ಶಿ ಕೆ.ಮಹಂತೇಶ್ ಮಾತನಾಡಿ ಶ್ರಮವಹಿಸಿ ದುಡಿಯುವ ಜನ ಎಷ್ಟೇ ದುಡಿದರೂ ಸಹ ಸಂಸಾರ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಜನತೆಯ ಸಮಸ್ಯೆಗಳ ಬಗ್ಗೆ ಮಾತನಾಡಬೇಕಾದ ಜನಪ್ರತಿನಿಧಿಗಳ ಆಸ್ತಿಯ ಮೌಲ್ಯಗಳು ಹೆಚ್ಚುತ್ತಿವೆ. ಕಲ್ಪತರ ನಾಡು ಎಂದೆ ಹೆಸರು ವಾಸಿಯಾಗಿರುವ ತುಮಕೂರು ಜಿಲ್ಲೆಯ ರೈತರು ತಾವು ಬೆಳೆಯುವ ತೆಂಗು, ಕೊಬ್ಬರಿ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರಿಗೆ ತಾವು ಬಿತ್ತಿದ ಬೆಳೆಗಳಿಗೆ ವೈಜ್ಞಾನಿಕ ಬೆಲೆಗಳನ್ನು ನಿಗದಿ ಮಾಡಿ ರೈತರನ್ನು ಪ್ರೋತ್ಸಾಹಿಸಬೇಕಾದ ಸರ್ಕಾರಗಳು ನೆಪಮಾತ್ರಕ್ಕೆ ರೈತ ಪರ ಎಂದು ಹೇಳಿಕೊಳ್ಳುತ್ತಿವೆ. ಬರೀ ವಿದೇಶ ಪ್ರಯಾಣ ಮಾಡಿಕೊಂಡು ದೇಶದ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿರುವ ನಮೋರವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ ಎಂದರು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ "ಜಿಲ್ಲೆಯಲ್ಲಿ ಕಾರ್ಖಾನೆಗಳ ಅಭಿವೃದ್ಧಿಯಲ್ಲಿ ಮಾಲೀಕರು ಯಾವ ರೀತಿಯ ಪಾತ್ರಗಳನ್ನು ವಹಿಸಬೇಕು. ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಜಿಲ್ಲೆಯ ಅಭಿವೃದ್ದಿಗೆ ಶ್ರಮಿಸುವ ನಿಟ್ಟಿನಲ್ಲಿ ಸಿಐಟಿಯು ಸಂಘಟನೆ ಬದ್ಧವಾಗಿ ಕಾರ್ಯನಿರ್ವಹಿಸುತ್ತದೆ. ಮಾಲೀಕರು ಯುವ ಕಾರ್ಮಿಕರನ್ನುದುಡಿಸಿಕೊಂಡು ಯಾವ ಭದ್ರತೆಗಳನ್ನು ನೀಡದೆ ಏಕಾ-ಏಕಿ ಕೆಲಸದಿಂದ ತೆಗೆಯುತ್ತಿದ್ದಾರೆ. ಜಿಲ್ಲೆಯ ಲೋಕಸಭಾ ಸದಸ್ಯರು, ಶಾಸಕರುಗಳು ಯಾರ ಹಿತಕಾಯುತ್ತಿದ್ದಾರೆ ಎಂದು ಪ್ರಶ್ನಿಸಿದರು.


ಸೈಯದ್‌ಮುಜೀಬ್


ಜಿ. ಕಮಲ


ಎ. ಲೋಕೇಶ್

ವೇದಿಕೆಯಲ್ಲಿದ್ದ ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಜಿ.ಕಮಲ, ಗುಲ್ಜಾರ್‌ಬಾನು ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಕಾರ್ಯದರ್ಶಿ ಬಿ. ಉಮೇಶ್, ಹಿರಿಯ ಕಾರ್ಮಿಕ ಮುಖಂಡ ಕೋದಂಡರಾಮು, ಗ್ರಾಮ ಪಂಚಾಯ್ತಿ ನೌಕರರ ಸಂಘದ ಎಚ್.ಡಿ.ನಾಗೇಶ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಹಮಾಲಿ ಕಾರ್ಮಿಕರ ಸಂಘದ ಸುಬ್ರಾಯಪ್ಪ, ಪುಟ್‌ಪಾತ್ ವ್ಯಾಪಾರಿಗಳ ಸಂಘದ ಇಬ್ರಾಹಿಂ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಎ. ಲೋಕೇಶ್, ಎಸ್.ಡಿ.ಪಾರ್ವತಮ್ಮ, ನಿಸಾರ್ ಅಹಮದ್ ಮಾತನಾಡಿದರು.

ಆರಂಭದಲ್ಲಿ ಸಿಐಟಿಯು ತಾಲ್ಲೂಕು ಅಧ್ಯಕ್ಷ ಷಣ್ಮುಗಪ್ಪ ಸ್ವಾಗತಿಸಿ ಲಕ್ಷ್ಮಣ್ ಮತ್ತು ಪುಷ್ಪ ಕ್ರಾಂತಿಗೀತೆಗಳನ್ನಾಡಿದರು ಇದಕ್ಕೂ ಮುನ್ನ ಸ್ವಾತಂತ್ರ್ಯ ಚೌಕದಿಂದ ಮುರಭವನದವರೆಗೆ ಕಾರ್ಮಿಕರ ಆಕರ್ಷಕವಾದ ಮೆರವಣಿಗೆ ನಡೆಯಿತು.

ಮೊದಲನೇ ದಿನ ಬಹಿರಂಗ ಸಭೆಯ ನಂತರ ಸಂಜೆ 4 ಗಂಟೆಗೆ ಹಿರಿಯ ಕಾರ್ಮಿಕ ಮುಖಂಡರಾದ ನಿಸಾರ್ ಅಹಮದ್ ಶಿರಾ ಹಾಗೂ ಟಿ.ಜಿ. ಶಿವಲಿಂಗಯ್ಯನವರ ಧ್ವಜಾರೋಹಣದೊಂದಿಗೆ ಸಮ್ಮೇಳನ ಆರಂಭವಾಯಿತು. ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಸಿಐಟಿಯು ಸಂದೇಶ ಮಾಸ ಪತ್ರಿಕೆಯ ಕಾರ್ಯನಿರತ ಸಂಪಾದಕರು ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಂತೇಶ್‌ರವರು ಉದ್ಘಾಟಿಸಿ ಮಾತನಾಡಿ "ಕೇಂದ್ರದ ತಪ್ಪು ಆಮದು ನೀತಿ ಹಾಗೂ ಅವೈಜ್ಞಾನಿಕ ಕೃಷಿ ನೀತಿಯಿಂದಾಗಿ ತೆಂಗು-ಕೊಬ್ಬರಿಯ ಬೆಲೆ ವಿಪರೀತ ಇಳಿಕೆಯಾಗಿದ್ದು ತೆಂಗು ಬೆಳೆಗಾರರ ಸಂಕಷ್ಟಕ್ಕೆ ಸರ್ಕಾರಗಳೇ ಹೊಣೆ ಎಂದು ಕಿಡಿಕಾರಿದರು.

ಅಸಂಘಟಿತ ಕಾರ್ಮಿಕರ ಪಿ.ಎಫ್ ಹಾಗೂ ಸಾಮಾಜಿಕ ಭದ್ರತೆ, ಪಿಂಚಣಿ ನೀಡುವ ಯೋಜನೆಗಳ ಜಾರಿಗೆ ಸಿಐಟಿಯು ನಿರಂತರ ಹೋರಾಡುತ್ತಿದೆ ಎಂದರು. ಸಮ್ಮೇಳನಕ್ಕೆ ಶುಭಕೋರಿ ಹಿರಿಯ ಕಾರ್ಮಿಕ ಮುಖಂಡ ಕೋದಂಡರಾಮು.ವಿ, ಕೊಳೆಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎ.ನರಸಿಂಹಮೂರ್ತಿ, ಡಿ.ವೈ.ಎಫ್.ಐನ ರಾಘವೇಂದ್ರ.ಎಸ್ ಮಾತನಾಡಿದರು. ದೇವರಾಯಪಟ್ಟಣದ ಹೋಟೆಲ್ ಮಾಲೀಕರ ಸಭಾಂಗಣದಲ್ಲಿ ಎರಡನೇ ದಿನ ನಡೆದ ಪ್ರತಿನಿಧಿಗಳ ಅಧಿವೇಶನದ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿದರು.

ಸಮ್ಮೇಳನವು ಮುಂದಿನ ಮೂರು ವರ್ಷಗಳ ಅವಧಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಜಿಲ್ಲಾಧ್ಯಕ್ಷರು : **ಸೈಯದ್‌ಮುಜೀಬ್,**
ಪ್ರಧಾನ ಕಾರ್ಯದರ್ಶಿ : **ಜಿ. ಕಮಲ,**
ಖಜಾಂಚಿ : **ಎ. ಲೋಕೇಶ್**

ಹಾಗೂ 35 ಜನ ಇರುವ ಜಿಲ್ಲಾ ಸಮಿತಿಯನ್ನು ಸಮ್ಮೇಳನ ಆಯ್ಕೆ ಮಾಡಿತು. ●

'ನಮ್ಮ ನಡಿಗೆ ಯಮನೂರ ಕಡಿಗೆ'........

ಪುಟ 16 ರಿಂದ

ಸ್ವಾತಂತ್ರ್ಯ......ಪೊಲೀಸರ ಲಾಠಿಗೆ ಬಂತು.....'. ಎಂಬ ಕವನದ ಸಾಲನ್ನು ಉಚ್ಚರಿಸಿ ನೈಜ ಸ್ವಾತಂತ್ರ್ಯವನ್ನು ಪಡೆಯಲು ನಾವು ಮುಂದಾಗಬೇಕಿದೆ ಎಂಬುದನ್ನ ಮನದಟ್ಟು ಮಾಡಿದರು. ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಮತ್ತು ಪೊಲೀಸ್ ದೌರ್ಜನ್ಯಕ್ಕೆ ಒಳಗಾದವರನ್ನು ಹೂಗಳನ್ನು ಎರಚಿ ಮತ್ತು ಗುಲಾಬಿ ಹೂ ನೀಡುವುದರ ಮುಖಾಂತರ ಗೌರವಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ "ರೈತ ಬೆಳೆದ ಉತ್ಪನ್ನಗಳನ್ನು ಮಾರಲು ಹೋದರೆ ಅಗ್ಗ, ಆದರೆ ಅದನ್ನೇ ಮತ್ತೆ ಕೊಳ್ಳಲು ಹೋದರೆ ತುಟ್ಟಿ. ಇದು ಯಾವ ಸೀಮೆ ನ್ಯಾಯ" ಎಂದು ಪ್ರಶ್ನಿಸಿದರು. ಅರಬ್ ರಾಷ್ಟ್ರಗಳಲ್ಲಿ ಪೆಟ್ರೋಲ್ ಬೆಲೆ ಇಳಿಕೆಯಾಗಿದ್ದರೂ ಕೂಡ ಮೋದಿ ಸರ್ಕಾರ, ಬೆಲೆ ಇಳಿಸಲು ತಯಾರಿಲ್ಲ, ಇದರಿಂದಾಗಿ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತವಾಗಿ ಏರುತ್ತಿವೆ, ರೈತರು ಬೆಳೆದ ಫಸಲುಗಳನ್ನು ಸರ್ಕಾರ ಕೊಳ್ಳುತ್ತಿಲ್ಲ. ಇದರ ಬದಲಾಗಿ ಅಮೇರಿಕದ ಕಂಪನಿಗಳಿಗೆ ಕೊಳ್ಳಲು ಬಿಟ್ಟಿದೆ, ಇವುಗಳು ಕೃತಕ ಅಭಾವ ಸೃಷ್ಟಿಸಿ ಬೆಲೆ ಏರಿಕೆಗೆ ಕಾರಣವಾಗುತ್ತಿದ್ದರೂ ದೇಶದ ಪ್ರಧಾನಿ ಮೋದಿ ಇವರನ್ನು ನಿಯಂತ್ರಿಸದೆ, ಒಂದು ಲಕ್ಷ 63 ಸಾವಿರ ಕೋಟಿ ಸಾಲ ಮನ್ನಾ ಮಾಡಿ ಕಂಪನಿಯವರಿಗೆ ಭಕ್ಷೀಸು ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಯಮನೂರಿನ ದೌರ್ಜನ್ಯಕ್ಕೆ ಆದೇಶ ನೀಡಿದ ಹಿರಿಯ ಅಧಿಕಾರಿ ಎಸ್.ಪಿ. ಯವರನ್ನು ಕೂಡಲೆ ಅಮಾನತು ಮಾಡಬೇಕು, ಅಮಾಯಕರಿಗೆ ಸೂಕ್ತ ಪರಿಹಾರ ನೀಡಲು ಸರ್ಕಾರ ಮುಂದಾಗಬೇಕೆಂದು ಅಗ್ರಹಿಸಿದರು.

ನವಲಗುಂದ:

ಕಾಲ್ನಡಿಗೆ ಜಾಥಾ ನವಲಗುಂದಕ್ಕೆ ಹೊರಟಿತು. ಮದ್ಯಾಹ್ನ ತಲುಪಿದ ಜಾಥಾ ಟಿ.ವಿ.ಕುರಹಟ್ಟಿ ಮತ್ತು ಲೋಕನಾಥ ಹೆಬಸೂರು ನಗರದ ವಿವಿದ ಬೀದಿಗಳಲ್ಲಿ ಸಂಚರಿಸಿ, ನವಲಗುಂದ-ನರಗುಂದ ಬಂಡಾಯದ ಹುತಾತ್ಮ ರೈತ ಸ್ತಂಭಕ್ಕೆ ಪುಷ್ಪ ಅರ್ಪಿಸುವುದರ ಮೂಲಕ ಗೌರವ ಸಲ್ಲಿಸಿ, ರೈತ ಭವನದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಪಕ್ಷಾತೀತ ಹೋರಾಟ ಸಮಿತಿಯ ಸುಭಾಷಚಂದ್ರಗೌಡ ಪಾಟೀಲರು ಕಾಲ್ನಡಿಗೆ ಜಾಥಾ ಹಾಗೂ ಸಭೆಯಲಿದ್ದ ಮುಖಂಡರನ್ನು ಸ್ವಾಗತಿಸಿ ಮಾತನಾಡಿದರು. 1980 ದಶಕದ ನವಲಗುಂದ-ನರಗುಂದ ಬಂಡಾಯದಂತೆ ಮತ್ತೊಂದು ಬಂಡಾಯ ಮಾಡಲಿಕ್ಕೆ ಬಂದಿದ್ದಾರೆ. 80 ರ ದಶಕದ ಹೋರಾಟದ ನೆನಪು ಮತ್ತು ಅದರಲ್ಲಿ ಭಾಗಿಯಾಗಿ ಕಣ್ಣಾರೆ ಕಂಡ ನೀವುಗಳು ಮತ್ತೆ ಬಂದಿರುವುದು ನಮಗೆ ಮತ್ತೆ ಸ್ಪೂರ್ತಿಯಾಗಿದೆ ಎಂದರು.

ಬಿ.ಎಸ್.ಸೊಪ್ಪಿನ್ ಮಾತನಾಡಿ ನವಲಗುಂದ-ನರಗುಂದ ಬಂಡಾಯದಲ್ಲಿ ಬಸಪ್ಪ ಲಕ್ಕುಂಡಿ ಪೋಲಿಸರ ಗುಂಡಿಗೆ ಬಲಿಯಾದರು. ನನ್ನ ವಿದ್ಯಾರ್ಥಿಯಾದ ಇವರನ್ನು ಕಳೆದು ಕೊಂಡೆ ಎಂದು ಭಾವುಕರಾದರು. ಮೋದಿಯ ಕೇಂದ್ರ ಸರ್ಕಾರ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರಗಳು ನೀರು ಮಾರಾಟ ಮಾಡುವ ಖಾಸಗೀಕರಣದ ಹುನ್ನಾರದಲ್ಲಿ ತೊಡಗಿವೆ, ಛತ್ತೀಸಘಡದ ಶಿವನಾಥ ನದಿಯನ್ನು ಕಂಪನಿಗಳಿಗೆ ಮಾರಾಟ ಮಾಡಿದ ಉದಾಹರಣೆ ನಮ್ಮೆದುರಿಗಿದೆ. ಎಂದು ಆರೋಪಿಸಿದರು. ಇಂತಹ ಸಂದರ್ಭಗಳಲ್ಲಿ ವಿಶಾಲ ತಳಹದಿ ಮ್ಯಾಗ ಐಕ್ಯ ಹೋರಾಟ ಕಟ್ಟದೆ ಹೋದರೆ ಮಹದಾಯಿ ನೀರು ಪಡೆಯಲು ನಾವು ಸಫಲವಾಗಲಾರೆವು ಎಂಬ ಅರಿವಿನೊಂದಿಗೆ ಬಹು ಐಕ್ಯ ಚಳುವಳಿಯನ್ನು ಕಟ್ಟಬೇಕೆಂದರು.

ಜಿ. ವಿ. ಶ್ರೀರಾಮರೆಡ್ಡಿರವರು "199 ಟಿಎಂಸಿಯಲ್ಲಿ 40-50 ಟಿಎಂಸಿ ನಮ್ಮ ರಾಜ್ಯದ ಪಾಲು ಇದೆ ಆದರೆ ಸದ್ಯಕ್ಕೆ 7.5 ಟಿಎಂಸಿ ನೀರು ಕೊಡಲು ಮುಂದಾಗಬೇಕೆಂದು ಅಗ್ರಹಿಸಿದರು.

'ನಮ್ಮ ನಡಿಗೆ ಯಮನೂರ ಕಡಿಗೆ ಕಾಲ್ನಡಿಗೆ ಜಾಥಾ'ದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದೊಂದಿಗೆ ಕಾರ್ಮಿಕ ಸಂಘ ಸಿಐಟಿಯು, ಯುವಜನರ ಸಂಘ ಡಿವೈಎಫ್‌ಐ ಹಾಗೂ ವಿದ್ಯಾರ್ಥಿಗಳ ಸಂಘ ಎಸ್‌ಎಫ್‌ಐನ ಕಾರ್ಯಕರ್ತರು ಜೊತೆ ಜೊತೆಗೆ ಹೆಜ್ಜೆ ಹಾಕಿದರು. ಭೀಮಸಿ ಕಲಾದಗಿ, ವಿ.ಪಿ.ಕುಲಕರ್ಣಿ, ಆರ್.ಎಸ್.ಬಸವರಾಜ್, ಕೆ. ನಾಗರಾಜ್, ಕೆ.ಎಚ್.ಪಾಟೀಲ, ಗಂಗಾದರ ಗಡಾದ, ಬಸವರಾಜ ಪೂಜಾರ, ಚನ್ನರಾಯಪ್ಪ, ರೇಣುಕಾ ಕಹಾರ, ಮಾರುತಿ ಅಂಬಿಗೇರ, ಮುಕ್ತಾನಂದ ಹಿರೆಮನಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ 300ಕ್ಕೂ ಹೆಚ್ಚು ಕಾರ್ಯಕರ್ತರು ಆಗಮಿಸಿ ಐತಿಹಾಸಿಕ ಪಾದಯಾತ್ರೆಯಲ್ಲಿ ಹೆಜ್ಜೆ ಮೂಡಿಸಿದರು. ●

ಕೇಳಿಸಿದ್ದು

ದುರ್ಬಲ ಮೂಲ ಸೌಕರ್ಯಗಳು ಹೂಡಿಕೆ ಮತ್ತು ಜಾಣ್ಮೆಯನ್ನು ಓಡಿಸಬಹುದು. ನಾವು ಸ್ಮಾರ್ಟ್ ಸಿಟಿ ಗುರಿ ಸಾಧಿಸುವ ಮಹಾತ್ವಾಕಾಂಕ್ಷೆಯಿಂದ ಬಹಳ ಬಹಳ ದೂರವಿದ್ದೇವೆ. ಇದು ಕ್ಯಾನ್ಸರನ್ನು 'ಬ್ಯಾಂಡ್-ಏಡ್' ನಿಂದ ಗುಣಪಡಿಸಲು ಪ್ರಯತ್ನಿಸಿದಂತೆ

– ನಾರಾಯಣ ಮೂರ್ತಿ
(ಇನ್ಫೋಸಿಸ್ ಸ್ಥಾಪಕ)

ನಮ್ಮ ಮರು-ಟ್ವೀಟ್

????Mental (@clumsy_tweeter)
Aug 15

ಎಂತಹ ಬೊಂಬಾಟ್ ಭಾಷಣ ಮೋದಿಯವರದ್ದು! ಅದರಿಂದಾಗಿ ನನಗೆ ಇನ್ನೊಂದು ಗಂಟೆ ಹೆಚ್ಚು ನಿದ್ದೆ ಮಾಡಲು ಸಾಧ್ಯವಾಯಿತು!

– ಪ್ರಧಾನಿ ಮೋದಿ ಅವರ ಕೆಂಪು ಕೋಟೆ ಭಾಷಣಕ್ಕೆ ಪ್ರತಿಕ್ರಿಯೆ

JANASHAKTHI KANNADA VARA PATRIKE AUG 28, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





‘ನಮ್ಮ ನಡಿಗೆ ಯಮನೂರ ಕಡಿಗೆ’

ಹುಬ್ಬಳ್ಳಿಯಿಂದ ನವಲಗುಂದಕ್ಕೆ ಕಾಲ್ನಡಿಗೆ ಜಾಥಾ

– ಮಾರುತಿ ಅಂಬಿಗೇರ



ಹುಬ್ಬಳ್ಳಿಯಲ್ಲಿರುವ ಡಾ॥ಬಿ.ಆರ್.ಅಂಬೇಡ್ಕರ್ ಮೂರ್ತಿಗೆ ಮಾಲಾರ್ಪಣೆ ಮಾಡಿ ‘ನಮ್ಮ ನಡಿಗೆ ಯಮನೂರ ಕಡಿಗೆ’ ಕಾಲ್ನಡಿಗೆ ಜಾಥಾಕ್ಕೆ ಆಗಸ್ಟ್ 14ರಂದು ಚಾಲನೆ ಕೊಡಲಾಯಿತು. ಉದ್ಘಾಟನಾ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ವಿ.ಶ್ರೀರಾಮರೆಡ್ಡಿ ರವರು “ಯಮನೂರು, ಅಳಗವಾಡಿ ಮತ್ತು ಅರೆಕುರಹಟ್ಟಿಯಲ್ಲಿ ನಡೆದ ಪೋಲೀಸರ ರಾಕ್ಷಸಿ ವರ್ತನೆ, ಮೇಲಿನವರ ಆದೇಶವಿಲದ್ದೆ ನಡೆದಿರುವುದಕ್ಕೆ ಸಾದ್ಯವಿಲ್ಲ, ತೋರಿಸಿ.... ತೋರಿಸಿ ಹೊಡೆಯಬೇಕಾದರೆ ಇದರ ಹಿಂದೆ ಇರಬೇಕಾದ ಪಿತೂರಿ ಏನು?...... 1972 ರ ನಂತರ ಹಲವು ಬಾರಿ ಲಾಠಿ ಚಾರ್ಜ್ ಮಾಡಿದನ್ನು ನೋಡಿದ್ದೇವೆ. ಆದರೆ ಇಂತಹ ಅಮಾನುಷ್ಯ ಕೃತ್ಯವನ್ನು ಕಂಡಿಲ್ಲ. 80 ವರ್ಷದ ಮುದುಕಿಗೆ ಥಳಿಸಿದ್ದಿರಿ, ಮಕ್ಕಳು ಮತ್ತು ಗರ್ಭಿಣಿಯರನ್ನದೆ ನಿಮ್ಮ ಪೋಲಿಸ ದರ್ಪವನ್ನು ತೋರಿಸಿದ್ದಿರಿ, ಅವರು ಯಾವ ಹೋರಾಟಕ್ಕೆ ಹೋಗಿದ್ದರು? ಯಾವ ಗಲಭೆ ಮಾಡಿದ್ದರು? ಎಂತಹ ಕಛೇರಿಗೆಗಳಿಗೆ ಹಾನಿ ಮಾಡಿದ್ದರು? ಹೇಳಿ” ಎಂದು ಖಾರವಾಗಿ ಪ್ರಶ್ನಿಸಿದರು. ಆದರೆ ಈಗ ವಿಪರಾಸ್ಯವೆಂದರೆ ನ್ಯಾಯಾಲಯ ಷರತ್ತು ಬದ್ದ ಜಾಮೀನು ನೀಡಿದ್ದು, ವಾರಕೊಮ್ಮೆ ಪೋಲಿಸ್ ಠಾಣೆಗೆ ಹಾಗೂ 15 ದಿವಸಕೊಮ್ಮೆ ಕೋರ್ಟಿಗೆ ಹಾಜರಾಗಬೇಕು ಮತ್ತು ಜಿಲ್ಲೆ ಬಿಟ್ಟು ಹೊರಗೆ ಹೋಗುವಂತ್ತಿಲ್ಲ.......! ಎಂದು ಹೇಳಿರುವುದು ಯಾವ ಸೀಮೆ ಜಾಮೀನು? ಅದಕ್ಕಿಂತ ಜೈಲಿನಲ್ಲಿರಿವುದೇ ಎಷ್ಟೋ ವಾಸಿ ಎಂದು ತರಾಟೆಗೆ ತೆಗೆದುಕೊಂಡು, ಇಂತಹ ಕೃತ್ಯವನ್ನು ನಾವು ಬಲವಾಗಿ ಖಂಡಿಸುತ್ತೇವೆ ಎಂದರು.

ಉತ್ತರ ಕರ್ನಾಟಕದ ಬಹುಜನರ ಕುಡಿಯುವ ನೀರಿನ ಸಮಸ್ಯೆ ನೀಗುವ ಕಳಸಾ–ಬಂಡೂರಿ ಯೋಜನೆ ಜಾರಿಗಾಗಿ ಕಳೆದ ಸುಮಾರು ಮೂರು ವರ್ಷಗಳಿಂದ ಹೋರಾಟ ನಡೆಯುತ್ತಿದ್ದರೂ, ಹಾಗೂ 13–14 ತಿಂಗಳುಗಳಿಂದ ನಿರಂತರ ಹೋರಾಟ ತೀವ್ರವಾಗಿದ್ದರೂ, ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ಸರ್ಕಾರಗಳು ಸ್ಪಂದಿಸದೆ ಇದ್ದಿದ್ದು ಮತ್ತು ಜೊತೆಗೆ ಬೆಂಕಿಗೆ ತುಪ್ಪ ಸುರಿದ ಹಾಗೆ ನ್ಯಾಯಾಂಗದ ಮಧ್ಯಂತರ ತೀರ್ಪು ಕೂಡ ವ್ಯತಿರಿಕ್ತವಾಗಿ ಬಂದಿದ್ದು ಜನರ ಸಹನೆಯ ಕಟ್ಟೆಯೊಡೆದು, ಆಕ್ರೋಶ ಮುಗಿಲು ಮುಟ್ಟಲು ಕಾರಣವಾಗಿತ್ತು. ಕಾಂಗ್ರೆಸ್‌ನ ಹೋಣೆಗೇಡಿತನ ಮತ್ತು ಬಿಜೆಪಿಯ ಕೀಳುಮಟ್ಟದ ರಾಜಕಾರಣ ಸಹ ಇದರಲ್ಲಿ ಅಡಗಿವೆ ಎಂದು ಕಿಡಿ–ಕಾರಿದರು.

ಪ್ರಧಾನಿ ನರೇಂದ್ರ ಮೋದಿ 3 ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಸಂದಾನ ಮಾಡಿಸಿ 3–4 ಟಿಎಂಸಿ ನೀರು ಕೊಡಿಸಿದ್ದರೆ ಈ ಸಮಸ್ಯೆ ತಕ್ಕಮಟ್ಟಿಗಾದರೂ ಬಗೆಹರಿಯುತ್ತಿತ್ತು. ಇನ್ನಾರು ತಿಂಗಳಲ್ಲಿ ಬರುವ ಗೋವಾ ಚುನಾವಣೆಗಾಗಿ ರಾಜ್ಯದ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ನಿರ್ಲಕ್ಷಿಸಿ ಮೂರನೇ ದರ್ಜೆಯ ರಾಜಕಾರಣ ಮಾಡುತ್ತಿದ್ಧಾರೆ ಎಂದು ಆರೋಪಿಸಿದರು. ಯಾರು ಈ ಸಮಸ್ಯೆಯನ್ನು ಬಗೆಹರಿಸಬೇಕಿತ್ತೋ ಅವರೆ ಸಬೂಬು ಹೇಳುತ್ತಾ ಇರುವುದು ಇವರು ಜನರಿಗೆ ಮಾಡುತ್ತಿರುವ ಬಹುದೊಡ್ಡ ಮೋಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅವರು ರಾಜ್ಯ ಸರಕಾರದ ಹೋಣೆಗೇಡಿತನವನ್ನು ಸಹ ಬಿಚ್ಚಿಟ್ಟರು, ಟ್ರಿಬುನಲ್ ರಚನೆಯಾದ ಕೂಡಲೇ ಮದ್ಯಂತರ ಆದೇಶ ಕೇಳಬೇಕೆಂದು ಹಲವು ಬಾರಿ ಕೇಳಿಕೊಂಡರೂ ನಿರ್ಲಕ್ಷಿಸಿ ತುಂಬಾ ತಡವಾಗಿ ಅಂತಿಮ ತೀರ್ಪು ಬರುವ ಮುನ್ನ ಅವೈಜ್ಞಾನಿಕ ರೀತಿಯಲ್ಲಿ ಅರ್ಜಿ ಹಾಕಿರುವುದು ಇಂತಹ ಹಿನ್ನಡೆಗಳಿಗೆ ಕಾರಣವಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಮಾತನಾಡಿ “ಪೋಲಿಸರ ಇಂತಹ ದೌರ್ಜನ್ಯವನ್ನು ಸಹಿಸಲು ಆಗದು, ರೈತರು ನೀರು ಕೇಳಿದರೆ ಲಾಠಿ ನೀಡುವ ನೀವು ಕೂಡ ರೈತರ ಮಕ್ಕಳೇ ಎಂಬುದು ನೆನೆಪಿರಬೇಕು ಎಂದು ಪೊಲೀಸರಿಗೆ ಛಾಟಿ ಬೀಸಿದ ಅವರು, ಅಮಾಯಕರು, ಮಕ್ಕಳು ಹಾಗೂ ಮಹಿಳೆಯರ ಮೇಲಿನ ಅಮಾನುಷ್ಯ ಪೊಲೀಸ್ ದೌರ್ಜನ್ಯವನ್ನು ಬಲವಾಗಿ ಖಂಡಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅರೆಸೇನಾಪಡೆ ಹಾಗೂ ಪೋಲಿಸರನ್ನು ದುರ್ಬಳಕೆ ಮಾಡಿಕೊಂಡು ಅನ್ಯಾಯದ ವಿರುದ್ದ ಹೋರಾಡುವವರ ಧ್ವನಿ ಕುಗ್ಗಿಸಲು ಹೊರಟಿರುವುದು ಅವರ ಇಬ್ಬಂದಿತನವನ್ನು ತೊರಿಸುತ್ತದೆ ಎಂದು ಕಿಡಿಕಾರಿ, ಇದರ ಲಾಭ ಪಡೆಯಲು ಹೊಂಚು ಹಾಕಿ ಕುಳಿತಿರುವ ಬಿಜೆಪಿ ಗ್ರಾಮಗಳಲ್ಲಿ ಜಾತಿ ಮತ್ತು ಕೋಮು ಗಲಭೆ ಹುಟ್ಟುಹಾಕಲು ಹವಣಿಸುತ್ತಿದೆ ಎಂದು ಆರೋಪಿಸಿದರು. ಹುಬ್ಬಳ್ಳಿ ಜನರ ಕುಡಿಯುವ ನೀರಿಗಾಗಿ ನವಲಗುಂದ ಸುತ್ತಮುತ್ತಲಿನ ರೈತರು ಜೈಲಿಗೆ ಹೋಗಿದ್ದಾರೆ ಅದನ್ನು ಮಹಾನಗರದ ಜನತೆ ಅರಿತು ಅವರಿಗೆ ಬೆಂಬಲವಾಗಿ ನಿಲ್ಲಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಹೇಶ ಪತ್ತಾರ ಮಾತನಾಡಿದರು, ವೇದಿಕೆಯ ಮೇಲೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಯು. ಬಸವರಾಜ್, ಎಸ್‌ಎಫ್‌ಐ ನ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಪೂಜಾರ, ಡಿವೈಎಫ್‌ಐ ನ ಜಿಲ್ಲಾ ಮುಖಂಡರಾದ ಬಸವರಾಜ ಕೋರಿಮಠ ಹಾಗೂ ಮತ್ತಿತರರಿದ್ದರು.

ನಂತರ ಅಂಬೇಡ್ಕರ್ ಸರ್ಕಲ್‌ನಿಂದ ಹೊರಟು, ಸಂಗೊಳ್ಳಿ ರಾಯಣ್ಣ ಹಾಗೂ ಕಿತ್ತೂರಿನ ರಾಣಿ ಚನ್ನಮ್ಮ ಪ್ರತಿಮೆಗಳಿಗೆ ಹೂಮಾಲೆಗಳನ್ನು ಹಾಕಿ ಗೌರವ ಸೂಚಿಸಿದ ಜಾಥಾ ಯಮನೂರ ಕಡೆಗೆ ಹೆಜ್ಜೆ ಹಾಕಿತು, ರಸ್ತೆಯ ಉದ್ದಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ದ ಘೋಷಣೆ ಮೊಳುಗುತ್ತಿದ್ದವು ಹಾಗೂ ಮೆರವಣಿಗೆಯಲ್ಲಿ ಕ್ರಾಂತಿಗೀತೆಗಳ ಕಲರವದೊಂದಿಗೆ ವಿದ್ಯಾರ್ಥಿ–ಯುವಜನರು, ರೈತ–ಕಾರ್ಮಿಕರು, ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಕೈಯಲ್ಲಿ ಶ್ವೇತ ಪತಾಕೆ ಮತ್ತು ಕೆಂಬಾವುಟಗಳನ್ನು ಹಿಡಿದು ದಾ–ರಿಯುದ್ದಕ್ಕೂ ಬಹು ಹುಮ್ಮಸ್ಸಿನಿಂದ, ಸರ್ಕಾರಗಳಿಗೆ ಎಚ್ಚರಿಕೆ ನೀಡಲು ಎಂಬಂತಿತ್ತು.

ಮಧ್ಯಾಹ್ನ ಹುಬ್ಬಳ್ಳಿಯಿಂದ 8 ಕಿ.ಮಿ. ದೂರದಲ್ಲಿರುವ ಶಿದ್ದಾರೋಡ ಮಠದಲ್ಲಿ ಲಘು ಉಪಹಾರ ಸೇವಿಸಿ ನಂತರ ಹೆಬಸೂರ ಕಡೆಗೆ ಹೊರಟು ಸಂಜೆ ತಲುಪಿತು, ಹೆಬಸೂರ ಗ್ರಾಮದ ನಾಗರಿಕರಾದ ಸುರೇಶ ಮುದರೆಡ್ಡಿ, ಹಾಗೂ ರಾಮಣ್ಣ ಕಾಲವಾಡ ಬಸ್ಸ್ ನಿಲ್ದಾಣದಲ್ಲಿರುವ ಮಹಾತ್ಮ ಗಾಂಧಿ ಸ್ಮಾರಕದ ಬಳಿ ಸ್ವಾಗತ ಕೋರಿ ಮಾತನಾಡಿದರು ಮತ್ತು ಅಲ್ಲಿ ಬಹಿರಂಗ ಸಭೆಯಲ್ಲಿ ಜಾಥಾದ ನೇತೃತ್ವ ವಹಿಸಿದ್ದ ಸಂಗಾತಿಗಳು ಜಿ.ವಿ.ಶ್ರೀರಾಮರೆಡ್ಡಿ, ಮಾರುತಿ ಮಾನ್ಪಡೆ ಮತ್ತು ಬಿ.ಎಸ್.ಸೊಪ್ಪಿನ ಮಾತನಾಡಿದರು. ರಾತ್ರಿ ಊಟ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ಅಗಸ್ಟ್ 15ರ ಬೆಳಿಗ್ಗೆ ಹೆಬಸೂರ ಗ್ರಾಮದ ಗಾಂಧಿ ಪ್ರತಿಮೆ ಬಳಿ ಹಲವು ಕ್ರಾಂತಿಗೀತೆಗಳು ಸ್ವಾತಂತ್ರ್ಯದ ಕಿಚ್ಚನ್ನು ಬಡಿದೆಬ್ಬಿಸುತ್ತಿದ್ದವು. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಧ್ವಜಾರೋಹಣದ ನಂತರ ಬಿ. ಎಸ್. ಸೊಪ್ಪಿನ್ ವಿದ್ಯಾರ್ಥಿ–ಯುವಜನರು ಮತ್ತು ಶಿಕ್ಷಕರನ್ನು ಉದ್ದೇಶಿಸಿ ಸ್ವಾತಂತ್ರ್ಯ ದಿನದ ಮಹತ್ವ ಹಾಗೂ ಅದನ್ನು ಪಡೆಯಲು ತ್ಯಾಗ ಬಲಿದಾನ ಮಾಡಿದ ಹುತಾತ್ಮರ ಹಾಗೂ ಮಹನಿಯರ ಕುರಿತು ಹಾಗೂ ಹೋರಾಟದ ಅವಶ್ಯಕತೆಯನ್ನು ನೆನಪಿಸಿದರು, ಮತ್ತೆ ಅಲಿಂದ ಹೊರಟ ಕಾಲ್ನಡಿಗೆ ಜಾಥಾ ಅರೆಕುರಹಟ್ಟಿಕಡೆಗೆ ನಡೆಯಿತು.

ಅರೆಕುರಹಟ್ಟಿ:

ಕಾಲ್ನಡಿಗೆ ಜಾಥಾ ಅರೆಕುರಹಟ್ಟಿ ತಲುಪಿದ ನಂತರ ಅಲ್ಲಿ ಕೆ.ಎಚ್.ಲಕ್ಕಣ್ಣವರ ಸ್ವಾಗತಿಸಿದರು, ಬೆಳಿಗಿನ ತಿಂಡಿಯನ್ನು ಎಲ್ಲರಿಗೂ ಅಚ್ಚುಕಟ್ಟಾಗಿ ಪೂರೈಸಲಾಗಿತ್ತು, ನಂತರ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾದ ಅರೆಕುರಹಟ್ಟಿ ರೈತರನ್ನು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹೂಮಾಲೆ ಹಾಕಿ ಗೌರವಿಸಲಾಯಿತು. ಆ ಕಾರ್ಯಕ್ರಮದಲ್ಲಿ ಮಾತಾನಾಡಿದ ಜಿ.ವಿ.ಶ್ರೀರಾಮರೆಡ್ಡಿ ಲಕ್ಷಾಂತರ ಜನ, ದೇಶಕ್ಕಾಗಿ ನೇಣುಗಂಬಕ್ಕೇರಿದ್ದಾರೆ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಜೈಲಿಗೆ ಹೋಗಿ ಬಂದ ನೀವುಗಳು ಅಪರಾಧಿಗಳಲ್ಲ, ಅಮಾಯಕರು ಮತ್ತು ಹೋರಾಟಗಾರರು, ನಿಮಗೆ ಅಪರಾಧಿ ಎಂಬ ಮನೋಬಾವನೆ ಕಾಡಬಾರದು ನಿಮ್ಮ ಬೆಂಬಲಕ್ಕೆ ನಾವು ಇದ್ದೇವೆ. ರಾಜ್ಯದ ವಿವಿದ ಜಿಲ್ಲೆಗಳಿಂದ ಬಂದಿದೇವ್ದೆ ನಿಮ್ಮ ನ್ಯಾಯಯುತ ಹೋರಾಟ ಮುಂದುವರೆಯಲಿ ಎಂದರು.

ಯಮನೂರು:

ತಲುಪಿದ ಜಾಥಾ ಕಲ್ಮೇಶ್ವರ ದೇವಸ್ಥಾನದ ಅವರಣದಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡಿದ ಜಿ.ವಿ.ಶ್ರೀರಾಮರೆಡ್ಡಿ ರಾಜ್ಯ ಸರ್ಕಾರದ ನಿಯೋಗ ದೆಹಲಿಯಲ್ಲಿ ಮೋದಿಯನ್ನು ಭೇಟಿಯಾದಾಗ ದೇಶದ ಪ್ರಧಾನಿಯಾಗಿ ವರ್ತಿಸದೆ, ಬಿಜೆಪಿ ನಾಯಕರುಗಳಂತೆ ವರ್ತಿಸಿದ್ದು ಖಂಡನಿಯ. ಗೋವಾದ ಕಾಂಗ್ರೆಸ್ಸಿಗರನ್ನು ಮೊದಲು ಒಪ್ಪಿಸಿ ನಂತರ ಮಾತುಕತೆಗೆ ಬನ್ನಿ ಎಂದು ಹೇಳಿರುವುದು ನಾಚಿಕೆಗೇಡಿನ ಸಂಗತಿ. ಕರ್ನಾಟಕವನ್ನು ಬಿಟ್ಟು ಉಳಿದ ಎರಡು ರಾಜ್ಯಗಳಲ್ಲಿ ಅಡಳಿತ ಮಾಡುತ್ತಿರುವರು ಬಿಜೆಪಿಯ ಮುಖ್ಯಮಂತ್ರಿಗಳೇ ಹೊರತು ಬೇರೆ ಯಾವ ಪಕ್ಷದವರಲ್ಲ ಎಂದು ಮೋದಿಯ ಇಬ್ಬಂದಿತನವನ್ನು ಬಯಲು ಮಾಡಿದರು.

ನಿಯೋಗದ ನೇತೃತ್ವ ವಹಿಸಿದ್ದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಳುವ ದೈರ್ಯ ಮಾಡಲಿಲ್ಲ, ಬಾಯಿ ಬಿಚ್ಚಲಿಲ್ಲ ಎಂದು ತರಾಟೆಗೆ ತೆಗೆದುಕೊಂಡು ದಲಿತ ಕವಿ ಸಿದ್ದಲಿಂಗಯ್ಯನವರು ರಚಿಸಿದ ‘ಯಾರಿಗೆ ಬಂತು ಎಲ್ಲಿಗೆ ಬಂತು 47 ರ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**